# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಆಗಸ್ಟ್ 02, 2020

ಸಂಪುಟ : 47   ಸಂಚಿಕೆ : 84   ದೂರವಾಣಿ : 254736   ವಾಟ್ಸ್ಆ್ಯಪ್ : 91642 99999   ಪುಟ : 8   ರೂ : 4.00   www.janathavani.com   Email: janathavani@mac.com


## ಅಯೋಧ್ಯೆ ಮಂದಿರ ಭೂಮಿ ಪೂಜೆ ವೇಳೆ ರಾಮ ಮಂತ್ರಕ್ಕೆ ಕರೆ

ಚೆನ್ನೈ, ಆ. 1 – ಅಯೋಧ್ಯೆಯ ರಾಮ ಜನ್ಮಭೂಮಿ ಸ್ಥಳದಲ್ಲಿ ಆಗಸ್ಟ್ 5ರಂದು ದೇವಾಲಯಕ್ಕೆ ಭೂಮಿ ಪೂಜೆ ನೆರವೇರುವಾಗ ರಾಮ ಮಂತ್ರ ಹಾಗೂ ಶ್ಲೋಕಗಳನ್ನು ಪಠಿಸು ವಂತೆ ಶ್ರೀ ಕಂಚಿ ಕಾಮಕೋಟಿ ಪೀಠ ಕರೆ ನೀಡಿದೆ. ಕಂಚಿ ಪೀಠದ (5ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 153' 10 ಇಂಚು
ಒಳ ಹರಿವು : 1468 ಕ್ಯೂಸೆಕ್ಸ್
ಹೊರ ಹರಿವು : 2279 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 145' 0 ಅಡಿ



ಸಹೋದರರಿಗಾಗಿ ರಾಖಿಯ ಆಯ್ಕೆಯಲ್ಲಿ ತಲ್ಲೀನಾಳಾಗಿರುವ ಬಾಲೆ.

**ಅಣ್ಣ-ತಂಗಿಯರ ಈ ಬಂಧ ಜನ್ಮ ಜನ್ಮದ ಅನುಬಂಧ ಈ ರಕ್ಷಾಬಂಧನ**

# 11 ಲಕ್ಷ ಕೋ.ರೂ.ಗಳ ಮೊಬೈಲ್ ಉತ್ಪಾದನೆ

ನವದೆಹಲಿ, ಆ. 1 - ಆಪಲ್, ಸ್ಯಾಮ್‌ಸಂಗ್, ಲಾವಾ, ಡಿಕ್ಸಾನ್ ಸೇರಿದಂತೆ 22 ದೇಶೀಯ ಹಾಗೂ ವಿದೇಶಿ ಕಂಪನಿಗಳು ಭಾರತದಲ್ಲಿ ಮುಂದಿನ ಐದು ವರ್ಷಗಳಲ್ಲಿ 11 ಲಕ್ಷ ಕೋಟಿ ರೂ.ಗಳ ಮೊಬೈಲ್ ಉತ್ಪಾದನೆಯ ಪ್ರಸ್ತಾಪವನ್ನು ಮುಂದಿಟ್ಟಿರುವುದಾಗಿ ಕೇಂದ್ರ ಟೆಲಿಕಾಂ ಹಾಗೂ ಐ.ಟಿ. ಸಚಿವ ರವಿ ಶಂಕರ್ ಪ್ರಸಾದ್ ಹೇಳಿದ್ದಾರೆ.

**ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲೇ ಮೊಬೈಲ್ ಉತ್ಪಾದಿಸಲು 22 ಕಂಪನಿಗಳ ಪ್ರಸ್ತಾವನೆ**

ಭಾರತದಲ್ಲೇ ಮೊಬೈಲ್ ಉತ್ಪಾದಿಸುವಂತಾಗಲು ಕೇಂದ್ರ ಸರ್ಕಾರ 41 ಸಾವಿರ ಕೋಟಿ ರೂ.ಗಳ ಉತ್ಪಾದನೆ ಆಧರಿತ ಉತ್ತೇಜನ (ಪಿ.ಎಲ್.ಐ.) ಯೋಜನೆ ರೂಪಿಸಿದ್ದು, ಅದರ ಅಡಿಯಲ್ಲಿ ಈ ಪ್ರಸ್ತಾವನೆಗಳು ಬಂದಿವೆ. ಸರ್ಕಾರದ ಪ್ರಸ್ತಾವನೆಯಿಂದ 3 ಲಕ್ಷ ಉದ್ಯೋಗಗಳು ನೇರವಾಗಿ ಹಾಗೂ 9 ಲಕ್ಷ ಉದ್ಯೋಗಗಳು ಪರೋಕ್ಷವಾಗಿ ಸೃಷ್ಟಿಯಾಗಲಿವೆ ಎಂದು ಪ್ರಸಾದ್ ಹೇಳಿದ್ದಾರೆ.

ಇದರಿಂದಾಗಿ ಮೊಬೈಲ್ ವಲಯದಲ್ಲಿ ಪ್ರಸಕ್ತ ಆಗುತ್ತಿರುವ ಮೌಲ್ಯ ವರ್ಧನೆಯಾದ ಶೇ.15-20 ಮುಂದಿನ ದಿನಗಳಲ್ಲಿ ಶೇ.35-40ಕ್ಕೆ ಹೆಚ್ಚಲಿದೆ ಹಾಗೂ ಎಲೆಕ್ಟ್ರಾನಿಕ್ಸ್ ಉಪಕರಣಗಳ ಮೌಲ್ಯವರ್ಧನೆ ಶೇ.45-50ಕ್ಕೆ ಹೆಚ್ಚಲಿದೆ ಎಂದು ಅವರು ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ 11 ಲಕ್ಷ ಕೋಟಿ ರೂ.ಗಳ ಭಾರೀ ಪ್ರಮಾಣದ ಮೊಬೈಲ್ ಉತ್ಪಾದನೆ ದೇಶದಲ್ಲಿ ನಡೆಯಲಿದೆ. ಇದಕ್ಕಾಗಿ ಅರ್ಜಿ ಸಲ್ಲಿಸಿದ ಎಲ್ಲ ಕಂಪನಿಗಳಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಪ್ರಸಾದ್ ತಿಳಿಸಿದ್ದಾರೆ.

ತೈವಾನ್, ದಕ್ಷಿಣ ಕೊರಿಯಾ, ಜರ್ಮನಿ, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳ 22 ಕಂಪನಿಗಳು ಪಿ.ಎಲ್.ಐ. ಯೋಜನೆಯಡಿ ಅರ್ಜಿ ಸಲ್ಲಿಸಿವೆ. ಈ ಯೋಜನೆಯಡಿ ಅಂತರರಾಷ್ಟ್ರೀಯ ಕಂಪನಿಗಳು 15 ಸಾವಿರ ರೂ.ಗಳಿಗೂ ಹೆಚ್ಚಿನ ಮೌಲ್ಯದ ಮೊಬೈಲ್ ಉತ್ಪಾದಿಸಬೇಕಿದೆ ಎಂದವರು (5ನೇ ಪುಟಕ್ಕೆ)

## ಜಿಲ್ಲೆಯಲ್ಲಿ 188 ಗುಣಮುಖ




ದಾವಣಗೆರೆ, ಆ. 1 – ಜಿಲ್ಲೆಯಲ್ಲಿ ಶನಿವಾರ 108 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದರೆ, ಇದೇ ದಿನ 188 ಜನರು ಗುಣವಾಗಿ ಬಿಡುಗಡೆಯಾಗಿದ್ದಾರೆ. ಇದೇ ದಿನ ನಾಲ್ವರು ಸೋಂಕಿನಿಂದ ಮೃತಪಟ್ಟಿದ್ದಾರೆ.

ಒಂದೇ ದಿನ ಭಾರೀ ಸಂಖ್ಯೆಯ ಸೋಂಕಿತರು ಗುಣವಾಗಿ ಬಿಡುಗಡೆಯಾಗಿರುವುದರಿಂದ ಸಕ್ರಿಯ ಸೋಂಕಿತರ ಸಂಖ್ಯೆ 764ಕ್ಕೆ ಇಳಿಕೆಯಾಗಿದೆ. ಮೃತರ ಸಂಖ್ಯೆ 52ಕ್ಕೆ ತಲುಪಿದೆ. ಜಿಲ್ಲೆಯಲ್ಲಿ ಇದುವರೆಗೂ 2,206 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ ಹಾಗೂ 1,390 ಜನರು ಇಲ್ಲಿಯವರೆಗೆ ಗುಣವಾಗಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 73 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಹರಿಹರದಲ್ಲಿ 12, ಜಗಳೂರಿನಲ್ಲಿ 8, ಚನ್ನಗಿರಿಯಲ್ಲಿ 6, ಹೊನ್ನಾಳಿಯಲ್ಲಿ 7 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ.

ದಾವಣಗೆರೆ ತಾಲ್ಲೂಕಿನ 107 ಜನರು ಗುಣವಾಗಿ ಬಿಡುಗಡೆಯಾಗಿದ್ದಾರೆ. ಹರಿಹರದ 28, ಜಗಳೂರಿನ 17, ಚನ್ನಗಿರಿಯ 15, ಹೊನ್ನಾಳಿಯ 12 ಹಾಗೂ ಹೊರ ಜಿಲ್ಲೆಗಳ 9 ಜನರು ಗುಣವಾಗಿ ಬಿಡುಗಡೆಯಾಗಿದ್ದಾರೆ.

ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ 48ವರ್ಷದ ಪುರುಷ ತರಳಬಾಳು ಬಡಾವಣೆಯ 82ರ ವೃದ್ಧ, ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 25ರ ಪುರುಷ, ಭಗತ್ ಸಿಂಗ್ ನಗರದ 78ರ ವೃದ್ಧ, ಎಸ್.ಎಸ್. (5ನೇ ಪುಟಕ್ಕೆ)

## ನಗರದಲ್ಲಿ ಭಕ್ತಿಪೂರ್ವಕ ಬಕ್ರೀದ್ ಆಚರಣೆ

ದಾವಣಗೆರೆ, ಆ.1- ಒಂದೆಡೆ ಕಠೋರ ಕೊರೊನಾ ಭೀತಿ, ಮತ್ತೊಂದೆಡೆ ಲಾಕ್‌ಡೌನ್, ಸೀಲ್‌ಡೌನ್ ಸಮಸ್ಯೆಯ ಸುಳಿಯಲ್ಲಿ ಜೀವನ ಇವೆಲ್ಲದರ ಮಧ್ಯೆ ಹಬ್ಬಗಳ ಆಗಮನ. ಆದರೂ ಸಹ ಸರಳ ರೀತಿಯಲ್ಲಿ ನಗರಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾ-ಭಕ್ತಿಯಿಂದ ತ್ಯಾಗ ಹಾಗೂ ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಆಚರಿಸಿದರು.

ಹಬ್ಬದ ಪ್ರಾರ್ಥನೆ (ನಮಾಜ್) ಈದ್-ಉಲ್-ಅಜ್ಹಾ ನಗರದ ವಿವಿಧ ಪ್ರದೇಶಗಳಲ್ಲಿರುವ ಮಸೀದಿಗಳಲ್ಲಿ ಮುಸ್ಲಿಂ ಬಾಂಧವರು ಪ್ರಾರ್ಥನೆಯನ್ನು ಸಲ್ಲಿಸಿ, ಒಬ್ಬರಿಗೊಬ್ಬರು ಶುಭ ಕೋರುವ ಮೂಲಕ ಹಬ್ಬದ ಖುಷಿಯನ್ನು ವಿನಿಮಯ ಮಾಡಿಕೊಂಡರು. ಸಾಮಾನ್ಯವಾಗಿ ಹಬ್ಬದ ಪ್ರಾರ್ಥನೆಯನ್ನು ಸಾಮೂಹಿಕವಾಗಿ ಈದ್ಗಾಗಳಲ್ಲಿ ಸಲ್ಲಿಸಲಾಗುತ್ತಿತ್ತು. ಆದರೆ, ಕೊರೊನಾ ಸೋಂಕಿನ ಭೀತಿಯಿಂದ ಸಾಮಾಜಿಕ ಅಂತರ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಡಳಿತದ ಸಲಹೆ ಮೇರೆಗೆ ಮುಸ್ಲಿಂ ಬಾಂಧವರು ಈ ನಿರ್ಣಯವನ್ನು ತೆಗೆದುಕೊಂಡರು.

ಹಬ್ಬದ ವಿಶೇಷವಾಗಿರುವ ಖುರ್ಬಾನಿ ಬಲಿದಾನದ ನೀಡುವ ಮೂಲಕ ಮೂರು ಭಾಗಗಳಾಗಿ ವಿಂಗಡಿಸಿ, (5ನೇ ಪುಟಕ್ಕೆ)

## ಕೊರೊನಾ ಅವ್ಯವಹಾರ : ಮಾನವ ಹಕ್ಕುಗಳ ಆಯೋಗ ದೂರು ದಾಖಲು

ಬೆಂಗಳೂರು, ಆ. 1 - ಕೊರೊನಾದಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ರಾಜ್ಯ ಮಾನವ ಹಕ್ಕುಗಳ ಆಯೋಗ ದೂರು ದಾಖಲಿಸಿಕೊಂಡಿದೆ.

ಮಾಜಿ ಸಚಿವ ಕಾಂಗ್ರೆಸ್‌ನ ಹೆಚ್.ಕೆ. ಪಾಟೀಲ್ ಅವರು ನೀಡಿದ ದೂರಿನನ್ವಯ ರಾಜ್ಯ ಸರ್ಕಾರದ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಪ್ರಾರಂಭಿಸಿದೆ. ಗೌರವಯುತ ಶವ ಸಂಸ್ಕಾರ, ಅಗತ್ಯ ಸಂದರ್ಭದಲ್ಲಿ ಆಂಬ್ಯುಲೆನ್ಸ್ ವ್ಯವಸ್ಥೆ, ಸಕಾಲಕ್ಕೆ ಆಸ್ಪತ್ರೆಗೆ ರೋಗಿಯನ್ನು ಕರೆದುಕೊಂಡು ಹೋಗುವ ಅನುಕೂಲತೆ ಮತ್ತು ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ಹಾಗೂ ಗುಣಮಟ್ಟದ ಸೇವೆ ನಮ್ಮ ಮಾನವ ಹಕ್ಕುಗಳಲ್ಲವೇ? ಎಂದು ಪಾಟೀಲ್ ಪ್ರಶ್ನಿಸಿದ್ದಾರೆ. ಸರ್ಕಾರದ ನಿಷ್ಕ್ರಿಯವಾದ ಕೆಲಸ, ಸ್ಪಷ್ಟ ನಿಲುವುಗಳ ಕೊರತೆ, ಪ್ರಾಮಾಣಿಕ (5ನೇ ಪುಟಕ್ಕೆ)

## ರಾತ್ರಿ ಕರ್ಫ್ಯೂ ಅಂತ್ಯ, ಭಾನುವಾರ ಲಾಕ್ ಇಲ್ಲ

ದಾವಣಗೆರೆ, ಆ. 1 – ಕೊರೊನಾ ಹಿನ್ನೆಲೆಯಲ್ಲಿ ಹೇರಲಾಗಿದ್ದ ರಾತ್ರಿ ಕರ್ಫ್ಯೂಗೆ ಶನಿವಾರದಿಂದ ತೆರೆ ಎಳೆಯಲಾಗಿದೆ. ಇದರೊಂದಿಗೆ ಕಳೆದ ಒಂದು ತಿಂಗಳಿನಿಂದ ವಿಧಿಸಲಾಗುತ್ತಿದ್ದ ಭಾನುವಾರದ ಲಾಕ್‌ಡೌನ್ ಸಹ ಅಂತ್ಯಗೊಂಡಿದೆ.

ಕೇಂದ್ರ ಸರ್ಕಾರ ಮೂರನೇ ಹಂತದ 'ಅನ್‌ಲಾಕ್ 3.0' ಪ್ರಕಟಿಸಿದ ಬೆನ್ನಲ್ಲೇ ರಾಜ್ಯ ಸರ್ಕಾರವೂ ಸಹ ನಿರ್ಬಂಧಗಳನ್ನು ಸಡಿಲಿಸುವ ಆದೇಶ ಹೊರಡಿಸಿತ್ತು. (5ನೇ ಪುಟಕ್ಕೆ)




# 50 ರಿಂದ 60 ವರ್ಷದ ವ್ಯಕ್ತಿಗಳಿಗೆ ಉಚಿತವಾಗಿ ಕೋವಿಡ್ ತಪಾಸಣೆ

### ಹರಿಹರ ನಗರಸಭೆ ಪೌರಾಯುಕ್ತರಾದ ಲಕ್ಷ್ಮಿ

ಹರಿಹರ,ಆ. 1- ಬಿ.ಪಿ. ಅಸ್ತಮಾ, ಸಕ್ಕರೆ ಸೇರಿದಂತೆ ಹಲವಾರು ಕಾಯಿಲೆ ಯಿಂದ ಬಳಲುತ್ತಿರುವ 50 ರಿಂದ 60 ವರ್ಷದ ವ್ಯಕ್ತಿಗಳಿಗೆ ಉಚಿತವಾಗಿ ಕೋವಿಡ್ ತಪಾಸಣೆ ಮಾಡಲಾಗುತ್ತದೆ. ಇದನ್ನು ನಗರದ ಸಾರ್ವ ಜನಿಕರು ಸದುಪಯೋಗ ಪಡಿಸಿಕೊಳ್ಳಲು ಪೌರಾಯುಕ್ತರಾದ ಎಸ್. ಲಕ್ಷ್ಮಿ ಹೇಳಿದರು.

ನಗರದ 9 ನೇ ವಾರ್ಡ್ ಹೊಸಭರಂಪುರ ಬಡಾವಣೆಯ ಗ್ರಾಮದೇವತೆ ದೇವಸ್ಥಾನದ ಮುಂಭಾಗದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಕೊರೊನಾ ತಪಾಸಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೊರೊನಾ ರೋಗವು ದಿನದಿಂದ ದಿನಕ್ಕೆ ಹೆಚ್ಚು ವ್ಯಕ್ತಿಗಳಿಗೆ ಹರಡುತ್ತಿದೆ. ಇದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹರಡದಂತೆ ತಡೆಯಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತರುತ್ತಿದ್ದು, ಸಾರ್ವಜನಿಕರು ಇಂತಹ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ಉತ್ತಮ ಆರೋಗ್ಯ ವಂತರಾಗಿ ಬಾಳಬೇಕು ಎಂದು ಹೇಳಿದರು.

ಪ್ರತಿ ದಿನ ಒಂದೊಂದು ಬಡಾವಣೆಗಳಲ್ಲಿ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. 60 ವರ್ಷಗಳ ಮೇಲ್ಪಟ್ಟವರು 3735 ಒಟ್ಟು ವ್ಯಕ್ತಿಗಳು ಇದ್ದು, ಈಗಾಗಲೇ 26 ಅಸ್ತಮಾ, 8 ಕ್ಯಾನ್ಸರ್, 95 ಹಾರ್ಟ್, 7 ಏಡ್ಸ್, 30 ಥೈರಾಯ್ಡ್ ಕಾಯಿಲೆ ಇರುವ ವ್ಯಕ್ತಿಗಳಿಗೆ ತಪಾಸಣೆ ಮಾಡಲಾಗಿದೆ ಎಂದು ಹೇಳಿದರು.

ಇಂದು 9 ನೇ ವಾರ್ಡ್ ನಲ್ಲಿ 180 ಕ್ಕೂ ಹೆಚ್ಚು ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ಮಾಡಲಾಗಿದೆ ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಜಿಲ್ಲಾ ಮಲೇರಿಯಾ ಅಧಿಕಾರಿ ಕೆ. ನಟರಾಜ್, ನಗರಸಭೆ ಸದಸ್ಯೆ ನಿಂಬಕ್ಕ ಚಂದಾಪುರ್, ಆರೋಗ್ಯ ಇಲಾಖೆಯ ಉಮ್ಮಣ್ಣ, ಸುಧಾ ಸಲಾಕೆ, ಸಂತೋಷ, ಸ್ವಾಮಿ, ನಾಯ್ಕ್, ನಗರಸಭೆ ಅಣ್ಣಪ್ಪ, ಕೋಡಿ ಭೀಮರಾಯ್, ಅಂಬಣ್ಣ, ಜಿ.ಕೆ. ಪ್ರವೀಣ್, ಮಹೇಶ್ ಕೊಡಬಾಳ, ಕೆ. ಬಿ. ಬಸವರಾಜಪ್ಪ, ಅಂಗನವಾಡಿ ಶಿಕ್ಷಕಿ ಲಲಿತಾ, ರೂಪಾ ಕಾಟ್ವೆ ಪ್ರದೀಪ್ ಹಾಗೂ ಇತರರು ಹಾಜರಿದ್ದರು.



# ಕೊರೊನಾ ವಾರಿಯರ್ಸ್‌ಗಳಿಗೆ ಆಯುಷ್ ಕಿಟ್ ವಿತರಣೆ

ಮಲೇಬೆನ್ನೂರು, ಆ.1- ಕೊರೊನಾ ವಿರುದ್ಧ ಹೋರಾಟ ಮಾಡುತ್ತಿರುವ ಕೊರೊನಾ ವಾರಿಯರ್ಸ್‌ಗಳಿಗೆ ಕಳೆದ 2 ತಿಂಗಳಿನಿಂದ ಸತತವಾಗಿ ಹೆಲ್ತ್ ಕಿಟ್ ನೀಡುತ್ತಿರುವ ಉದ್ಯಮಿ ನಂದಿಗಾವಿ ಶ್ರೀನಿವಾಸ್ ಅವರು ಶನಿವಾರ ಕುಣೆಬೆಳಕೆರೆ, ಕುಂಬಳೂರು ಗ್ರಾಮದ ಗ್ರಾ.ಪಂ ಸಿಬ್ಬಂದಿಗೆ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಆಯುಷ್ ಕಿಟ್‌ಗಳನ್ನು ವಿತರಿಸಿದರು.

# ಕಂದಾಯ ಇಲಾಖಾ ಭೂಮಿ ಅತಿಕ್ರಮಣ ಹೊನಲು - ಬೆಳಕಿನ ಬಂದೋಬಸ್ತ್



### ಹರಪನಹಳ್ಳಿ

ಹರಪನಹಳ್ಳಿ,ಆ.1- ತಾಲ್ಲೂಕಿನ ನಾರಾಯಣ ಪುರ ಗ್ರಾಮದ ಬಳಿ ಕಂದಾಯ ಇಲಾಖೆ ಜಮೀನು ಅತಿಕ್ರಮಣ ಸಾಗುವಳಿಯಾಗಿದ್ದನ್ನು ತೆರವು ಗೊಳಿಸಿ ಗಿಡ ನೆಟ್ಟ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಪೊಲೀ ಸರು ಹಗಲು ರಾತ್ರಿ ಬಂದೋಬಸ್ತ್‌ಕೈಗೊಂಡಿದ್ದಾರೆ.

ಶುಕ್ರವಾರವೂ ತಹಶೀಲ್ದಾರ ಅನಿಲ್ ಕುಮಾರ ನೇತೃತ್ವದಲ್ಲಿ ಅರಣ್ಯ, ಕಂದಾಯ, ಪೊಲೀಸರು ಅಧಿ ಕಾರಿಗಳು ಆ ಜಾಗಕ್ಕೆ ಭೇಟಿ ನೀಡಿದಾಗ ಭೂಮಿ ಅತಿಕ್ರಮಣ ಮಾಡಿದ್ದ ಯಲ್ಲಾಪುರ ಕೊರಚರಹಟ್ಟಿ ರೈತರು ಮಕ್ಕಳೊಂದಿಗೆ ಪುನಃ ಬಂದು ಪ್ರತಿಭಟನೆಗೆ ಮುಂದಾದಾಗ ಪೊಲೀಸರು ಮತ್ತೊಮ್ಮೆ ಎಚ್ಚರಿಕೆ ನೀಡಿ ಮಕ್ಕಳ ಸಮೇತ ವಾಪಸ್ ಕಳಿಸಿದರು. ಶನಿ ವಾರ ಯಾವುದೇ ಅಡೆ ತಡೆ ಇಲ್ಲದೆ ಗಿಡಗಳನ್ನು ನೆಟ್ಟಿದ್ದಾರೆ. ರೈತರು ಪ್ರತಿಭಟನೆಗೆ ಮಕ್ಕಳನ್ನು ಕರೆದುಕೊಂಡು ಬಂದಿದ್ದರಿಂದ ಅಂಗ ನವಾಡಿ ಕಾರ್ಯಕರ್ತರನ್ನು ಆ ಪ್ರದೇ ಶದಲ್ಲಿ ನಿಯೋಜನೆ ಗೊಳಿಸಲಾಗಿತ್ತು.

ಈ ವೇಳೆ ವಲಯ ಅರಣ್ಯಾಧಿಕಾರಿ ಭರತ್ ಡಿ. ತಳವಾರ್ ಮಾತನಾಡಿ, ಸತತ 3 ದಿನಗಳಿಂದ 120 ಎಕರೆಯಲ್ಲಿ 22 ಸಾವಿರ ಗಿಡಗಳನ್ನು ನೆಡಲಾಗಿದೆ. 3 ದಿನಗಳಿಂದ ಸಹ ರಾತ್ರಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ಮುಂದಿನ 7 ದಿನಗಳ ಕಾಲ ರಾತ್ರಿ ಬಂದೋಬಸ್ತ್ ಮಾಡಲಾಗುತ್ತದೆ ಎಂದರು. 12 ಜೆಸಿಬಿ ಹಾಗೂ ಎರಡು ಇಟಾಚಿ 25 ಟ್ರ್ಯಾಕ್ಟರ್ ಗಳಿಂದ ಒತ್ತುವರಿ ತೆರವುಗೊಳಿಸಿದ ಪ್ರದೇಶದಲ್ಲಿ ಗಿಡಗಳನ್ನು ನೆಟ್ಟು ಟ್ರಂಚ್ ಹಾಕಲಾಯಿತು. ಕಳೆದ ಮೂರು ದಿನಗಳಿಂದ 100 ಜನ ಅರಣ್ಯ ಇಲಾಖೆ ಸಿಬ್ಬಂದಿ, 50 ಜನ ಪೊಲೀಸರು, 100 ಜನ ಕಾರ್ಮಿಕರು ಕೆಲಸ ಮಾಡಿದ್ದಾರೆ. ಈ 120 ಎಕರೆಯಲ್ಲಿ ಹಸಿರೀಕರಣ ಮಾಡಿ, ಅರಣ್ಯ ಇಲಾಖೆಯವರಿಗೆ ಒಪ್ಪಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ ಎಂದರು.

ವೃತ್ತ ನಿರೀಕ್ಷಕ ಕೆ. ಕುಮಾರ್, ದಾವಣಗೆರೆ ಎಸಿಎಫ್ ತಿಪ್ಪೇಸ್ವಾಮಿ, ಪಿಎಸ್‌ಐಗಳಾದ ಪ್ರಕಾಶ್, ಕಿರಣಕುಮಾರ್, ಇಸಾಕ್ ಅಹ್ಮದ್, ಲತಾ ತಾಳೇಕರ್, ಕಂದಾಯ ನಿರೀಕ್ಷಕ ಅರವಿಂದ, ಮಾಲತೇಶ, ಗ್ರಾಮ ಲೆಕ್ಕಿಗ ಜೀವನ್, ಹರಪನಹಳ್ಳಿ ಪೊಲೀಸ್ ಉಪವಿಭಾಗದ ವ್ಯಾಪ್ತಿಯ ಕೊಟ್ಟೂರು, ಹೂವಿನ ಹಡಗಲಿ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜನೆ ಮಾಡಲಾಗಿತ್ತು.


# ಮತ್ಸ್ಯ ಸಂಪದ ಸಹಾಯ ಧನಕ್ಕೆ ಅರ್ಜಿ

ದಾವಣಗೆರೆ, ಆ.1- ಜಿಲ್ಲಾ ಮೀನುಗಾರಿಕೆ ಇಲಾಖೆ ವತಿಯಿಂದ ಈ ಸಾಲಿನ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮೀನು ಕೃಷಿ ಕೊಳಗಳ ನಿರ್ಮಾಣ, ಬಯೋ ಫ್ಲಾಕ್ಸ್ ಕೊಳ ನಿರ್ಮಾಣ, ಮೀನುಮರಿ ಉತ್ಪಾದನೆ ಹಾಗೂ ಪಾಲನಾ ಕೇಂದ್ರಗಳ ಸ್ಥಾಪನೆ, ಕ್ರೀಡಾ ಮೀನುಗಾರಿಕೆ, ಶೈತ್ಯೀಕರಿಸಿದ ವಾಹನಗಳು, ಆರ್‌ಎಎಸ್ ಘಟಕ ಸ್ಥಾಪನೆ, ಶೈತ್ಯಾಗಾರ/ಮಂಜುಗಡ್ಡೆ ಸ್ಥಾವರ ನಿರ್ಮಿಸುವುದು, ಅಲಂಕಾರಿಕ ಮೀನು ಉತ್ಪಾದಕ ಘಟಕ ಉಪಯೋಜನೆಗಳನ್ನು ಪ್ರಾರಂಭಿಸಲು ಸಾಮಾನ್ಯ ಫಲಾನುಭವಿಗಳಿಗೆ ಶೇ.40, ಪ.ಜಾತಿ/ಪ.ಪಂಗಡ/ಮಹಿಳಾ ಫಲಾನುಭವಿಗಳಿಗೆ ಶೇ. 60 ಸಹಾಯಧನ ನೀಡಲಾಗುವುದು.

ಆಸಕ್ತರು ಆಯಾ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಕಚೇರಿಯಲ್ಲಿ ಅರ್ಜಿ ಪಡೆದು ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕ (ಶ್ರೇಣಿ-2) ಆರ್. ಗಣೇಶ್ ತಿಳಿಸಿದ್ದಾರೆ.

# ಹರಪನಹಳ್ಳಿ: ಸರಳ, ಶಾಂತಿಯುತವಾಗಿ ಬಕ್ರೀದ್ ಹಬ್ಬ ಆಚರಣೆ



ಹರಪನಹಳ್ಳಿ, ಆ.1 - ಕೊರೊನಾ ವೈರಸ್‌ನ ಸೋಂಕಿನ ಭೀತಿಯ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ತಾಲ್ಲೂಕಿನ ಎಲ್ಲಾ ಮುಸ್ಲಿಂ ಬಾಂಧವರು ತ್ಯಾಗ - ಬಲಿದಾನದ ಸಂಕೇತವಾದ ಪವಿತ್ರ ಬಕ್ರೀದ್ ಹಬ್ಬವನ್ನು ಶ್ರದ್ಧಾ - ಭಕ್ತಿಯಿಂದ ಸರಳವಾಗಿ ಆಚರಿಸಿದರು.

ಮುಸ್ಲಿಮರಲ್ಲಿ ಹಬ್ಬದ ಸಡಗರ ಇರಲಿಲ್ಲ. ಇತಿಹಾಸದಲ್ಲೇ ಎರಡನೇ ಬಾರಿಗೆ ಸಾಮೂಹಿಕ ನಮಾಜ್ ಇರಲಿಲ್ಲ. ಬೆಳಿಗ್ಗೆ ಅವರವರ ಮನೆಯಲ್ಲಿ ಮನೆಯ ಒಳಗಡೆ ಕೆಲವರು, ಇನ್ನೂ ಕೆಲವರು ಮನೆಯ ಆರ್. ಸಿ.ಸಿ ಮೇಲೆ ಕುಟುಂಬಸ್ಥರು ಮಾತ್ರ ಸೇರಿ ಅಲ್ಲಿಯೇ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ್ದಾರೆ.

ಬೆರಳೆಣಿಕೆಯಷ್ಟು ಜನರು ಮಾತ್ರ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದ್ದು ಬಿಟ್ಟರೆ, ಬಹುತೇಕರು ತಮ್ಮ ಕುಟುಂಬಗಳ ಸದಸ್ಯರ ಜೊತೆಗೂಡಿ ಅವರವರ ಮನೆಗಳಲ್ಲಿಯೇ ಅತ್ಯಂತ ಶ್ರದ್ಧಾ ಭಕ್ತಿಯಿಂದ (ನಮಾಜ್) ಪ್ರಾರ್ಥನೆ ಸಲ್ಲಿಸಿ ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿರುವ ಕೊರೊನಾ ಸೋಂಕಿಗೆ ಶೀಘ್ರದಲ್ಲೇ ಮುಕ್ತಿ ನೀಡು ಎಂದು ಅಲ್ಲಾಹನಲ್ಲಿ ಬೇಡಿಕೊಂಡರು.

ಸರ್ಕಾರದ ನಿರ್ದೇನದಂತೆ ಪಟ್ಟಣದ ಎಲ್ಲಾ ಮಸೀದಿಗಳಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಲಾಗಿದ್ದು, ಥರ್ಮಲ್ ಸ್ಕ್ರೀನಿಂಗ್, ಸೋಪ್, ಸ್ಯಾನಿಟೈಸರ್, ಮಾಸ್ಕ್‌ಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಪರಸ್ಪರ ಹಸ್ತಲಾಘವ ಮತ್ತು ಆಲಿಂಗನಕ್ಕೆ ನಿರ್ಬಂಧ ವಿಧಿಸಿದ್ದು, ಗ್ರಂಥಗಳನ್ನು ಯಾರೂ ಮುಟ್ಟಲು ಅವಕಾಶ ನೀಡಿರಲಿಲ್ಲ. ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಮಾಸ್ಕ್‌ಗಳನ್ನು ಧರಿಸಿ ಪ್ರಾರ್ಥನೆ ಸಲ್ಲಿಸಿದರು.

ಎಲ್ಲೆಡೆ ಪರಸ್ಪರ ಅಪ್ಪಿಕೊಂಡು ಶುಭಾಶಯ ಹೇಳುವುದು ಕಾಣಬರಲಿಲ್ಲ, ಪಟ್ಟಣದ ನಾಲ್ಕು ಕಡೆ ಇರುವ ಈದ್ಗಾ ಮೈದಾನದಲ್ಲಿ ನಡೆಯುತ್ತಿದ್ದ ಸಾಮೂಹಿಕ ಪ್ರಾರ್ಥನೆ ಇಲ್ಲವಾಗಿತ್ತು. ಪಟ್ಟಣದಲ್ಲಿ ವಿವಿಧ ಬಗೆಯ ಹಣ್ಣು ಮಾರುವ ವ್ಯಾಪಾರಿಗಳು ಬಹುತೇಕರು ಮುಸ್ಲಿಮರೇ ಇದ್ದು, ಇವರೆಲ್ಲರೂ ತಮ್ಮ ಹಬ್ಬದಂದು ಎಲ್ಲಾ ಹಣ್ಣಿನ ಅಂಗಡಿಗಳನ್ನು ಮುಚ್ಚಿ ಬಿಡುತ್ತಿದ್ದರು. ಆದರೆ, ಇಂದು ಬಹಳಷ್ಟು ಹಣ್ಣಿನ ಅಂಗಡಿಗಳು ತೆರೆದಿದ್ದವು. ಅವರಲ್ಲಿ ಹಬ್ಬದ ಸಂತಸವಿರಲಿಲ್ಲ.

ಈ ಕುರಿತು ಪ್ರತಿಕ್ರಿಯೆ ನೀಡಿದ ತಾಲ್ಲೂಕು ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಎ. ಮೂಸ ಸಾಬ್, ಇಸ್ಲಾಂ ಧರ್ಮ ಹೇಳುವುದು ಜೀವ ರಕ್ಷಣೆಯ ಬಗ್ಗೆ, ಈ ಬಾರಿ ಕೊರೊನಾ ಭೀತಿಯಿಂದ ಹಾಗೂ ಸರ್ಕಾರದ ಲಾಕ್‌ಡೌನ್ ಆದೇಶದಂತೆ ಮನೆಯಲ್ಲಿಯೇ ಬಕ್ರೀದ್ ಹಬ್ಬವನ್ನು ಆಚರಿಸಿದೆವು. ಕೋವಿಡ್ ನಿಂದ ನಮ್ಮನ್ನು ರಕ್ಷಿಸಿಕೊಳ್ಳುವುದು ಹಾಗೂ ಮತ್ತೊಬ್ಬರನ್ನು ರಕ್ಷಣೆ ಮಾಡುವುದು ಮುಖ್ಯವಾಗಿದೆ ಎಂದು ಹೇಳಿದರು.

ಪುರಸಭೆ ಸದಸ್ಯರಾದ ಡಿ.ಅಬ್ದುಲ್ ರೆಹ ಮಾನ್ ಸಾಬ್, ಎಂ.ಕೆ.ಜಾವೀದ್, ಜಾಕೀರ್ ಹುಸೇನ್ ಸರ್ಖಾವಾಸ್, ಲಾಟಿ ದಾದಾಪೀರ್, ರಾಜ್ಯ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಸದಸ್ಯ ಬಿ.ನಜೀರ್‌ಅಹ್ಮದ್, ಅಂಜುಮನ್ ಮಾಜಿ ಅಧ್ಯಕ್ಷ ಸಿ.ಜಾವಿದ್, ಪುರಸಭೆ ಮಾಜಿ ಅಧ್ಯಕ್ಷ ಬಿ.ಮೆಹಬೂಬ್ ಸಾಬ್, ಕಸಾಪ ಅಧ್ಯಕ್ಷ ಡಿ.ರಾಮನಮಲಿ, ಸಾಹಿತಿ ಇಸ್ಮಾಯಿಲ್ ಯಲಿಗಾರ, ಡಾ.ಕೆ.ಎಂ.ಎನ್.ಖಾನ್, ಡಾ.ಶೇಖ್ ನಫ್ತಾರ್, ಮುಖಂಡರಾದ ಎಚ್.ಎಸ್ ಅಮಾನುಲ್ಲಾ, ಬೇಲ್ದಾರ್ ಬಾಷುಸಾಬ್ ಕೆ.ರಿಯಾಜ್ ಸೇರಿದಂತೆ ತಾಲೂಕಿನ ಎಲ್ಲಾ ಮುಸ್ಲಿಂ ಬಾಂಧವರುಈ ಬಾರಿಯ ಬಕ್ರೀದ್ ಹಬ್ಬವನ್ನು ಸರಳವಾಗಿ ಆಚರಿಸಿದರು.

## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಶಾಂತ ಜ್ಯೋತೀಶ್ವರ್**

ನಿಧನ : 02.08.2019

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.*
*ಸದಾ ನಿಮ್ಮ ಸವಿನೆನಪು, ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ*

ಶ್ರೀ ಪವನ್ ಕೆ.ಜೆ. ಶ್ರೀಮತಿ ಸೀಮಾ, ಕುಂಬಳೂರು.
ಶ್ರೀಮತಿ ಪ್ರಿಯದರ್ಶಿನಿ, ಶ್ರೀ ಮನು, ತೋಟದ ಚಿಕ್ಕನಹಳ್ಳಿ.
ಶ್ರೀಮತಿ ಬಸಮ್ಮ, ದಿ|| ಶ್ರೀ ಚಿದಾನಂದಪ್ಪ ಮತ್ತು ಸಹೋದರರು, ಕುಂಬಳೂರು.
ಶ್ರೀಮತಿ ಸುಶೀಲಮ್ಮ, ಶ್ರೀ ಚಂದ್ರಶೇಖರಪ್ಪ ಮತ್ತು ಮಕ್ಕಳು, ಕುಂದೂರು.
ಕೆಂಚಪ್ಪರ ವಂಶಸ್ಥರು ಮತ್ತು ಬಂಧು-ಮಿತ್ರರು.

## ಎ.ಲಕ್ಷ್ಮೀದೇವಿ ನಿಧನ



ದಾವಣಗೆರೆ ಬಾಲಾಜಿ ನಗರ ವಾಸಿ
ಎ.ಚಂದ್ರಶೇಖರ್ ಇವರ ಧರ್ಮಪತ್ನಿ

**ಶ್ರೀಮತಿ ಎ.ಲಕ್ಷ್ಮೀದೇವಿ (41)**

ಅವರು ದಿನಾಂಕ : 01.08.2020 ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.08.2020 ರಂದು ಭಾನುವಾರ ಬೆಳಿಗ್ಗೆ 10 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು

**ಎ.ಟಿ.ಕೆ ಕುಟುಂಬ ವರ್ಗದವರು ಹಾಗೂ ಬಂಧು - ಮಿತ್ರರು.**

# ಅಡಿಕೆ ಬೆಳೆಯಲ್ಲಿ ಸಮಗ್ರ ನಿರ್ವಹಣೆ



ದಾವಣಗೆರೆ, ಆ.1- ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ತಾಲ್ಲೂಕಿನ ಅಗಸನಕಟ್ಟೆ ಗ್ರಾಮದಲ್ಲಿ ಅಡಿಕೆ ಬೆಳೆ ಸಮಗ್ರ ನಿರ್ವಹಣೆ ಕುರಿತು ವೈಜ್ಞಾನಿಕ ಕ್ಷೇತ್ರ ಭೇಟಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಗ್ರಾಮದ ಆಯ್ದ ಅಡಿಕೆ ತೋಟಗಳಿಗೆ ಭೇಟಿ ನೀಡಿ ವೈಜ್ಞಾನಿಕ ಮಾಹಿತಿ ನೀಡಿದರು. ಕೆಲವು ತೋಟಗಳಲ್ಲಿ ಸುಳಿ ತಿಗಣೆಯ ಬಾಧೆ ಕಂಡು ಬಂದಿದ್ದು, ಅದರ ನಿಯಂತ್ರಣಕ್ಕೆ ಕ್ಲೋರ್‌ಪೈರಿಫಾಸ್ 2 ಮಿಲೀ ಅಥವಾ ಡೈಮಿಥೋಯೆಟ್ 2 ಮಿಲೀ ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಹಾಗೆಯ ಅಣಬೆ ರೋಗ ನಿಯಂತ್ರಣಕ್ಕೆ ಈ ಸಮಯದಲ್ಲಿ ಅರ್ಕಾ ಸೂಕ್ಷ್ಮಾಣು ಜೀವಿಗಳ ಮಿಶ್ರಣವನ್ನು 10 ಮಿಲೀ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಪ್ರತಿ ಗಿಡದ ಬುಡಕ್ಕೆ 4 ಲೀಟರ್ ದ್ರಾವಣವನ್ನು ಹಾಕಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಆನಗೋಡು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ರವಿ, ರೈತರಾದ ವಸಂತ ಕುಮಾರ್, ಚನ್ನಪ್ಪ, ಕೊಟ್ರಪ್ಪ, ಕಲ್ಲೇಶಪ್ಪ, ಚಂದ್ರಪ್ಪ ಇನ್ನಿತರರಿದ್ದರು.

# ಮಲೇಬೆನ್ನೂರಿನಲ್ಲಿ ಬಕ್ರೀದ್ ಆಚರಣೆ

ಮಲೇಬೆನ್ನೂರು, ಆ.1- ತ್ಯಾಗ ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಪಟ್ಟಣದಲ್ಲಿ ಅತ್ಯಂತ ಸರಳವಾಗಿ ಆಚರಿಸಲಾಯಿತು.

ದಿನೇ ದಿನೇ ಹೆಚ್ಚಾಗುತ್ತಿರುವ ಕೊರೊನಾ ಮಹಾಮಾರಿಯಿಂದಾಗಿ ಇಲ್ಲಿನ ಮುಸ್ಲಿಂ ಬಾಂಧವರು ಮಸೀದಿಗಳಲ್ಲಿ ಸಾಮಾಜಿಕ ಅಂತರ ಕಾಯ್ದು ಕೊಂಡು ಬಕ್ರೀದ್ ಹಬ್ಬದ ಪ್ರಾರ್ಥನೆ ಸಲ್ಲಿಸಿದರು. ಕೆಲವರು ಮನೆಯಲ್ಲೇ ಪ್ರಾರ್ಥನೆ ಮಾಡಿ, ಶುಭಾಶಯ ವಿನಿಮಯಕೊಂಡರು. ಮಸೀದಿಗಳಲ್ಲಿ ಪ್ರಾರ್ಥನೆ ವೇಳೆ, ಕೊರೊನಾ ವಿರುದ್ಧ ಎಲ್ಲರೂ ಒಂದಾಗಿ ಹೋರಾಟ ಮಾಡಬೇಕು ಮತ್ತು ಸ್ವಚ್ಛತೆಗೆ ಆದ್ಯತೆ ನೀಡಬೇಕೆಂದು ಕರೆ ನೀಡಲಾಗಿದೆ.

# ಎಂ.ಎಸ್.ಎಂ.ಇ. ಸಾಲ ಗ್ಯಾರಂಟಿ 3 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಳ

ನವದೆಹಲಿ, ಆ. 1 - ಕೇಂದ್ರ ಸರ್ಕಾರ ಎಂ.ಎಸ್.ಎಂ.ಇ. ವಲಯದ ಸಾಲ ಗ್ಯಾರಂಟಿ ಯೋಜನೆಯ ವ್ಯಾಪ್ತಿಯನ್ನು ಎರಡು ಪಟ್ಟು ಹೆಚ್ಚಿಸಿ 3 ಲಕ್ಷ ಕೋಟಿ ರೂ.ಗಳಿಗೆ ನಿಗದಿ ಪಡಿಸಿದೆ. ಸಾಲ ಬಾಕಿ ಮಿತಿಯನ್ನು 50 ಕೋಟಿ ರೂ.ಗಳಿಗೆ ಹೆಚ್ಚಿಸುವ ಜೊತೆಗೆ ವೈದ್ಯರು, ವಕೀಲರು ಹಾಗೂ ಲೆಕ್ಕ ಪರಿಶೋಧಕರು ಸೇರಿದಂತೆ ವೃತ್ತಿಪರರು ಉದ್ಯಮಗಳಿಗೆ ಪಡೆದ ಸಾಲಕ್ಕೂ ಇದೇ ಯೋಜನೆಯಡಿ ನೆರವು ನೀಡಲಾಗುವುದು.

ವ್ಯಾಪಾರಿ ಸಂಸ್ಥೆಗಳ ಬೇಡಿಕೆಯನ್ನು ಆಧರಿಸಿ ನೀಡಲಾಗುವ ತುರ್ತು ಸಾಲದ ನೆರವಿನ ನಿಯಮಗಳಲ್ಲೂ ಬದಲಾವಣೆಯಾಗಿದೆ. ಈ ಬಗ್ಗೆ ವಿವರ ನೀಡಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಅರ್ಹತಾ ಮಾನದಂಡ ಅನುಸರಿಸಿ ತುರ್ತು ಸಾಲ ಯೋಜನೆಯಡಿ ನೆರವು ಕಲ್ಪಿಸಲಾಗುವುದು ಎಂದಿದ್ದಾರೆ.

# ಎಸ್ಸಿ, ಎಸ್ಟಿ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿ

ದಾವಣಗೆರೆ ಆ.1 - ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯ ಅಡಿಯಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪ.ಜಾತಿ/ಪ.ಪಂ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ನೀಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆಗಸ್ಟ್ 30 ಕೊನೆಯ ದಿನವಾಗಿರುತ್ತದೆ. ಅರ್ಜಿಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಾವಣಗೆರೆ ಇವರಿಂದ ದೃಢೀಕರಿಸಿಕೊಂಡು ನಂತರ, http://karunadu.karnataka.gov.in ವೆಬ್‌ಸೈಟ್ ಮೂಲಕ ಅಪ್‌ಲೋಡ್ ಮಾಡಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸ್ ತಿಳಿಸಿದ್ದಾರೆ.

# ಹರಪನಹಳ್ಳಿಯಲ್ಲಿ ಅಗ್ನಿಶಾಮಕ ದಳದ ನೂತನ ಕಚೇರಿ ಉದ್ಘಾಟನೆ



ಹರಪನಹಳ್ಳಿ, ಆ.1- ತಾಲ್ಲೂಕಿನ ಅಡವಿಹಳ್ಳಿ ಕ್ರಾಸ್ ಬಳಿ ಅಗ್ನಿಶಾಮಕ ದಳದ ನೂತನ ಕಚೇರಿಯನ್ನು ಶಾಸಕ ಕರುಣಾಕರ ರೆಡ್ಡಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್ಟಿ ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ತಾಲ್ಲೂಕು ಬಿಜೆಪಿ ಎಸ್ಟಿ ಘಟಕ ಅಧ್ಯಕ್ಷ ಟಿ. ಮನೋಜಾ, ತಾಲ್ಲೂಕ ಬಿಜೆಪಿ ಯುವ ಘಟಕದ ಅಧ್ಯಕ್ಷ ವಿನಯಕುಮಾರ್, ಕಾರ್ಯದರ್ಶಿ ಟಿ. ಶಿವಾನಂದ, ಪುರಸಭೆ ಸದಸ್ಯರಾದ ದ್ಯಾಮಜ್ಜಿ ರೊಕ್ಕಪ್ಪ, ಎಂ.ಕೆ. ಜಾವೀದ್, ಕಿರಣಕುಮಾರ್, ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಯಡಿಹಳ್ಳಿ ಶೇಖರಪ್ಪ, ಆರ್. ಕರೇಗೌಡ, ಚೌಡಪುರ ಷಣ್ಮುಖಪ್ಪ, ಕೆಂಗಳ್ಳಿ ಪ್ರಕಾಶ, ರಾಘವೇಂದ್ರಶೆಟ್ಟಿ, ತಿಮ್ಮಣ್ಣ, ಎಂ. ಸಂತೋಷ, ಯು.ಪಿ. ನಾಗರಾಜ ಉಪಸ್ಥಿತರಿದ್ದರು.


ಡಿವೈಎಸ್ಪಿ ಮಲ್ಲೇಶ ದೊಡ್ಮನಿ, ಸಿಪಿಐ ಕೆ.ಕುಮಾರ್, ವಲಯ ಅರಣ್ಯಾಧಿಕಾರಿ ಡಿ. ಭರತ್, ಪ್ರಾದೇಶಿಕ ಅಗ್ನಿಶಾಮಕ ದಳದ ಅಧಿಕಾರಿಗಳಾದ ಎಸ್. ರವಿ ಪ್ರಸಾದ್, ಜಯರಾಂ, ಹರಪನಹಳ್ಳಿ ಅಗ್ನಿಶಾಮಕ ದಳದ ಅಧಿಕಾರಿ ರಾಮಪ್ಪ, ಎಚ್.ಕೆ. ಹಡಗಲಿ ಅಗ್ನಿಶಾಮಕ ದಳದ ಅಧಿಕಾರಿ ರವಿಕುಮಾರ್, ಪಿಎಸ್‌ಐ. ಪ್ರಕಾಶ್, ಗೃಹರಕ್ಷಕ ದಳದ ತಾಲ್ಲೂಕು ಘಟಕಾಧಿಕಾರಿ ಮಲ್ಲಿಕಾರ್ಜುನಯ್ಯ ಇನ್ನಿತರರಿದ್ದರು.

## ಕಬ್ಬೇರ ಚಂದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ವಾಸಿ, ದಾವಣಗೆರೆ ಕಾಟನ್ ಮಿಲ್‌ನ ನಿವೃತ್ತ ನೌಕರ ಕಬ್ಬೇರ ಚಂದ್ರಪ್ಪ ಮಾಗಾನಹಳ್ಳಿ (71) ಅವರು ದಿನಾಂಕ 1.08.2020 ರಂದು ಶನಿವಾರ 11 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.08.2020 ರ ಶನಿವಾರ ಸಂಜೆ ನೆರವೇರಿತು.

## ಪುಟ್ಟಪ್ಪ ಡಿ. ಮಡಿವಾಳರ ನಿಧನ



ಹರಿಹರದ ಅಗಸರ ಬೀದಿ, ಹಳ್ಳದಕೇರಿ ವಾಸಿ ಪುಟ್ಟಪ್ಪ ಡಿ. ಮಡಿವಾಳರ (96) ಅವರು ದಿನಾಂಕ 1.8.2020ರ ಶನಿವಾರ ಮಧ್ಯಾಹ್ನ 2.45ಕ್ಕೆ ನಿಧನರಾದರು. ಇವರ ಅಂತಿಮ ಸಂಸ್ಕಾರವು ದಿನಾಂಕ 2.8.2020ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ. ಮೃತರು ಏಳು ಜನ ಪುತ್ರರು, 3 ಮೂವರು ಪುತ್ರಿಯರು ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ.

## ಎನ್.ಟಿ ಮುರುಗೇಶ್ ನಿಧನ



ಚನ್ನಗಿರಿ ತಾಲ್ಲೂಕು ನಲ್ಕುದರೆ ಗ್ರಾಮದ ವಾಸಿ, ದಾವಣಗೆರೆ ಹದಡಿ ರಸ್ತೆಯ ಟೈಲ್ಸ್ ಸ್ಟೋನ್ ಮ್ಯಾನೇಜಿಂಗ್ ಡೈರೆಕ್ಟರ್ ಎನ್.ಟಿ ಮುರುಗೇಶ್ (51) ಅವರು ದಿನಾಂಕ: 1.08.2020 ರಂದು ಶನಿವಾರ ಸಂಜೆ 6:15ಕ್ಕೆ ನಿಧನರಾಗಿದ್ದಾರೆ. ಪತ್ನಿ, ಸಹೋದರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.08.2020 ರ ಭಾನುವಾರ ಬೆಳಿಗ್ಗೆ 11 ಕ್ಕೆ ನಲ್ಕುದುರೆ ಗ್ರಾಮದಲ್ಲಿ ನೆರವೇರಲಿದೆ.

## ಹಳೇಬಾತಿ ಬೇವಿನಹಳ್ಳಿ ಕೆಂಚಮ್ಮ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ, ಬೇವಿನಹಳ್ಳಿ ಸಣ್ಣನಾಗಪ್ಪನವರ ಧರ್ಮಪತ್ನಿ ಕೆಂಚಮ್ಮ (85) ಇವರು ದಿನಾಂಕ 1.08.2020 ರಂದು ಶನಿವಾರ ಸಂಜೆ 5.30ಕ್ಕೆ ನಿಧನರಾಗಿದ್ದಾರೆ. ಏಳು ಜನ ಪುತ್ರರು, ಓರ್ವ ಪುತ್ರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.08.2020 ರ ಭಾನುವಾರ ಮಧ್ಯಾಹ್ನ 12.30ಕ್ಕೆ ಹಳೇಬಾತಿಯ ಅವರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ಸುಶೀಲಬಾಯಿ ನವಲೆ ನಿಧನ



ದಾವಣಗೆರೆ ಸಿಟಿ ವಿನೋಬನಗರ, 1ನೇ ಮೇನ್, 15ನೇ ಕ್ರಾಸ್ ವಾಸಿ ಶ್ರೀಮತಿ ಸುಶೀಲಬಾಯಿ ನವಲೆ ಅವರು ದಿನಾಂಕ 1.8.2020ರ ಶನಿವಾರ ಬೆಳಿಗ್ಗೆ 5.30ಕ್ಕೆ ನಿಧನರಾದರು. ಪತಿ, ನಾಲ್ವರು ಪುತ್ರರು, 3 ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು ದಿನಾಂಕ 02.08.2020ರ ಭಾನುವಾರ ಬೆಳಿಗ್ಗೆ 10.30 ಕ್ಕೆ ಹೊಸ ಬಸ್‌ಸ್ಟ್ಯಾಂಡ್ ಹಿಂಭಾಗದಲ್ಲಿ ರುವ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

## ಶ್ರೀಮತಿ ಶಿವಮ್ಮ ನಿಧನ



ದಾವಣಗೆರೆ ಬಂಬೂಬಜಾರ್ ವಾಸಿ, ಕೆ.ಸಿ. ವೀರಭದ್ರಪ್ಪ ಇವರ ಧರ್ಮಪತ್ನಿ ಶ್ರೀಮತಿ ಶಿವಮ್ಮ (65) ಅವರು ದಿನಾಂಕ 01.08.2020ರ ಶನಿವಾರ ಸಂಜೆ 7 ಗಂಟೆಗೆ ನಿಧನರಾದರು. ಪತಿ, ನಾಲ್ವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.08.2020ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ವಿಶ್ವ ಸ್ತನ್ಯಪಾನ ಸಪ್ತಾಹ 2020 : ಎದೆ ಹಾಲು ಪರಿಸರ ಪ್ರೇಮಿ

ಈ ವರ್ಷದ ವಿಶ್ವ ಸ್ತನ್ಯಪಾನ ಸಪ್ತಾಹದ ಅಂಗವಾಗಿ 'ವಾಬಾದ' ಘೋಷಣೆ ಏನಂದರೆ 'ಸ್ತನ್ಯಪಾನವನ್ನು ಬೆಂಬಲಿಸಿ ಪರಿಸರವನ್ನು ರಕ್ಷಿಸಿ' ಎಂಬುದಾಗಿದೆ. ಈ ಸಪ್ತಾಹವು ಸ್ತನ್ಯಪಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜನ ಜಾಗೃತಿ ಮೂಡಿಸುವ ಹಾಗು ಕ್ರಮಬದ್ಧಗೊಳಿಸುವ ಜಾಗತಿಕ ಅಭಿಯಾನವಾಗಿದೆ.

1990 ಇನ್ನೊಸೆಂಟಿ ಘೋಷಣೆಯ ನೆನಪಿಗಾಗಿ ಪ್ರತಿ ಆಗಸ್ಟ್ 1-7ರಂದು ವಿಶ್ವ ಸ್ತನ್ಯಪಾನ ಸಪ್ತಾಹ ಆಚರಿಸಲಾಗುತ್ತದೆ.ಸ್ತನ್ಯಪಾನವನ್ನು ಬೆಂಬಲಿಸಿ, ಪೋಷಿಸಿ ಹಾಗು ಪ್ರೋತ್ಸಾಹಿಸಿವುದು ಎಲ್ಲಾ ವಿಶ್ವ ಆರೋಗ್ಯ ಸಂಘ ಸಂಸ್ಥೆಗಳು, ಯೂನಿಸೆಫ್, ನೀತಿ ನಿರೂಪಕರು ಇದಕ್ಕೆ ಬದ್ಧರಾಗಿದ್ದಾರೆ. ಎದೆ ಹಾಲುಣಿಸುವಿಕೆಯು ಮಗುವಿಗೆ ಪರಿಪೂರ್ಣವಾದ ಆಹಾರ ಹಾಗು ಆಹಾರ ಭದ್ರತೆಯನ್ನೊದಗಿಸುತ್ತದೆ. ಆರು ತಿಂಗಳು ತುಂಬುವವರೆಗೂ ಎದೆ ಹಾಲನ್ನಲ್ಲದೇ ಬೇರೆ ಏನನ್ನು ಕೊಡಬಾರದು ಹಾಗು ಹುಟ್ಟಿದ ಅರ್ಧ ಗಂಟೆಯೊಳಗೆ ಎದೆ ಹಾಲನ್ನು ಕೊಡಬೇಕು ಎಂದು ವಿಶ್ವ ಸಂಸ್ಥೆ ಹೇಳುತ್ತದೆ. ಪೌಷ್ಟಿಕವಾದ ಪೂರಕ ಆಹಾರವನ್ನು 7ನೇ ತಿಂಗಳಿನಲ್ಲಿ ಶುರು ಮಾಡಿ, ಜೊತೆಗೆ ಎರಡು ವರ್ಷಗಳವರೆಗೆ ಎದೆ ಹಾಲು ಕೊಡುವುದನ್ನು ಮುಂದುವರೆಸುವುದಾಗಿದೆ.

ಭೂತಾಯಿಯ ರಕ್ಷಣೆ ತಾಯಿಯ ಎದೆ ಹಾಲಿನಿಂದ, ಎಂತಹ ಅದ್ಭುತವಾದ ಮಾತು.ಎದೆ ಹಾಲುಣಿಸುವುದನ್ನು ಬೆಂಬಲಿಸುವುದು ಸಮಾಜದದಲ್ಲಿ ಒಂದು ಸಂಚಲನ ತರಲು ಮುಖ್ಯವಾದ ಕಾರ್ಯತಂತ್ರವಾಗಿದೆ.

ಯಾವುದೇ ಸುಸ್ಥಿರವಾದ ಬೆಳವಣಿಗೆಗೆ ಭದ್ರವಾದ ಬುನಾದಿಯ ಅಗತ್ಯವಿದೆ. ಹಾಗೆ ಮಗುವಿನ ಆರೋಗ್ಯಕ್ಕೆ ಭದ್ರವಾದ ಬುನಾದಿಯೆಂದರೆ ತಾಯಿಯ ಎದೆ ಹಾಲು. ಡಾ.ಮೈಕಲ್ ಬ್ಯಾರಿ, ಸ್ಟ್ಯಾನ್ಫೋರ್ಡ್ ಸ್ಕೂಲ್ ನ ಹಿರಿಯ ನಿರ್ದೇಶಕರು ಏನು ಹೇಳುತ್ತಾರೆಂದರೆ, ಅಪೌಷ್ಟಿಕತೆ ಹಾಗು ಬಡತನವೇ ಮುಖ್ಯವಾಗಿ ನೆಲೆಗೊಳ್ಳಲು ಕಾರಣ ಎದೆ ಹಾಲುಣಿಸದಿರುವುದು ಹಾಗು ಹಾಲು ತಯಾರಿಸಲು ಇಲ್ಲಿ ಸ್ವಚ್ಛವಾದ ನೀರು ಕೂಡ ಸಿಗದೇ ಇರುವುದು ಕಾರಣ. ಎದೆ ಹಾಲು ಕುಡಿಸದೇ ಇರುವುದು ತಾಯಿ ಗರ್ಭಿಣಿ ಇದ್ದಾಗ ಧೂಮಪಾನ ಮಾಡುವುದಕ್ಕೆ ಸಮಾನ ಎಂದು ಆರೋಗ್ಯ ವಿಭಾಗದ ಹಿರಿಯ ವಿಜ್ಞಾನಿ ಹೇಳುತ್ತಾರೆ. ಎದೆ ಹಾಲು ಆರ್ಥಿಕ ವ್ಯವಸ್ಥೆಯ ರಕ್ಷಕ ಹೇಗೆಂದರೆ, ಅಮೆರಿಕೆಯ ಶೇಕಡಾ 90% ತಾಯಿಂದಿರು 6 ತಿಂಗಳ ವರೆಗೆ ಎದೆಹಾಲುಣಿಸಿದರೆ ವಾರ್ಷಿಕವಾಗಿ 13 ಶತಕೋಟಿ ಡಾಲರ್ ನಷ್ಟು ಹಣವನ್ನು ಉಳಿಸಬಹುದಾಗಿದೆ. ಜಾಗತಿಕ ಮಟ್ಟದಲ್ಲಿ ಎದೆ ಹಾಲುಣಿಸುವುದನ್ನು ಹೆಚ್ಚಿಸುವುದರಿಂದ ವಾರ್ಷಿಕವಾಗಿ 20,000 ತಾಯಂದಿರ ಮರಣವನ್ನು, 823,000 ಮಕ್ಕಳ ಮರಣವನ್ನು ಹಾಗು 302 ಶತಕೋಟಿ ಡಾಲರ್ ನಷ್ಟು ಹಣ ನಷ್ಟವಾಗುವುದನ್ನು ತಪ್ಪಿಸಬಹುದಾಗಿದೆ. ಸದೃಢವಾದ ಪೃಥ್ವಿಯನ್ನು ನಿರ್ಮಿಸಲು, ಎದೆ ಹಾಲುಣಿಸುವುದರಿಂದ ಸಾಧ್ಯವಾಗುತ್ತದೆ. ಅದು ಹೇಗೆ ಎಂಬುದನ್ನು ಅವಲೋಕಿಸೋಣ.

**ಉದ್ಭವಿಸಿತ್ತಿರುವ ಜಾಗತಿಕ ಆರೋಗ್ಯ ಹಾಗು ಪೌಷ್ಟಿಕ ಆಹಾರದಲ್ಲಿನ ಬದಲಾವಣೆ :** ಇತ್ತೀಚಿನ ದಿನಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳು ಆಗಿದ್ದರೂ ಕೂಡ, ಪದೇ ಪದೇ ಹೊಸ ಸವಾಲುಗಳು, ರೋಗಗಳು ಹುಟ್ಟಿಕೊಳ್ಳುತ್ತಲೇ ಇವೆ. ಹೊಸ ಸಮಸ್ಯೆ ಎಂದರೆ ಈಗ ಎದುರಿಸುತ್ತಿರುವ ಕೋವಿಡ್-19 ಪಿಡುಗು, ನೈಸರ್ಗಿಕ ವಿಕೋಪಗಳು, ಆರೋಗ್ಯ ವ್ಯವಸ್ಥೆಯ ಕೊರತೆ ಎಲ್ಲವನ್ನೂ ಎದುರಿಸಬೇಕಾಗಿದೆ. ಜಾಗತಿಕ ಮಟ್ಟದಲ್ಲಿ ಇತ್ತೀಚಿನ ಚರ್ಚೆಯಲ್ಲಿ, ಪ್ರಕೃತಿಯ ಅಸಮತೋಲನ ಹಾಗು ಎದೆ ಹಾಲುಣಿಸುವಿಕೆಯ ಸಮಸ್ಯೆಗಳ್ಳನ್ನು ಎತ್ತಿ ಹಿಡಿದು ಹೆಚ್ಚಿನ ರೀತಿಯಲ್ಲಿ, ಈ ಸಮಸ್ಯಗೆ ಬದಲಾವಣೆ ತರಲು ತಾಯಂದಿರ ಸಹಾಯ ಪಡೆಯುವುದಾಗಿದೆ. ನಿಸ್ಸಂಶಯವಾಗಿ ಎದೆ ಹಾಲುಣಿಸುವಿಕೆಯು ಪೃಥ್ವಿಯ ಸಂರಕ್ಷಣೆಯಲ್ಲಿ ಪ್ರಮುಖವಾದ ಪಾತ್ರ ವಹಿಸುವುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ಈ ಸಂದೇಶವನ್ನು ಯಶಸ್ವಿಯಾಗಿ ಜನರಿಗೆ ತಲುಪಿಸಿ. ಪರಿಸರ ಸಂರಕ್ಷಣೆಯಲ್ಲಿ ತೊಡಗಿರುವ ಗುಂಪುಗಳ ಸಹಕಾರದೊಂದಿಗೆ ಕೈಜೋಡಿಸಿ ಒಟ್ಟಾಗಿ ಕೆಲಸ ಮಾಡುವುದಲ್ಲದೆ ಹೇಗೆ ಪರಿಸರ ಸಂರಕ್ಷಣೆಯಲ್ಲಿ ಎದೆ ಹಾಲುಣಿಸುವಿಕೆಯು ಪಾತ್ರ ವಹಿಸುತ್ತದೆ ಎಂಬುದನ್ನು ಸ್ಪಷ್ಟೀಕರಿಸಬೇಕಿದೆ. ತಾಯಂದರಿಗೆ ಎದೆ ಹಾಲುಣಿಸಿ, ಪೃಥ್ವಿಯನ್ನು ಸಂರಕ್ಷಿಸಿ ಎಂದು ತಿಳಿಸಿದರೆ, ಅದರಲ್ಲೂ ಎದೆ ಹಾಲುಣಿಸದ ತಾಯಂದಿರಲ್ಲಿ, ಕೋಪ, ದುಃಖ, ಹತಾಶೆ, ತಮ್ಮಿಂದಾದ ಹಾನಿಯ ಬಗ್ಗೆ ಬೇಜಾರು ಗೊಳ್ಳುತ್ತಾರೆ. ವಿಶ್ವದಲ್ಲಿ, ಕಡಿಮೆ ಪ್ರಮಾಣದ ಎದೆ ಹಾಲುಣಿಸುವಿಕೆಯನ್ನು ಬ್ರಿಟನ್ ದೇಶದಲ್ಲಿ ಕಾಣಬಹುದಾಗಿದೆ, ಆದರೆ ತಾಯಂದರಿಗೆ ಎದೆ ಹಾಲುಣಿಸಬಾರದೆಂದೇನೂ ಇಲ್ಲ. ಎದೆ ಹಾಲುಣಿಸಬೇಕು ಎಂದು ಬಯಸುವ ಹೆಚ್ಚಿನ ತಾಯಿಂದಿರಿಗೆ ಆಗುತ್ತಿಲ್ಲ. ಅವರ ಕೈಮೀರಿ ಅನೇಕ ಕಾರಣಗಳಿಂದಾಗಿ ಅತ್ಯಂತ ನಿರಾಶರಾಗಿರುವಾಗ, ಪ್ರಯತ್ನ ಮಾಡಿ ಎಂದೊಡನೆ, ಕಿರಿಕಿರಿಗೊಳ್ಳುವರು. ಇವೆಲ್ಲಾ ಅಡ್ಡಿ-ಆತಂಕಗಳನ್ನು ನಿವಾರಿಸುವತ್ತ ಗಮನವಿಡದೆ, ಎದೆ ಹಾಲುಣಿಸಿ ಎಂದರೆ ಯಾವುದೇ ಬದಲಾವಣೆ ತರುವುದಿಲ್ಲ. ಇದೇ ತರಹದ



ಹೋಲಿಕೆಯುಳ್ಳ, ಪರಿಸರದ ಕಾಳಜಿ ಹಾಗು ಶಿಶುಗಳ ಹಾಲುಣಿಸುವಿಕೆಯ ಸಮಸ್ಯೆಗಳಿಗೆ, ಸಮರ್ಪಕವಾಗಿ ಯಾವುದೇ ತರಹದ ಯೋಜನೆ ಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗಿದೆ. ವೈಯಕ್ತಿಕವಾಗಿ ಎಲ್ಲರ ಪಾತ್ರವು ಮುಖ್ಯವಾಗಿದೆ. ಅಷ್ಟೇ ಅಲ್ಲ, ನಿಜವಾದ ಬದಲಾವಣೆ ಆಗಬೇಕಾದರೆ ಸಮಾಜದ ತೊಡಗುವಿಕೆಯೂ ಕೂಡ ಮುಖ್ಯವಾಗುತ್ತದೆ.

**ಹವಾಮಾನ ಬದಲಾವಣೆ :** ಪ್ರಕೃತಿಯ ಶೋಷಣೆ ನಿರಂತರವಾಗಿ ಮಾನವನಿಂದ ನಡೆಯುತ್ತಿದೆ.ಇಂದಿನ ಜನತೆ ಎದುರಿಸುತ್ತಿರುವ ಅತ್ಯಂತ ಮುಖ್ಯವಾದ ಸಮಸ್ಯೆ ಎಂದರೆ ಪ್ರಕೃತಿಯ ಶೋಷಣೆಯಿಂದಾಗಿ ಜಾಗತಿಕ ತಾಪಮಾನದಲ್ಲಿ ಒಂದು ಡಿಗ್ರಿ ಸೆಂಟಿ ಗ್ರೇಡ್ ನಷ್ಟು ಏರಿಕೆಯಾಗಿದೆ. ಹಸಿರು ಮನೆ ಅನಿಲ ಹೊರಸೂಸುತ್ತಿರುವ ಇಂಗಾಲದ ಡೈಆಕ್ಸೈಡ್, ಮಿಥೇನ್, ನೈಟ್ರಸ್ ಆಕ್ಸೈಡ್ ಮತ್ತು ಮಾನವನ ಚಟುವಟಿಕೆ ಯಿಂದಾಗೆ ಇನ್ನು ಅನೇಕ ವಿಷಾನಿಲಗಳು ಪರಿಸರಕ್ಕೆ ಹಾನಿ ಉಂಟು ಮಾಡುತ್ತಿವೆ. ಅತ್ಯಾಶ್ಚರ್ಯಕರ ಸಂಗತಿಯೆಂದರೆ ಕೋವಿಡ್-19 ಸಾಂಕ್ರಾಮಿಕ ದಿಂದಾಗಿ, ವಿಷಾನಿಲದ ಹೊರಸೂಸುಸಿವಿಕೆ ಇದ್ದಕ್ಕಿದ್ದ ಹಾಗೆ ಕಡಿಮೆಯಾಗಿದೆ. ಇದರಿಂದ ಮಾನವೇ ಅನೇಕ ಪಾಠಗಳನ್ನು ಕಲಿಯಬೇಕಾಗಿದೆ. ಪೃಥ್ವಿಯ ಸಂರಕ್ಷಣೆಯತ್ತ ಗಮನಹರಿಸಬೇಕಾಗಿದೆ. ಸಂಪನ್ಮೂಲದ ಅವನತಿಯಿಂದಾಗಿ, ವಾಯು, ನೀರು, ಆಹಾರದ ಮಾಲಿನ್ಯತೆ, ಹೆಚ್ಚುವರಿ ಸಂಪನ್ಮೂಲದ ಬಳಕೆ, ಹೆಚ್ಚಾದ ತ್ಯಾಜ್ಯ ವಸ್ತುಗಳು , ಅನೇಕ ಪ್ರಾಣಿ ಸಂಕುಲಗಳ ನಾಶಕ್ಕೆ, ಮಾನವನ ಹೆಚ್ಚಿದ ಕಾರ್ಯ ಚಟುವಟಿಕಗಳೇ ಕಾರಣ. ನಮ್ಮ ಆಹಾರದ ವ್ಯವಸ್ಥೆ ಹಾಗೂ ಬಳಸುವ ವಿಧಾನ ಕೂಡ ಪ್ರಕೃತಿಯ ಅವನತಿಗೆ ಮತ್ತು ಹವಾಮಾನ ಬದಲಾವಣೆಗೆ ಮುಖ್ಯ ಕಾರಣ. ವಿಶ್ವವ್ಯಾಪಿ ಸಾಂಕ್ರಾಮಿಕ ರೋಗವಾದ ಕೋವಿಡ್-19 ನಮಗೆಲ್ಲಾ ಇದು ಒಂದು ಎಚ್ಚರಿಕೆಯ ಘಂಟೆ, ಈಗಲೂ ಕೂಡ ನಾವುಗಳು ಸುಧಾರಿಸದಿದ್ದರೆ ಮುಂದೆ ಇನ್ನೂ ಕೆಟ್ಟ ರೀತಿಯ ಭೀಕರ ಪರಿಣಾಮವನ್ನು ಅನುಭವಿಸುವುದಲ್ಲದೇ, ಮುಂದಿನ ಪೀಳಿಗೆಗೆ ಏನೂ ಇರುವುದಿಲ್ಲ. ಪ್ರಕೃತಿಯ ವಿರುದ್ಧ, ಎಲೆ ಮಾನವ ನೀನು ನನ್ನನ್ನು ಗೆಲ್ಲಲಾರೆ ಎಂಬುದಾಗಿದೆ. ಅದಕ್ಕಾಗಿ ಪ್ರಕೃತಿಯೇ ತನ್ನನ್ನು ರಕ್ಷಿಸಿಕೊಳ್ಳುತ್ತಿದೆ. ಎಲ್ಲಾ ಸಾಮಾಜಿಕ ಹೊಣೆಯನ್ನು ಹೊತ್ತಿರುವ ಮಾನವ ಎಚ್ಚೆತ್ತು ಕೊಳ್ಳಬೇಕಾಗಿದೆ .ಪೃಥ್ವಿಯನ್ನು ಸಂರಕ್ಷಿಸಲು ನಾವೆಲ್ಲಾ ಕೂಡಿ ಇಂಗಾಲದ ಹೆಜ್ಜೆ ಗುರುತು ಹಾಗು ಪರಿಸರ ವಿಜ್ಞಾನದ ಹೆಜ್ಜೆ ಗುರುತನ್ನು ಕಡಿಮೆ ಮಾಡುವತ್ತ, ಮುಂದಿನ ಪೀಳಿಗೆಗೆ ನಾವು ಕೊಡುವ ಕೊಡುಗುಗಳೇನು ಎಂಬುದನ್ನು ಚಿಂತಿಸಿ ಕಾರ್ಯೋನ್ಮುಖರಾಗಬೇಕಿದೆ. ಎಲ್ಲೆಡೆ ವ್ಯಾಪಿಸುತ್ತಿರುವ ಕೋವಿಡ್-19 ಕೂಡ ಶಿಶುಗಳ ಆಹಾರದ ಮೇಲೆ ಬೀರುವ ಪರಿಣಾಮವನ್ನು ಎದುರಿಸ ಬೇಕಾಗಿದೆ.

**ಕೃತಕ ಹಾಲು :** ಸುಮಾರು 40ರಿಂದ 50 ಹಾಲು ಉತ್ಪಾದಿಸುವ ಘಟಕಗಳಿವೆ. ಹಾಲಿನ ಉತ್ಪಾದನೆಗಾಗಿ,ಹಸು ಸಾಕಾಣಿಕೆ, ಹುಲ್ಲು, ಮೇವು, ನೀರು, ವಿದ್ಯುತ್, ಸಂಪನ್ಮೂಲಗಳ ಬಳಕೆಯಾಗುವುದು, ಮುಂದೆ ಹಾಲಿನ ಪುಡಿಯನ್ನು ಶೇಖರಿಸಲು ಡಬ್ಬಿಗಳು ಪ್ಯಾಕೇಜಿಂಗ್, ವ್ಯವಸ್ಥೆ, ವಿತರಣೆ, ಗ್ರಾಹಕರಿಗೆ ತಲುಪಲು ಸಾರಿಗೆ ಎಲ್ಲಾ ಲೆಕ್ಕ ಹಾಕಿದರೆ, ನಾವು ಎಷ್ಟು ಪರಿಸರ ಹಾಳು ಮಾಡುತ್ತಲಿದ್ದೇವೆ ಎಂಬುದು ತಿಳಿಯುತ್ತದೆ.

**ಪ್ರಕೃತಿಯ ಶೋಷಣೆ ಮತ್ತು ವೆಚ್ಚಗಳು / ಖರ್ಚುಗಳು :** ಎದೆ ಹಾಲುಣಿಸುವಿಕೆ ಹಾಗು ಪರಿಸರ ಬದಲಾವಣೆಯ ಸುತ್ತ ಇರುವ ವಿಜ್ಞಾನ ಏನು ಹೇಳುತ್ತದೆ.ಸ್ತನ್ಯಪಾನ ಮಾಡುವುದರಿಂದ ಕಡಿಮೆ ನೀರು ಹಾಗು ಭೂ ಸಂಪನ್ಮೂಲದ ಬಳಕೆಯಾಗುವುದರಿಂದ, ಕಡಿಮೆ ಕಾರ್ಬನ್ ಉತ್ಪಾದನೆ. ಹಾಗಾಗಿ ಅತ್ಯಂತ ಕಡಿಮೆ ಅಥವಾ ಶೂನ್ಯ ತ್ಯಾಜ ಉತ್ಪಾದನೆ ಉಂಟಾಗುವುದು. ಇತ್ತೀಚಿನ ಅಧ್ಯಯನದ ಪ್ರಕಾರ ಒಂದು ಮಗುವಿಗೆ ಆರು ತಿಂಗಳವರೆಗೆ ಎದೆ ಹಾಲುಣಿಸುವುದರಿಂದ 95-153ಕೆಜಿ ಕಾರ್ಬನ್ ಈ (Carbon e) ಉತ್ಪದಾನೆಯನ್ನು, ಕೃತಕ ಹಾಲಿಗೆ ಹೋಲಿಸಿದಾಗ ತಡೆಗಟ್ಟಬಹುದಾಗಿದೆ. ಎಲ್ಲಾ ಮಕ್ಕಳಿಗೂ ಆರು ತಿಂಗಳವರೆಗೆ, ಬ್ರಿಟನ್ ದೇಶದಲ್ಲಿ ಹಾಲುಣಿಸಿದರೆ ಕಾರ್ಬನ್ ಪರಿಸರಕ್ಕೆ ಹೊರ ಸೂಸುವುದನ್ನು ತಡೆಗಟ್ಟಬಹುದು. ಸುಮಾರು ಕುಟುಂಬಗಳು 54 ಶತಕೋಟಿ ಡಾಲರ್ ನಷ್ಟು ಹಣವನ್ನು ಕೃತಕ ಹಾಲು ಕೊಳ್ಳಲು ವ್ಯಯಿಸುತ್ತಾರೆ. ವಾರ್ಷಿಕವಾಗಿ ಖಂಡಗಳಲ್ಲಿ ಸುಮಾರು 720 ಟನ್ ನಷ್ಟು ಕೃತಕ ಹಾಲು ಮಾರಾಟವಾಗುತ್ತದೆ. ಇದರಿಂದಾಗಿ ಸುಮಾರು 2-9ಮಿಲಿಯನ್ ಟನ್ ನ್ನಷ್ಟು ಹಸಿರು ಮನೆ ಅನಿಲ ಉತ್ಪಾದನೆಯಾಗುತ್ತದೆ.ಇದಕ್ಕೆ ಸಮನಾದ ಉದಾಹರಣೆ ಕೊಡಬೇಕೆಂದರೆ ,50,000-75,000 ವಾಹನಗಳು ಒಂದು ವರ್ಷದವರೆಗೆ ಓಡಾಡದೇ ಇದ್ದರೆ ಆಗುವ ಪರಿಣಾಮವನ್ನು ಕಲ್ಪಿಸಬಹುದು.

ಒಂದು ಕೆಜಿ ಕೃತಕ ಹಾಲಿನ ಪುಡಿಯನ್ನು ಉತ್ಪಾದಿಸಲು ಸುಮಾರು 4700 ಲೀಟರ್‌ನಷ್ಟು ನೀರು ಬೇಕಾಗುತ್ತದೆ. ಅದೇ ಎದೆ ಹಾಲು ಕುಡಿಸುವುದರಿಂದ ಕಡಿಮೆ ಹಸಿರು ಮನೆ ಅನಿಲ ಉತ್ಪಾದನೆ ಹಾಗು ಪರಿಸರ ಮಾಲಿನ್ಯತೆಯನ್ನು ತಡೆಗಟ್ಟ ಬಹುದು. ಎದೆ ಹಾಲುಣಿಸುವುದರಿಂದ, ಸಂಪನ್ಮೂಲಗಳ ಬಳಕೆ, ವಿದ್ಯುತ್, ಪ್ರಕೃತಿಯ ಶೋಷಣೆ, ನೀರು, ಪ್ಯಾಕೇಜಿಂಗ್, ಸಾರಿಗೆಯ ವ್ಯವಸ್ಥೆ ಬೇಕಾಗುವುದಿಲ್ಲ, ಇದರಿಂದಾಗಿ, ಪರಿಸರಕ್ಕೆ ಇಂಗಾಲದ ಹೊರಸೂಸುವಿಕೆ ಹಾಗು ಹಸಿರು ಮನೆ ಅನಿಲದ ಉತ್ಪಾದನೆ ಕಡಿಮೆಯಾಗುವುದಲ್ಲದೆ, ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಸಹಾಯವಾಗು ವುದು. ಹಾಗಾಗಿ ಎದೆ ಹಾಲನ್ನು 'ಹಸಿರು' ಎಂದು ಪರಿಗಣಿಸಲಾಗಿದೆ ಎದೆಹಾಲು ಪರಿಸರ ಪ್ರೇಮಿ.

**ಸುಸ್ಥಿರ ಅಭಿವೃದ್ಧಿಯ ಬೆಳವಣಿಗೆ :** ಮುಂದೆ ಮಗುವಿನ ಭವಿಷ್ಯದಲ್ಲಿ ಸದೃಢ ಆರೋಗ್ಯವನ್ನು ಹೊಂದಲು ಮೊಟ್ಟ ಮೊದಲ ನಿರ್ಣಾಯಕ ಹೆಜ್ಜೆ ಎಂದರೆ ಎದೆ ಹಾಲುಣಿಸುವಿಕೆ. ತಾಯಿ ಹಾಗು ಮಗುವಿನ ಉಳಿಯುವಿಕೆ ಮತ್ತು ಉತ್ತಮ ಆರೋಗ್ಯಕ್ಕೆ, ಸ್ತನ್ಯಪಾನವನ್ನು ಸಂರಕ್ಷಿಸಿ, ಪ್ರೋತ್ಸಾಹಿಸಿವುದರಿಂದ ಒಂದು ಪ್ರಾಯೋಗಿಕ ಹೆಜ್ಜೆಯಾಗಿ, 2030ರ ಸುಸ್ಥಿರ ಬೆಳವಣಿಗೆಯ ಗುರಿಗಳೊಂದಿಗೆ ಬೆಸಿದಿದೆ.

**ಸಾಧಿಸಬೇಕಾದ 17 ಜಾಗತಿಕ ಸುಸ್ಥಿರ ಬೆಳವಣಿಗೆಯ ಗುರಿಗಳು:** ಮುಖ್ಯವಾಗಿ ಗಮನಹರಿಸ ಬೇಕಾದ ವಿಷಯವೇ ನೆಂದರೆ 17 ಜಾಗತಿಕ ಸಮರ್ಥನೀಯ **(4ನೇ ಪುಟಕ್ಕೆ)**

### ಆಗಸ್ಟ್ 1 ರಿಂದ 7 ರವರೆಗೆ ವಿಶ್ವ ಸ್ತನಪಾನ ಸಪ್ತಾಹ



-ಡಾ.ಲತಾ ಜಿ.ಎಸ್.
ಪ್ರಾಧ್ಯಾಪಕರು,
ಮಕ್ಕಳ ವಿಭಾಗ, ಎಸ್. ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ,
ದಾವಣಗೆರೆ.

# ಹರಿಹರ : ಸಡಗರ, ಸಂಭ್ರಮದ ಬಕ್ರೀದ್

ಹರಿಹರ ಆ.1 - ಈದ್ ಉಲ್ ಅಜ್ಹಾ (ಬಕ್ರೀದ್) ಹಬ್ಬವನ್ನು ಶನಿವಾರ ತಾಲೂಕಿನಾದ್ಯಂತ ಮುಸ್ಲಿಂ ಸಮಾಜದವರು ಸಡಗರ, ಸಂಭ್ರಮದಿಂದ ಆಚರಿಸಿದರು.



ಕೊರೊನಾ ಹಾವಳಿ ಹಿನ್ನೆಲೆಯಲ್ಲಿ ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸುವ ಬದಲು ಮಸೀದಿ, ಮನೆಗಳಲ್ಲೇ ಹಬ್ಬದ ಪ್ರಾರ್ಥನೆ ಪ್ರಕ್ರಿಯೆ ನಡೆಸಲಾಯಿತು. ಬೆಳಿಗ್ಗೆ 7ರಿಂದಲೇ ಆಯಾ ಓಣಿಗಳ ಮಸೀದಿಗಳಲ್ಲಿ ಸಾಮಾಜಿಕ ಅಂತರದೊಂದಿಗೆ ಜನರು ಸಾಮೂಹಿಕ ಪ್ರಾರ್ಥನೆ ನೆರವೇರಿಸಿದರು. ಕೆಲವರು ಮನೆಗಳಲ್ಲೇ ಪ್ರಾರ್ಥನೆ ಮಾಡಿದರು. ಧರ್ಮಗುರುಗಳು ಸಂಕ್ಷಿಪ್ತ ಪ್ರವಚನ ನೀಡಿದರು. ವಿಶೇಷವಾಗಿ ಕೋವಿಡ್ ನಿವಾರಣೆಗಾಗಿ ಪ್ರಾರ್ಥನೆ ಮಾಡಲಾಯಿತು.

ವಯೋವೃದ್ಧರಾಗಿದ್ದಾಗ ಜನಿಸಿದ ಪುತ್ರನನ್ನು ಅಲ್ಲಾ ಹನ ಸೂಚನೆಯಂತೆ ಬಲಿ ನೀಡಲು ಸಿದ್ಧನಾದ ತಂದೆಯ ಪ್ರಸಂಗವೊಂದು ಇಸ್ಲಾಂ ಧರ್ಮಗ್ರಂಥದಲ್ಲಿದೆ. ಈ ಪ್ರಸಂಗದ ಸ್ಮರಣೆಗಾಗಿ ಬಕ್ರೀದ್ ಹಬ್ಬವನ್ನು ಆಚರಿಸಲಾಗುತ್ತಿದೆ.

ಇಲ್ಲಿ ಪ್ರಾಣಿ ಬಲಿ ಸಾಂಕೇತಿಕವಾಗಿದ್ದು, ಒಳಿತಿಗಾಗಿ ಪ್ರತಿಯೊಬ್ಬರಲ್ಲೂ ತ್ಯಾಗ, ಬಲಿದಾನದ ಗುಣ ಇರಬೇಕೆಂಬುದು ಈ ಹಬ್ಬದಾಚರಣೆಯ ಸಾರವಾಗಿದೆ.

ಮುಂಚಿನಂತೆ ಬೃಹತ್ ಸಂಖ್ಯೆಯಲ್ಲಿ ಜನತೆ ಜಮಾವಣೆ ಮಾಡಿ ಪ್ರವಚನ ನೀಡಲು ಈಗ ಅವಕಾಶವಿಲ್ಲ. ಹೀಗಾಗಿ ಹಲವು ಧರ್ಮಗುರುಗಳು ಯೂಟ್ಯೂಬ್, ವಾಟ್ಸಾಪ್, ಫೇಸ್‌ಬುಕ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬದ ಪ್ರವಚನದ ಆಡಿಯೋ, ವೀಡಿಯೋ ರೆಕಾರ್ಡ್ ಬಿಡುಗಡೆ ಮಾಡಿದರು.

ಮುಸ್ಲಿಂ ಧರ್ಮೀಯರಿಗೆ ರಂಜಾನ್ ಮತ್ತು ಬಕ್ರೀದ್ ದೊಡ್ಡ ಹಬ್ಬ. ಹಬ್ಬಕ್ಕಾಗಿ ಉದ್ಯೋಗಕ್ಕಾಗಿ ದೂರದ ಊರು, ಹೊರರಾಜ್ಯಗಳಲ್ಲಿ ನೆಲೆಸಿರುವ ಮಕ್ಕಳು, ಸೊಸೆಯಂದಿರು ಆಗಮಿಸುತ್ತಿದ್ದರು. ಆದರೆ ಕೋವಿಡ್‌ನಿಂದಾಗಿ ಕ್ವಾರಂಟೈನ್‌ಗೆ ಅಂಜಿ ಅವರು ಆಗಮಿಸಲಿಲ್ಲ. ಆದಾಯದಲ್ಲಿ ಕೊರತೆ ಇರುವುದರಿಂದ ಬಹುತೇಕರು ಪ್ರಾಣಿ ಬಲಿಯಿಂದ ದೂರ ಉಳಿದರು. ಬಲಿ ಕೊಟ್ಟವರು ಮಾಂಸವನ್ನು ಸಂಬಂಧಿಕರು, ಬಡವರಿಗೆ ಹಂಚಿಕೆ ಮಾಡಿದರು.

ಅನುಕೂಲ ಇದ್ದವರು ಬಟ್ಟೆ, ಬರೆ, ಚಪ್ಪಲಿ, ಅಲಂಕಾರಿಕ ವಸ್ತು ಸೇರಿದಂತೆ ಇತರೆ ಅಗತ್ಯ ಪರಿಕರಗಳನ್ನು ಖರೀದಿಸಿದರು. ಇತರರು ಇದ್ದುದರಲ್ಲೇ ಹಬ್ಬದಾಚರಣೆ ಮಾಡಿದರು. ಮಕ್ಕಳು ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿ ದರು. ಮನೆಗಳಲ್ಲಿ ಸಿಹಿ ಹಾಗೂ ಬಾಡೂಟದ ಅಡುಗೆ ಮಾಡಲಾಗಿತ್ತು.

# ಪ್ರಧಾನ ಕಾರ್ಯದರ್ಶಿ ಕೇಳಿದ್ದರೂ ಉಪಾಧ್ಯಕ್ಷ ಸ್ಥಾನ

### ವಿಜಯೇಂದ್ರ ಹುದ್ದೆಗಾಗಿ ಸಿಎಂ ಮನವಿಗೆ ಸಮ್ಮತಿಸದ ವರಿಷ್ಠರು

ಬೆಂಗಳೂರು, ಆ. 1 - ಪುತ್ರ ವಿಜಯೇಂದ್ರನಿಗೆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿ, ಮೈಸೂರು ವಿಭಾಗದ ಹೊಣೆಗಾರಿಕೆ ನೀಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವರಿಷ್ಠರಿಗೆ ಮನವಿ ಮಾಡಿದ್ದರಾದರೂ ವರಿಷ್ಠರು ಉಪಾಧ್ಯಕ್ಷ ಸ್ಥಾನ ನೀಡಿ, ಬೆಂಗಳೂರು ಕೇಂದ್ರದ ಉಸ್ತುವಾರಿ ವಹಿಸಿಕೊಟ್ಟಿದ್ದಾರೆ.

ಅಷ್ಟೇ ಅಲ್ಲ ಯಡಿಯೂರಪ್ಪ ಅವರ ಬೆಂಬಲಿಗರನ್ನು ಪ್ರಧಾನ ಕಾರ್ಯದರ್ಶಿಗಳ ಹುದ್ದೆಯಿಂದ ತೆರವುಗೊಳಿಸಿ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ತಮ್ಮ ಬೆಂಬಲಿಗರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಪದಾಧಿಕಾರಿಗಳ ಪಟ್ಟಿ ಮೇಲ್ನೋಟಕ್ಕೆ ಸಂತೋಷ್ ಅವರ ಹಿಡಿತದಲ್ಲೇ ಇರುವುದರ ಜೊತೆಗೆ ಮುಖ್ಯಮಂತ್ರಿಯವರ ಹಿಡಿತವನ್ನು ತಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಂಪುಟ ಪುನರ್‌ರಚಿಸಲು ಅವಕಾಶ ನೀಡುವಂತೆ ಮುಖ್ಯಮಂತ್ರಿಯವರು ಮಾಡಿರುವ ಮನವಿಗೆ ಇದುವರೆಗೂ ಹಸಿರು ನಿಶಾನೆ ತೋರಿಲ್ಲ. ರಾಜ್ಯ ನಾಯಕತ್ವ ಬದಲಾವಣೆ ಚಿಂತನೆಯಲ್ಲಿರುವ ವರಿಷ್ಠರು, ಮುಖ್ಯಮಂತ್ರಿಯವರ ಪುತ್ರ ವಿಜಯೇಂದ್ರನಿಗೆ ಪಕ್ಷದ ಹುದ್ದೆ ನೀಡಿ, ಅವಕಾಶ ಮಾಡಿಕೊಟ್ಟಿರುವುದರ ಜೊತೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ರಾಜ್ಯದ ಪರ್ಯಾಯ ನಾಯಕತ್ವಕ್ಕೆ ತರಲು ಬಿರುಸಿನ ಚಟುವಟಿಕೆ ನಡೆದಿದೆ.



ಜೋಶಿ ಅವರು ಇಂದು ಹುಬ್ಬಳ್ಳಿಯಲ್ಲಿ ಶಾಸಕರ ಗೌಪ್ಯ ಸಭೆ ನಡೆಸಿದ್ದಾರೆ. ಈ ಸಭೆಗೆ ಹಳೇ ಮೈಸೂರು ಭಾಗದ ಕೆಲವು ಮುಖಂಡರನ್ನು ಕರೆಸಿಕೊಂಡಿದ್ದಾರೆ.

ಅಷ್ಟೇ ಅಲ್ಲ ಇತ್ತೀಚಿಗೆ ನಾಮಕರಣಗೊಂಡ ಸದಸ್ಯರೊಬ್ಬರು ಇಂದಿನ ಸಭೆಯಲ್ಲಿ ಪ್ರಮುಖ ಪಾತ್ರ ವಹಿಸುವುದಲ್ಲದೆ, ಅವರೂ ಹುಬ್ಬಳ್ಳಿಯಲ್ಲಿದ್ದಾರೆ.

ನಾಯಕತ್ವ ಬದಲಾವಣೆ ಬಗ್ಗೆ ಗಂಭೀರ ಚಿಂತನೆಯಲ್ಲಿರುವ ವರಿಷ್ಠರು, ಪರ್ಯಾಯ ಮಾರ್ಗಗಳ ಬಗ್ಗೆ ಸಿದ್ದತೆ ನಡೆಸಿದ್ದಾರೆ.

ಜೋಶಿ ಅವರಿಗೆ ಇದರ ಹೊಣೆಗಾರಿಕೆ ವಹಿಸಿದ್ದು, ಅವರು ಈಗಾಗಲೇ ಪಕ್ಷದ ಶಾಸಕರೊಟ್ಟಿಗೆ ಗೌಪ್ಯವಾಗಿ ಎರಡು ಮೂರು ಸಭೆಗಳನ್ನು ನಡೆಸಿದ್ದಾರೆ. ಇಂದೂ ಕೂಡಾ ಹುಬ್ಬಳ್ಳಿಯಲ್ಲಿ ಇಂತಹದ್ದೇ ಸಭೆ ನಡೆಸಿ, ಯಡಿಯೂರಪ್ಪ ಅವರ ಬದಲಾವಣೆಗೆ ವೇದಿಕೆ ಸಿದ್ಧ ಮಾಡುತ್ತಿದ್ದಾರೆ.

ಬದಲಾವಣೆ ಸುಳಿವು ಅರಿತಿರುವ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ತಮ್ಮ ಬೆಂಬಲಿಗರಲ್ಲೇ ವರಿಷ್ಠರ ನಿರ್ಧಾರವನ್ನು ಹೇಳಿಕೊಂಡಿದ್ದಾರೆ.

ಆಗಸ್ಟ್ 15 ರ ನಂತರ ಮಹತ್ತರ ಬದಲಾವಣೆಯಾಗಬಹುದು. ಮುಂದೆ ನೋಡೋಣ ಎಂದಿದ್ದಾರೆ. ಈ ಮಧ್ಯೆ ಪಕ್ಷದ ಕಚೇರಿಗೆ ಧಾವಿಸಿದ ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿ, ವರಿಷ್ಠರು ನೀಡಿರುವ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸುವುದಾಗಿ ತಿಳಿಸಿದ್ದಾರೆ.

ಪಕ್ಷ ನನಗೆ ಬಡ್ತಿ ನೀಡಿದೆ. ನೀಡಿರುವ ಹೊಣೆಗಾರಿಕೆಯನ್ನು ಸಂಘಟನೆಗೆ ಬಳಸುವುದಾಗಿ ತಿಳಿಸಿದ್ದಾರೆ.

# ಪ್ರಾಥಮಿಕ, ಉನ್ನತ ಶಿಕ್ಷಣದಲ್ಲಿ ಬದಲಾವಣೆ ಸಾಧ್ಯ

ದಾವಣಗೆರೆ, ಆ.1- ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಜಾರಿಯಾದರೆ ದೇಶದಲ್ಲಿ ಶಾಲಾ ದಾಖಲಾತಿ ಹೆಚ್ಚಳ ಸೇರಿದಂತೆ ಉನ್ನತ ಶಿಕ್ಷಣದಲ್ಲಿ ಪ್ರಮುಖ ಸುಧಾರಣೆಗಳನ್ನು ಕಾಣಬಹುದಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕ ಎಸ್. ವೆಂಕಟೇಶ್ ಬಾಬು ಅಭಿಪ್ರಾಯ ಪಟ್ಟಿದ್ದಾರೆ.

ಶಿಕ್ಷಣ ನೀತಿಯು ಐದು ವರ್ಷದ ಪದವಿ/ಸ್ನಾತಕೋತ್ತರ ಕೋರ್ಸ್ ಅನ್ನು ಉತ್ತೇಜಿಸುತ್ತದೆ. ಅಲ್ಲದೆ, ಇ-ಕೋರ್ಸ್‌ಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಅಭಿವೃದ್ಧಿಪಡಿಸಲಾಗುವುದು. ವರ್ಚ್ಯುಯಲ್ ಪ್ರಯೋಗಾ ಲಯಗಳ ಅಭಿವೃದ್ಧಿ ಮತ್ತು ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ (ಎನ್‌ಇಟಿಎಫ್) ಸ್ಥಾಪಿಸಲು ಪ್ರಸ್ತಾವನೆ ಸ್ವಾಗತಾರ್ಹ. ಶಿಕ್ಷಣ ನೀತಿಯ ಇತರೆ ವೈಶಿಷ್ಟ್ಯಗಳೆಂದರೆ, ಶ್ರೇಣೀಕೃತ ಶೈಕ್ಷಣಿಕ ವ್ಯವಸ್ಥೆ, ಶಿಕ್ಷಣ ಸಂಸ್ಥೆಗಳ ಆಡಳಿತಾತ್ಮಕ ಮತ್ತು ಆರ್ಥಿಕ ಸ್ವಾಯತ್ತತೆ ಮತ್ತು ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಒಂದೇ ನಿಯಂತ್ರಕ ಸಂಸ್ಥೆ ಇರಲಿವೆ ಎಂದು ಹೇಳಿದ್ದಾರೆ.

# ನೂತನ ಶಿಕ್ಷಣ ನೀತಿ ಉದ್ಯೋಗ ನೀಡುವವರನ್ನು ರೂಪಿಸುತ್ತದೆ : ಮೋದಿ

ನವದೆಹಲಿ, ಆ. 1 – ನೂತನ ಶಿಕ್ಷಣ ನೀತಿಯು ವಿದ್ಯಾರ್ಥಿಗಳನ್ನು ಉದ್ಯೋಗ ಅರಸುವವರನ್ನಾಗಿ ಮಾಡದೇ, ಉದ್ಯೋಗ ನೀಡುವವರನ್ನಾಗಿ ಮಾಡಲು ಉದ್ದೇಶಿಸಿದೆ. ನೂತನ ನೀತಿಯಿಂದ ಶಿಕ್ಷಣದ ಉದ್ದೇಶ ಹಾಗೂ ಸಾರ ಸಂಪೂ ರ್ಣ ಬದಲಾಗಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ನಲ್ಲಿ ಸಮಾರೋಪ ಭಾಷಣ ಮಾಡುತ್ತಿದ್ದ ಅವರು, ಅಂತರ ಶಿಸ್ತೀಯ ಅಧ್ಯಯನದ ಕಾರಣದಿಂದಾಗಿ ವಿದ್ಯಾರ್ಥಿಗಳು ತಾವು ಬಯಸಿದ್ದರ ಕಡೆ ಹೆಚ್ಚು ಗಮನ ಹರಿಸಬಹುದಾಗಿದೆ ಎಂದಿದ್ದಾರೆ.

# ಜಿಎಂಐಟಿ ಕಾಲೇಜು ಸಾಧಕರಿಗೆ ಪ್ರಶಸ್ತಿ



ದಾವಣಗೆರೆ, ಆ.1- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಹಾಗೂ ಉದ್ಯೋಗಾಧಿಕಾರಿ ಟಿ.ಆರ್. ತೇಜಸ್ವಿ ಕಟ್ಟಿಮನಿ ಅವರಿಗೆ ಗೋಲ್ಡನ್ ಏಮ್ಸ್ ಅವಾರ್ಡ್ಸ್ ವತಿಯಿಂದ ಪ್ರಶಸ್ತಿ ಲಭಿಸಿದೆ.

ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಅವರಿಗೆ ಮೋಸ್ಟ್ ಇನ್ನೋವೇಟಿವ್ ಪ್ರಿನ್ಸಿಪಾಲ್ ಅವಾರ್ಡ್ ಹಾಗೂ ಉದ್ಯೋಗಾಧಿಕಾರಿ ಟಿ.ಆರ್. ತೇಜಸ್ವಿ ಕಟ್ಟಿಮನಿ ಅವರಿಗೆ ಮೋಸ್ಟ್ ಅಡ್ಮಿರಬಲ್ ಟಿಪಿಓ ಅವಾರ್ಡ್ ಲಭಿಸಿರುತ್ತದೆ. ಪ್ರಶಸ್ತಿಯನ್ನು ಗೋಲ್ಡನ್ ಏಮ್ಸ್ ಅವಾರ್ಡ್ಸ್ ಫಾರ್ ಎಕ್ಸಲೆನ್ಸ್ ಅಂಡ್ ಲೀಡರ್‌ಶಿಪ್ ಇನ್ ಎಜುಕೇಷನ್‌ನಿಂದ ಈಚೆಗೆ ನಡೆಸಿದ ಸಮಾರಂಭದಲ್ಲಿ ಘೋಷಿಸಿರುತ್ತಾರೆ.

ಪ್ರಶಸ್ತಿ ವಿಜೇತರಿಗೆ ಕಾಲೇಜು ಚೇರ್ಮನ್ ಜಿ.ಎಂ. ಲಿಂಗರಾಜು, ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಷ್ಚಂದ್ರ ಅಭಿನಂದಿಸಿದ್ದಾರೆ.

# ಕಾವ,ಜಾಣ, ರತ್ನ ಪರೀಕ್ಷೆಗೆ ಆಹ್ವಾನ

ದಾವಣಗೆರೆ, ಆ.1- ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಡಿಸೆಂಬರ್ ಕೊನೆ ವಾರದಲ್ಲಿ ನಡೆಸುವ ಪರೀಕ್ಷೆಗಳಿಗೆ ಇದೇ ದಿನಾಂಕ 21 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಸೆಪ್ಟೆಂಬರ್ 15 ರವರಿಗೆ ದಂಡ ಶುಲ್ಕ 50 ರೂಪಾಯಿ ಹೆಚ್ಚುವರಿಯಾಗಿ ನೀಡಿ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಆಗಸ್ಟ್ 10 ರಿಂದ 25 ರೂ. ಶುಲ್ಕ ಪಾವತಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾರಾಟ ಮಳಿಗೆಯಲ್ಲಿ (ಬೆಂಗಳೂರು) ಪಡೆಯಬಹುದು. ಅಥವಾ ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿಗೆ ಮೂವತ್ತು ರೂಪಾಯಿ ಮನಿಯಾರ್ಡರ್ ಮಾಡಿದರೆ ಅರ್ಜಿಯನ್ನು ಅಂಚೆ ಮೂಲಕ ಕಳುಹಿಸಲಾಗುವುದು. ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಕಾರ್ಯದರ್ಶಿ ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-18, ಫೋನ್: 080-26623584 ಸಂಪರ್ಕಿಸಲು ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಡಾ. ರಾಜಶೇಖರ ಹತಗುಂದಿ ತಿಳಿಸಿದ್ದಾರೆ.

# ರೈಲ್ವೆ ಖಾಸಗೀಕರಣ ಹಿಂಪಡೆಗೆ ಎಐಯುಟಿಯುಸಿ ಆಗ್ರಹ

ದಾವಣಗೆರೆ, ಆ.1- ರೈಲ್ವೆ ಖಾಸಗೀಕರಣವನ್ನು ಹಿಂತೆಗೆದುಕೊಳ್ಳ ಬೇಕೆಂಬುದು ಸೇರಿದಂತೆ ಇನ್ನಿತರೆ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದಲ್ಲಿಂದು ಎಐಯುಟಿಯುಸಿ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.





ನಂತರ ರೈಲ್ವೆ ನಿಲ್ದಾಣ ವ್ಯವಸ್ಥಾಪಕರ ಮುಖಾಂತರ ಕೇಂದ್ರ ರೈಲ್ವೆ ಮಂತ್ರಿಗಳಿಗೆ ಬೇಡಿಕೆಗಳುಳ್ಳ ಮನವಿ ಸಲ್ಲಿಸಲಾಯಿತು.

ರೈಲ್ವೇ ಇಲಾಖೆಯು ಭಾರತದಲ್ಲಿ ಅತಿದೊಡ್ಡ ಸಾರ್ವಜನಿಕ ಸಂಸ್ಥೆಯಾಗಿದ್ದು, ಸಾರ್ವಜನಿಕರ ಹಣದಿಂದ ಸ್ಥಾಪಿಸಲಾದ ಈ ಇಲಾಖೆಯು ರಾಷ್ಟ್ರೀಯ ಆಸ್ತಿಯಾಗಿದೆ. ಈ ಸಾರ್ವಜನಿಕ ಸಂಪತ್ತನ್ನು ಖಾಸಗಿ ಬಂಡವಾಳಗಾರರಿಗೆ ಹಸ್ತಾಂತರಿಸಲು ಯಾವುದೇ ರಾಜಕೀಯ ಪಕ್ಷಕ್ಕೆ ಆಳುವ ಪಕ್ಷಕ್ಕೆ ಅಧಿಕಾರವಿಲ್ಲ. ರೈಲ್ವೇ ಖಾಸಗೀಕರಣದ ಪರಿಣಾಮವಾಗಿ ರೈಲ್ವೇ ಟಿಕೆಟ್ ದರಗಳು ಗಣನೀಯವಾಗಿ ಹೆಚ್ಚಿಸಿ ಬಹುಸಂಖ್ಯಾತ ಜನಸಾಮಾನ್ಯರಿಗೆ ಪ್ರಯಾಣಿಸಲು ಸಾಧ್ಯವಾಗುವುದಿಲ್ಲ. ರೈಲ್ವೇ ಇಲಾಖೆಯನ್ನು ಕಟ್ಟಿ ಬೆಳೆಸಲು ಲಕ್ಷಾಂತರ ಉದ್ಯೋಗಿಗಳ ಶ್ರಮ ಹಾಗೂ ಸಾರ್ವಜನಿಕರ ಪಾಲು ಇದೆ. ಈಗ ಲಾಭ ಗಳಿಸುವ ಒಂದೇ ಉದ್ದೇಶದಿಂದ ಖಾಸಗಿಯವರಿಗೆ ಕೊಡಲಾಗುತ್ತಿದೆ. ಪ್ರಧಾನಿಯವರು ರೈಲ್ವೇ ಇಲಾಖೆಯನ್ನು ಖಾಸಗಿಯವರಿಗೆ ಕೊಡುವುದಿಲ್ಲ ಎಂದು ಸಂಸತ್ತಿನಲ್ಲಿ ಮೂರು ಬಾರಿ ಹೇಳಿದರು. ಇತ್ತೀಚೆಗೆ ಸ್ವಾವಲಂಬನೆ ಮಂತ್ರ ಪಠಿಸುತ್ತಾ ಅತ್ಯಂತ ಲಾಭದಾಯಕ ರೈಲ್ವೇ ಇಲಾಖೆಯನ್ನು ಖಾಸಗಿ ಲಾಭಕೋರ ಬಂಡವಾಳಗಾರರಿಗೆ ಧಾರೆ ಎರೆಯಲು ಯೋಜನೆ ರೂಪಿಸಿದ್ದಾರೆ. ಕೇಂದ್ರ ಸರ್ಕಾರವು ಈ ಜನವಿರೋಧಿ ನೀತಿಯನ್ನು ಕೈಬಿಡಬೇಕೆಂದು ಪ್ರತಿಭಟನಾಕಾರರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಮಂಜುನಾಥ್ ಕೈದಾಳೆ, ಜಿಲ್ಲಾ ಉಪಾಧ್ಯಕ್ಷ ತಿಪ್ಪೇಸ್ವಾಮಿ ಅಣಬೇರು, ಪ್ರಕಾಶ್, ಭಾರತಿ ಸೇರಿದಂತೆ ಜಿಲ್ಲಾ ಸಂಘಟನಾಕಾರರು ಇದ್ದರು.

# ಅಟಾರ್ನಿ ಜನರಲ್ ಸಲಹೆ ಕುರಿತು ಮಂಡಳಿಯಲ್ಲಿ ಚರ್ಚೆ

### ಜಿಎಸ್‌ಟಿ ಪರಿಹಾರ

ನವದೆಹಲಿ, ಆ. 1 – ರಾಜ್ಯಗಳಿಗೆ ಜಿ.ಎಸ್.ಟಿ. ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಅಭಿಪ್ರಾಯವನ್ನು ಕೇಳಲಾಗಿದ್ದು, ಅವರ ಅಭಿಪ್ರಾಯದ ಕುರಿತು ಜಿ. ಎಸ್.ಟಿ. ಮಂಡಳಿ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಕೇಂದ್ರ ಹಣ ಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಜಿ.ಎಸ್.ಟಿ. ಪರಿಹಾರಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಅಭಿಪ್ರಾಯದ ಕುರಿತು ಕೆಲ ರಾಜ್ಯಗಳು ಆಕ್ಷೇಪಣೆ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಕೇಳಲಾದ ಪ್ರಶ್ನೆಗೆ ಹಣಕಾಸು ಸಚಿವೆ ಈ ಉತ್ತರ ನೀಡಿದ್ದಾರೆ.

ಈ ಹಿಂದೆ ನಡೆದ ಜಿ.ಎಸ್.ಟಿ. ಮಂಡಳಿಯಲ್ಲಿ ಈ ವಿಷಯದ ಕುರಿತು ಚರ್ಚಿಸಲಾಗಿತ್ತು. ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಆನಂತರ ಅಟಾರ್ನಿ ಜನರಲ್ ಅವರಿಂದ ಕಾನೂನು ಅಭಿಪ್ರಾಯ ಪಡೆಯಲು ನಿರ್ಧರಿಸಲಾಗಿದೆ ಎಂದವರು ಹೇಳಿದ್ದಾರೆ.

ರಾಜ್ಯಗಳಿಗೆ ನೀಡಬೇಕಾದ ಪರಿಹಾರದಲ್ಲಿ ಆದ ಕೊರತೆಯನ್ನು ಭರಿಸಲು ಮಾರುಕಟ್ಟೆಯಿಂದ ಸಾಲ ಪಡೆಯುವ ಕಾನೂನು ಸಿಂಧುತ್ವದ ಕುರಿತು ಅಟಾರ್ನಿ ಜನರಲ್ ಅಭಿಪ್ರಾಯ ಕೇಳಲಾಗಿದೆ.

ಅಟಾರ್ನಿ ಜನರಲ್ ಅಭಿಪ್ರಾಯ ಸಲ್ಲಿಸಿದ್ದಾರೆ. ನಾವು ಜಿ.ಎಸ್.ಟಿ. ಮಂಡಳಿಯ ವಿಶೇಷ ಸಭೆ ಕರೆದು ಪರಿಹಾರದ ಕುರಿತು ಚರ್ಚಿಸುತ್ತೇವೆ. ಶೀಘ್ರದಲ್ಲೇ ಸಭೆಯ ದಿನಾಂಕ ನಿರ್ಧರಿಸಲಾಗುವುದು ಎಂದವರು ಹೇಳಿದ್ದಾರೆ.

ರಾಜ್ಯಗಳಿಗೆ ನೀಡಬೇಕಾದ ಜಿ.ಎಸ್.ಟಿ. ಪರಿಹಾರ ಕೊರತೆಯಾದಲ್ಲಿ ಕೇಂದ್ರ ಸರ್ಕಾರ ಸಾಲ ಪಡೆಯಬೇಕಾದ ಬದ್ಧತೆ ಹೊಂದಿಲ್ಲ ಹಾಗೂ ಕೊರತೆಯನ್ನು ನೀಗಿಸುವ ಮಾರ್ಗಗಳ ಕುರಿತು ಮಂಡಳಿ ನಿರ್ಧರಿಸಬೇಕಾಗುತ್ತದೆ ಎಂದು ಅಟಾರ್ನಿ ಜನರಲ್ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ರಾಜ್ಯಗಳಿಗೆ ಪರಿಹಾರ ನೀಡಲು ಸೆಸ್ ಹೇರಿಕೆ ಮಾಡಲಾಗುತ್ತಿತ್ತು. ಇದರಿಂದ ಬರುವ ಆದಾಯ ಆಗಸ್ಟ್ 2019ರಿಂದ ಕಡಿಮೆಯಾಗುತ್ತಾ ಬರುತ್ತಿದೆ. 2017-18 ಹಾಗೂ 2018-19ರ ಸಾಲಿನಲ್ಲಿ ಸಂಗ್ರಹಿಸಲಾಗಿದ್ದ ಹೆಚ್ಚು ವರಿ ಸೆಸ್ ಅನ್ನೂ ಸಹ ಕೇಂದ್ರ ಸರ್ಕಾರ ಬಳಸಿಕೊಳ್ಳುತ್ತಿದೆ.

ಜಿ.ಎಸ್.ಟಿ. ಕಾಯ್ದೆಯ ಅನ್ವಯ ಮೊದಲ ಐದು ವರ್ಷಗಳಲ್ಲಿ ರಾಜ್ಯಗಳಿಗೆ ಆದಾಯದ ಕೊರತೆಯಾದರೆ ಪ್ರತಿ ಎರಡು ತಿಂಗಳಿಗೊಮ್ಮೆ ಪರಿಹಾರ ನೀಡಲಾಗುತ್ತದೆ. ಜಿ.ಎಸ್.ಟಿ. ಸಂಗ್ರಹ ಪ್ರತಿ ವರ್ಷ ಶೇ.14ರಷ್ಟು ಹೆಚ್ಚಾಗುತ್ತದೆ ಎಂಬ ಆಧಾರದ ಮೇಲೆ ಪರಿಹಾರ ನೀಡಲಾಗುತ್ತದೆ.

2019-20ರಲ್ಲಿ ಕೇಂದ್ರ ಸರ್ಕಾರ ಜಿ. ಎಸ್.ಟಿ. ಪರಿಹಾರವಾಗಿ 1.65 ಲಕ್ಷ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಆದರೆ, 2019-20ರಲ್ಲಿ ಸಂಗ್ರಹವಾಗಿರುವ ಸೆಸ್ 95,444 ಕೋಟಿ ರೂ. ಆಗಿದೆ. 2018-19ರ ಪರಿಹಾರದ ಮೊತ್ತ 69,275 ಕೋಟಿ ರೂ. ಹಾಗೂ 2017-18ರಲ್ಲಿ ಪರಿಹಾರ 41,146 ಕೋಟಿ ರೂ. ಆಗಿದೆ.

# ರಾಶಿ ಭವಿಷ್ಯ

**ದಿನಾಂಕ : 02.08.2020 ರಿಂದ 08.08.2020**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**
ಮಿತ್ರರ ಸಲಹೆ, ಸೂಚನೆಗಳನ್ನು ಅನುಸರಿಸುವುದು ಎಲ್ಲಾ ರೀತಿಯಿಂದ ಉತ್ತಮ. ಉದ್ಯೋಗಿಗಳಿಗೆ ವೇತನದಲ್ಲಿ ಹೆಚ್ಚಳ, ಸ್ವಂತ ವೃತ್ತಿ ಮಾಡಲು ಇದು ಸಕಾಲ. ವಾಹನ ಖರೀದಿ ವಿಚಾರದಲ್ಲಿ ಮೋಸ ಹೋಗಬಹುದು. ಬಂಧುಗಳೊಂದಿಗೆ ಅನಾವಶ್ಯಕ ವಿರಸ ಬೇಡ. ಕೆಲವೊಮ್ಮೆ ನಿಮ್ಮ ತೀರ್ಮಾನಗಳು ತಪ್ಪುದಾರಿಗೆ ಎಳೆಯಬಹುದು. ಗಂಭೀರ ನಡಾವಳಿಯಿಂದ ಮಾತ್ರ ಮತ್ತೊಬ್ಬರು ಮಾಡಬಹುದಾದ ಅಪಹಾಸ್ಯವನ್ನು ತಡೆಯಬಹುದು. ಮಾನಸಿಕ ಚಾಂಚಲ್ಯ, ಮನೆ ಸದಸ್ಯರ ಆರೋಗ್ಯದಲ್ಲಿ ಉದಾಸೀನ ಬೇಡ. ಗೋ ಸೇವೆ ಮಾಡಿ. ಸೋಮ, ಮಂಗಳ, ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**
ಅವಸರದಲ್ಲಿ ಖರೀದಿಸಿದ ಯಂತ್ರೋಪಕರಣಗಳಲ್ಲಿ ದೋಷಗಳು, ಗುತ್ತಿಗೆದಾರರಿಗೆ ಅವಕಾಶಗಳು ಹೇರಳವಾಗಿ ಸಿಕ್ಕರೂ ಲಾಭ ಮಾತ್ರ ಅಷ್ಟಕಷ್ಟೆ. ಉದ್ಯೋಗದಲ್ಲಿ ಅನಿರೀಕ್ಷಿತ ಬದಲಾವಣೆ, ವ್ಯವಹಾರದಲ್ಲಿ ಹೊಸ ಯೋಜನೆಗಳಿಗೆ ಚಾಲನೆ ಸಿಗಲಿದೆ. ಆಸ್ತಿ ಸಂಬಂಧಿ ತಗಾದೆಗಳು ಆರಂಭವಾಗಬಹುದು. ಮಿತಿ ಮೀರುತ್ತಿರುವ ಖರ್ಚು, ವೆಚ್ಚಗಳಿಗೊಂದು ಕಡಿವಾಣವಿರಲಿ, ಸಮಾಜ ಸೇವೆಯಲ್ಲಿರುವವರಿಗೆ ಟೀಕೆ, ಟಿಪ್ಪಣಿಗಳು ಸಹಜ, ಹಿರಿಯರೊಂದಿಗೆ ವಿರೋಧ ಬೇಡ. ಬುಧ, ಗುರು, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**
ಕೂಲಿ ಕಾರ್ಮಿಕರಿಗೆ ಹೆಚ್ಚು ಬೇಡಿಕೆ, ವ್ಯವಹಾರಕ್ಕೆ ಸಂಬಂಧಪಟ್ಟ ಕೋರ್ಟ್ ವ್ಯಾಜ್ಯವೊಂದು ರಾಜೀ ಅಥವಾ ಪಂಚಾಯ್ತಿಯಲ್ಲಿ ಬಗೆಹರಿಯಲಿದೆ. ಬರಬೇಕಾಗಿರುವ ಬಾಕಿ ಹಣ ಇಷ್ಟರಲ್ಲೇ ನಿಮ್ಮ ಕೈ ಸೇರಲಿದೆ. ಸ್ನೇಹಿತರೊಂದಿಗೆ ವಿನಾಕಾರಣ ಮನಸ್ತಾಪ ಬೇಡ, ನೌಕರಿಯಲ್ಲಿ ಒತ್ತಡಗಳು ನಿಮ್ಮ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಲಿವೆ. ಮಕ್ಕಳನ್ನು ವ್ಯವಹಾರದಲ್ಲಿ ತೊಡಗಿಸುವುದರಿಂದ ನಿಮಗೆ ತುಸು ಬಿಡುವು ಸಿಗಲಿದೆ. ಆಕಸ್ಮಿಕ ಧನಾಗಮನವಾದರೂ ಅದು ನಿಮ್ಮ ಆರ್ಥಿಕ ಕೊರತೆಗೆ ಸಾಲದು. ಭಾನು, ಬುಧ, ಶುಕ್ರ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**
ಸರ್ಕಾರಿ ವಲಯಗಳಲ್ಲಿ ನಿಮ್ಮ ವರ್ಚಸ್ಸು ಹೆಚ್ಚಲಿದೆ. ಬೇರೆಯವರು ದುರುಪಯೋಗಪಡಿಸಿಕೊಳ್ಳದಂತೆ ಎಚ್ಚರ ವಹಿಸಿರಿ. ರಾಜಕಾರಣಿಗಳಿಗೆ ಪಕ್ಷದಲ್ಲಿ ವರಿಷ್ಠರ ಕೃಪಾಕಟಾಕ್ಷ ದೊರೆಯಲಿದೆ. ಮೇಕಪ್ ಕಲಾವಿದರಿಗೆ ಹೇರಳ ಅವಕಾಶ, ಬದುಕಿನಲ್ಲಿ ಯಶಸ್ಸಿನತ್ತ ಸಾಗುತ್ತಿರುವ ನಿಮಗೆ ದಾಯಾದಿಗಳು ಶತ್ರುಗಳಂತೆ ಕಾಡುವರು. ಸಂಗಾತಿಯ ಸಲಹೆಗಳನ್ನು ಕಡೆಗಣಿಸ ಬೇಡಿ. ವಿದ್ಯಾರ್ಥಿಗಳಿಗೆ ಅಧ್ಯಯದಲ್ಲಿ ಆಲಸ್ಯ ಮೂಡಲಿದೆ. ಮಕ್ಕಳಿಂದ ಶುಭ ಸಮಾಚಾರ ಬರಲಿದೆ. ಭಾನು, ಸೋಮ, ಬುಧ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**
ಪತ್ರಗಳಿಗೆ ಅಥವಾ ದಾಖಲೆಗಳಿಗೆ ಓದಿ ಸಹಿ ಮಾಡಿ. ಭೂಮಿ ಖರೀದಿಗೆ ಆರ್ಥಿಕ ಮುಗ್ಗಟ್ಟು ಕಂಡುಬರಲಿದೆ. ಆರ್ಥಿಕ ಹರಿವು ಹರಿದು ಬರಲಿದೆ. ಯಾವುದೇ ಕಾರಣಕ್ಕೂ ವೈಯಕ್ತಿಕ ಆರೋಗ್ಯವನ್ನು ಅಲಕ್ಷಿಸಬೇಡಿ. ವ್ಯಾಪಾರ ನಿಮಿತ್ತ ಮಾಡುವ ಪ್ರಯಾಣ ಲಾಭದಾಯಕ, ಹಿರಿಯರೊಂದಿಗೆ ವಾಗ್ವಾದ ಬೇಡ. ಕೈಗಾರಿಕೋದ್ಯಮಿಗಳು ಮಧ್ಯವರ್ತಿಗಳ ಕೈ ಚಳಕದಿಂದ ಮೋಸ ಹೋಗುವರು. ಮಂದಗತಿಯಲ್ಲಿ ಸಾಗಿದ್ದ ಸರ್ಕಾರಿ ಕೆಲಸಗಳು ವೇಗ ಪಡೆಯಲಿವೆ. ನಿಮ್ಮ ನಿರ್ಣಯಗಳು ಫಲ ಪ್ರದವಾಗಲಿವೆ. ಕುಲದೇವತಾರಾಧನೆ ಮಾಡಿ. ಭಾನು, ಬುಧ, ಗುರು ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**
ಕಟ್ಟಡ ಸಾಮಗ್ರಿ ವ್ಯಾಪಾರಿಗಳಿಗೆ ವಹಿವಾಟಿನಲ್ಲಿ ಕ್ರಮೇಣ ಹೆಚ್ಚಳ ಕಂಡು ಬರಲಿದೆ. ದೂರದ ಪ್ರಯಾಣ, ಮುಂಜಾಗ್ರತೆ ವಹಿಸಿರಿ. ಶೃಂಗಾರ ಸಾಮಗ್ರಿಗಳ ಮಾರಾಟ ಭರದಿಂದ ಸಾಗಲಿದೆ. ತಾಳ್ಮೆ ಹಾಗೂ ಶಾಂತತೆಯಿಂದ ಇದ್ದಲ್ಲಿ ಮಾತ್ರ ಸಂಸಾರದಲ್ಲಿ ಸಮತೋಲನೆ, ದೇವತಾ ಕಾರ್ಯಕ್ಕೆ ಹೆಚ್ಚಿನ ವೆಚ್ಚ. ನವದಂಪತಿಗಳಿಗೆ ಸಂತಾನ ಭಾಗ್ಯ, ವೈಯಕ್ತಿಕ ಕೆಲಸಗಳಲ್ಲಿ ಮಂದಗತಿ ಕಂಡು ಬಂದರೂ ಚಿಂತೆ ಬೇಡ. ಆಹಾರ ವ್ಯತ್ಯಾಸದಿಂದಾಗಿ ಉದರ ಸಂಬಂಧಿ ಅನಾರೋಗ್ಯ, ಮಕ್ಕಳಿಂದ ಹೆಚ್ಚಿನ ನಿರೀಕ್ಷೆ ಬೇಡ. ವಿದ್ಯಾರ್ಥಿಗಳಿಗೆ ಉತ್ತಮ ದಿನ. ಸೋಮ, ಮಂಗಳ, ಬುಧ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**
ಬದುಕಿನಲ್ಲಿ ಮೂಡಿದ್ದ ಅನೇಕ ಸಂಕಷ್ಟಗಳು ದೂರವಾಗಲಿವೆ. ಆದರೆ ನಿಮ್ಮ ಹಠಮಾರಿತನ ಸ್ವಭಾವವನ್ನು ಬದಲಾಯಿಸಿಕೊಳ್ಳಿ, ಅನಾವಶ್ಯಕ ಖರ್ಚು ಅಷ್ಟು ಒಳ್ಳೆಯದಲ್ಲ. ಹಿರಿಯರ ಆಣತಿಯಂತೆ ನಡೆಯುವುದು ಶ್ರೇಯಸ್ಕರ. ವಿದ್ಯಾರ್ಥಿಗಳು ಅತೀ ಒತ್ತಡದಲ್ಲಿ ಅಧ್ಯಯನ ಮಾಡಬೇಕಾದೀತು. ಉದ್ಯಮಿಗಳು ತಾಳ್ಮೆ ಹಾಗೂ ಸಹಿಷ್ಣುತೆಯಿಂದ ಮಾತ್ರ ಯಶಸ್ಸು ಕಾಣುವರು. ಅತಿಯಾದ ದೇಹಾಲಸ್ಯದಿಂದಾಗಿ ಆರೋಗ್ಯದಲ್ಲಿ ಏರುಪೇರಾಗಬಹುದು. ಬಡವರಿಗೆ ಅನ್ನದಾನ ಮಾಡಿ. ಹಿಡಿದ ಕಾರ್ಯ ಕೈಗೂಡುವುದು. ಸೋಮ, ಶುಕ್ರ, ಶನಿವಾರ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**
ಅವಿವಾಹಿತರಿಗೆ ಕಂಕಣ ಭಾಗ್ಯ, ನೆರೆಹೊರೆಯವರೊಂದಿಗೆ ನೀರಿನ ಸಂಬಂಧಿ ಜಗಳ, ದ್ವಿ ಚಕ್ರ ವಾಹನ ಚಾಲಿಸುವವರು ತುಸು ಎಚ್ಚರ. ಬೇರೆಯವರ ಸಮಸ್ಯೆಗಳನ್ನು ಬಗೆಹರಿಸಲು ಹೋಗಿ ನೀವೇ ತೊಂದರೆಗೆ ಸಿಲುಕುವಿರಿ, ಮಕ್ಕಳು ಮಡದಿ ಕೇಳಿದ್ದಕ್ಕೆಲ್ಲಾ ಅಸ್ತು ಎಂದು ಆರ್ಥಿಕವಾಗಿ ಸುಸ್ತಾ ಗುವಿರಿ. ಕರ್ತವ್ಯ ಲೋಪದಿಂದಾಗಿ ಮೇಲಾಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗು ವಿರಿ. ಶತ್ರುಗಳು ನಿಮ್ಮ ಚಾಣಾಕ್ಷತನಕ್ಕೆ ತಲೆಬಾಗುವರು. ಪ್ರಾಣಿಗಳಿಂದ ತುಸು ಅಪಾಯ, ಮಕ್ಕಳ ವಿದ್ಯಾಭ್ಯಾಸ ಬೇಸರ ಮೂಡಿಸಲಿದೆ. ಬಹುದಿನಗಳ ಸಮಸ್ಯೆ ಯೊಂದು ಸುಖಾಂತ್ಯವಾಗಲಿದೆ. ಸೋಮ, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**
ನೀವು ಬೆಂಕಿ ಅಥವಾ ವಿದ್ಯುತ್ ಉಪಕರಣಗಳ ಕೆಲಸಗಾರರಾಗಿದ್ದಲ್ಲಿ ಹೆಚ್ಚಿನ ಜಾಗ್ರತೆ ವಹಿಸಿ, ನಿಮ್ಮ ಅವಶ್ಯಕತೆಗಳಿಗೆ ಮಗನಿಂದ ಆರ್ಥಿಕ ನೆರವು, ಆದಾಯದ ಮೂಲದಲ್ಲೂ ಹೆಚ್ಚಳ, ದಂಪತಿಗಳಲ್ಲಿನ ಭಿನ್ನಾಭಿಪ್ರಾಯವನ್ನು, ಆರಂಭದಲ್ಲೇ ಬಗೆಹರಿಸಿಕೊಳ್ಳಿ. ಪುಟ್ಟ ಮಕ್ಕಳ ಆರೋಗ್ಯದ ಕಡೆ ಗಮನವಿರಲಿ. ಪ್ರೇಮಿಗಳ ಅಭಿಲಾಷೆ ಇಷ್ಟರಲ್ಲೇ ಈಡೇರಲಿದೆ. ಹಿರಿಯರ ಹರಕೆ ಪೂರೈಸಲು ತುಸು ಹೆಚ್ಚಿನ ವೆಚ್ಚ, ಅತಿಯಾದ ಭೋಜನ ಕೂಟ ಅಜೀರ್ಣಕ್ಕೆ ಮೂಲ ವಾದೀತು. ಸರ್ಕಾರಿ ನೌಕರರಿಗೆ ಒತ್ತಡದ ವಾತಾವರಣ, ಬುಧ, ಗುರು, ಶುಕ್ರ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**
ವೈದ್ಯ ವೃತ್ತಿಯಲ್ಲಿರುವವರಿಗೆ ಸಾಮಾಜಿಕ ಪ್ರಶಂಸೆ. ಬೇಳೆಕಾಳು ವ್ಯಾಪಾರಿಗಳಿಗೆ ಹೆಚ್ಚಿನ ಲಾಭ, ಕ್ರೀಡಾಪಟುಗಳಿಗೆ ತುಸು ಹಿನ್ನಡೆ, ಅರಣ್ಯಾಧಿಕಾರಿಗಳು ಜಾಗ್ರತೆಯಿಂದ ವರ್ತಿಸಿ, ಶೀತ ಸಂಬಂಧಿ ರೋಗ ಬಾಧಿಸಬಹುದು. ಕಾರ್ಮಿಕ ವರ್ಗದವರ ಹೋರಾಟಕ್ಕೆ ಸಾಧಾರಣ ಫಲ, ಸಾರ್ವಜನಿಕ ಕಾರ್ಯಗಳಲ್ಲಿ ನೀವು ಅಪಾಯಕ್ಕೆ ಸಿಲುಕಬಹುದು. ಬರಬೇಕಾಗಿದ್ದ ಬಾಕಿ ಹಣ ಉಳಿತಾಯ ಮಾಡಲು ಆಲೋಚಿಸುವಿರಿ ಇದರಲ್ಲಿ ಯಶಸ್ವಿಯಾಗುವಿರಿ. ನಿಂತು ಹೋಗಿದ್ದ ಹೊಸ ಯೋಜನೆಗಳಿಗೆ ಆರ್ಥಿಕ ಇಂಧನ ದೊರೆಯಲಿದೆ. ಪ್ರಯಾಣವನ್ನು ಸಾಧ್ಯವಾದಲ್ಲಿ ಮುಂದೂಡಿ. ಸೋಮ, ಬುಧ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**
ಉದ್ಯಮದಲ್ಲಿ ಸಾಕಷ್ಟು ಪ್ರಗತಿ, ಅದೃಷ್ಟ ಖುಲಾಯಿಸಲಿದೆ. ಪದವೀಧರರಾದ ಮಕ್ಕಳಿಗೆ ಉತ್ತಮ ಉದ್ಯೋಗ, ಸ್ನೇಹಿತರ ನಿರೀಕ್ಷಿತ ಕಾರ್ಯಗಳಿಗೆ ಸಹಾಯ, ವಿದೇಶ ಪ್ರವಾಸ ಮಾಡಬೇಕಾಗಬಹುದು, ಆದರೆ ಸದ್ಯ ಪರಿಸ್ಥಿತಿ ಅಷ್ಟು ಉತ್ತಮವಾಗಿಲ್ಲ. ಸಿನಿಮಾ ಕಲಾವಿದರಿಗೆ ಉತ್ತಮ ಅವಕಾಶ ಬರಲಿದೆ. ನಿಮ್ಮ ನಡಾವಳಿಯಲ್ಲಿ ಅಚ್ಚರಿಯ ಬದಲಾವಣೆ, ಉಳಿತಾಯದಲ್ಲಿ ಪ್ರಗತಿ ಸಾಧಿಸುವಿರಿ. ಸೋದರಿಯ ಮನೆಯಲ್ಲಿ ಕಳೆದುಹೋಗಿದ್ದ ಅಮೂಲ್ಯ ವಸ್ತು ಮರಳಿ ಸಿಗಲಿದೆ. ಸಂಶೋಧನಾ ರಂಗದಲ್ಲಿ ಮಹತ್ತರ ಸಾಧನೆ, ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**
ಅತಿ ದೊಡ್ಡ ಸಾಧನೆಗಳಿಗೆ ಕೈ ಹಾಕುವ ಮುನ್ನ ಚೆನ್ನಾಗಿ ಆಲೋಚಿಸಿ ಮುನ್ನಡೆಯಿರಿ. ವ್ಯವಹಾರದಲ್ಲಿ ಕೈ ಕೆಳಗಿನ ನೌಕರರ ತಪ್ಪಿನಿಂದ ಹೆಚ್ಚಿನ ಖರ್ಚು ಭರಿಸಬೇಕಾದೀತು. ಮಡದಿ ಮಕ್ಕಳೊಂದಿಗೆ ವಿರಸ ಅಷ್ಟು ಒಳ್ಳೆಯದಲ್ಲ. ಗುಂಪು ಗಾರಿಕೆಯಿಂದ ಖಾಸಗಿ ಕಂಪನಿ ನೌಕರರು ಉದ್ಯೋಗ ಕಳೆದುಕೊಳ್ಳುವ ಸಂಭವವಿದೆ. ವಿದ್ಯಾರ್ಥಿಗಳ ವಿದೇಶಿ ಅಧ್ಯಯನದ ಕನಸು ಸದ್ಯದ ಮಟ್ಟಿಗೆ ಈಡೇರುವುದು ಕಷ್ಟ ಸಾಧ್ಯ. ಹಿರಿಯರ ಮಾತನ್ನು ಗೌರವಿಸಿ, ಕುಲದೇವತಾ ದರ್ಶನವಾಗಲಿದೆ. ಅತಿಯಾದ ತಿರುಗಾಟ ಆರೋಗ್ಯದ ಮೇಲೆ ಅಡ್ಡ ಪರಿಣಾಮ, ಅನಿರೀಕ್ಷಿತವಾಗಿ ವಾಸ ಸ್ಥಾನದಲ್ಲಿ ಬದಲಾವಣೆ, ಅನಾವಶ್ಯಕ ಸಾಲದಿಂದ ತೊಂದರೆ. ಭಾನು, ಮಂಗಳ, ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 3.8.2020 ಸೋಮವಾರ ಯಜುರ್ವೇದಿ ಮತ್ತು ಅಥರ್ವವೇದ ಉಪಾಕರ್ಮ, ರಕ್ಷಾಬಂಧನ, ಸಂಸ್ಕೃತ ದಿನಾಚರಣೆ.**

# ರಂಭಾಪುರಿ ಶ್ರೀಗಳಿಂದ ಶ್ರಾವಣಮಾಸದ ಇಷ್ಟಲಿಂಗ ಪೂಜೆ

ಶ್ರಾವಣ ಮಾಸ ಹಿಂದೂಗಳಿಗೆ ಪವಿತ್ರ ಮಾಸವಾಗಿದ್ದು ಪ್ರಸನ್ನ ಚಿತ್ತದ ಭಕ್ತಿಯ ಸಂಗಮವಾಗಿದೆ. ಮನುಜನಿಗಷ್ಟೇ ಅಲ್ಲದೇ ಪ್ರಕೃತಿ ಮಾತೆ ಕೂಡಾ ಹಬ್ಬದ ಸಂಭ್ರಮಕ್ಕೆ ಅಣಿಯಾಗುವ ಮಾಸವಾಗಿದೆ. ಹಾಗಾಗಿ ಶ್ರಾವಣವೆಂದರೆ ಶ್ರೇಷ್ಟತೆಗೂ ಶುಭಕ್ಕೂ ಪರ್ಯಾಯವೆಂಬ ನಂಬಿಕೆ ಎಲ್ಲರಲ್ಲೂ ಮನೆ ಮಾಡಿದೆ.

ನಮ್ಮ ಪ್ರಾಚೀನ ಪರಂಪರೆಯ ದೇಶಕ್ಕೆ ಪ್ರಕೃತಿಯೇ ಒದಗಿಸಿರುವ ವರವೆಂದರೆ ಋತುಗಳ ವೈವಿಧ್ಯತೆ ಆರು ಋತುಗಳ ಕಾಲಚಕ್ರ ಜನರ ಜೀವನ ಶೈಲಿಯನ್ನು ರೂಪಿಸಿದೆ. ಅಲ್ಲದೇ ಶ್ರೀಮಂತವಾದ ಧಾರ್ಮಿಕ - ಸಾಂಸ್ಕೃತಿಕ ವೈಭವವನ್ನು ಒದಗಿಸಿವೆ. ಶ್ರವಣ ನಕ್ಷತ್ರದ ಯೋಗದಿಂದ ಶ್ರಾವಣ ಶಬ್ಧ ಬಂದಿದ್ದು ಈ ಮಾಸದಲ್ಲಿ ಶಿವ - ವಿಷ್ಣು ಮೊದಲಾದ ಇಷ್ಟ ದೇವರುಗಳನ್ನು ವಿಶೇಷ ವಾಗಿ ಆರಾಧಿಸಲಾಗುತ್ತಿದೆ. ಶ್ರಾವಣ ಮಾಸದ ಪ್ರತಿ ದಿನವೂ ಧಾರ್ಮಿಕ ಮಹತ್ವವನ್ನು ಹೊಂದಿದ್ದು ಭಕ್ತರಿಗೆ ಸಾಧಕರಿಗೆ ಆಧ್ಯಾತ್ಮಿಕ ಅನುಗ್ರಹ ಲಭಿಸಿ, ವ್ಯಕ್ತಿಗಳ ದೈಹಿಕ - ಮಾನಸಿಕ ಆರೋಗ್ಯ ಸುಧಾರಿಸಿ ನಕಾರಾತ್ಮಕ ಶಕ್ತಿಗಳು ದೂರವಾಗಿ ಇಚ್ಛಾಶಕ್ತಿ ಮತ್ತು ಸ್ಮರಣ ಶಕ್ತಿ ಲಭಿಸಿ ಇಷ್ಟಾರ್ಥ ಸಿದ್ಧಿಯನ್ನು ಪಡೆಯ ಬಹುದಾಗಿದೆ.



**ವಿಶ್ವಶಾಂತಿ ಹಾಗೂ ಲೋಕ ಕಲ್ಯಾಣಾರ್ಥಕವಾಗಿ ಬಾಳೆಹೊನ್ನೂರು ಶ್ರೀಮದ್ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರು ಶ್ರಾವಣ ಮಾಸದ ಇಷ್ಟಲಿಂಗ ಮಹಾಪೂಜಾ ತಪೋನುಷ್ಠಾನ ಕೈಗೊಂಡಿದ್ದಾರೆ.**

ಭಾರತೀಯ ಪರಂಪರೆಯಲ್ಲಿ ಅತಿಮುಖ್ಯ ವಾಹಿನಿಯಾಗಿರುವ ಹಿಂದೂ ಸಂಸ್ಕೃತಿಯಲ್ಲಿ ಇಷ್ಟದೈವ ಪದ ಬಳಕೆಯಲ್ಲಿರುವುದು ಸರ್ವರಿಗೂ ತಿಳಿದ ವಿಷಯವಾಗಿದ್ದರೂ ಕೂಡಾ ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಮಹಾಪೂಜೆಯ ಮೂಲಕ ತನ್ನ ಆತ್ಮದರ್ಶನ ಹೊಂದಿ ಶಿವ ಸಾಕ್ಷಾತ್ಕಾರ ಪಡೆಯುವ ಶ್ರೇಷ್ಟತೆಯನ್ನು ನಾವು ಕಾಣಬಹುದಾಗಿದೆ. ಇಷ್ಟಲಿಂಗ ಮಹಾಪೂಜೆಯು ಪರಶಿವನ ಕುರುಹಿನ ಪೂಜೆಯೇ ಆಗಿದ್ದು ಶಿವನು ದೇವಾಧಿದೇವತೆಗಳಲ್ಲಿ ಅಗ್ರಗಣ್ಯನೂ, ಲೋಕಪ್ರಸಿದ್ದನೂ, ತ್ರಿಮೂರ್ತಿಗಳಲ್ಲೇ ಪ್ರಮುಖನಾಗಿದ್ದು, ಸರ್ವಭಕ್ತರ ಸಂಕಷ್ಟಗಳನ್ನು ಪರಿಹರಿಸುವ ಕರುಣಾಮಯಿಯಾಗಿದ್ದಾನೆ.

ಶಿವನ ಅನಂತ ಲೀಲೆಗಳಲ್ಲಿ ದೇವರುಗಳ ಮತ್ತು ಅಸುರರ ನಡುವೆ ನಡೆದ ಸಮುದ್ರ ಮಥನ ಸಂದರ್ಭದಲ್ಲಿ ಹೊರಹೊಮ್ಮಿದ ಹಾಲಾಹಲವನ್ನು ಶಿವನು ಸೇವಿಸಿದ ಸಮಯವೂ ಕೂಡಾ ಶ್ರಾವಣ ಪರ್ವ ಕಾಲವಾಗಿದೆ. ಈ ಮಥನದ ಸಮಯದಲ್ಲಿ ಸುಮಾರು 14 ವಿವಿಧ ರತ್ನಗಳು ಹೊರಹೊಮ್ಮಲಾಗಿ ಅದರಲ್ಲಿ ಹಾಲಾಹಲವೆನ್ನುವ ಕಾರ್ಕೋಟಕ ವಿಷವೂ ಕೂಡಾ ಒಂದಾಗಿದ್ದು, ಹಾಲಾಹಲ ವಿಷವು ಹೊರಹೊಮ್ಮುತ್ತಿದ್ದಂತೆ ಬ್ರಹ್ಮಾಂಡದಲ್ಲಿ ಅಲ್ಲೋಲ - ಕಲ್ಲೋಲ ಉಂಟಾದ್ದರಿಂದ ಶಿವನು ಬ್ರಹ್ಮಾಂಡವನ್ನು ರಕ್ಷಿಸಲು ವಿಷವನ್ನೇ ಸೇವಿಸಿ ನೀಲಕಂಠನೆಂದು ಪ್ರಖ್ಯಾತಿ ಪಡೆಯುತ್ತಾನೆ. ಭಕ್ತರಿಗೋಸ್ಕರ ಇಂತಹ ಅನೇಕ ಲೋಕ ರಕ್ಷಣೆಯ ಕಾರ್ಯದಲ್ಲಿ ತೊಡಗಿರುವ ಸೃಷ್ಟಿಕರ್ತ ಪರಶಿವನನ್ನು ಪವಿತ್ರ ಶ್ರಾವಣ ಪರ್ವ ಕಾಲದಲ್ಲಿ ಸರ್ವರೂ ಶ್ರೀ ಗುರು ಮುಖೇನ ಅನುಗ್ರಹ ಪಡೆದು ಧ್ಯಾನ, ಜಪ, ತಪದ ಮೂಲಕ ಭಕ್ತಿಯೊಂದಿಗೆ ಆರಾಧಿಸಿದರೆ ಸರ್ವ ಸಂಕಷ್ಟದಿಂದ ಪಾರಾಗಿ ಮುಕ್ತಿಯನ್ನು ಪಡೆಯಬಹುದಾಗಿದೆ..

ಸೃಷ್ಟಿ, ಸೌಂದರ್ಯದ ಮಡಿಲಲ್ಲಿ ಮಲಯಾಚಲ ತಪೋ ಭೂಮಿಯಲ್ಲಿ ಅಧ್ಯಾತ್ಮದ ಜ್ಞಾನ ಗಂಗೋತ್ರಿಯಾಗಿ ನೆಲೆಗೊಂಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಜಗದ್ಗುರು ವೀರಸಿಂಹಾಸನ ಮಹಾಪೀಠವು ಪ್ರವಾಸಿ ತಾಣವಾಗಿ ಭಕ್ತರನ್ನು ಆಕರ್ಷಿಸುತ್ತಿದೆ.

ಅಂತರಂಗ - ಬಹಿರಂಗದಲ್ಲಿನ ಅನಿಷ್ಟಗಳನ್ನು ತೊಡೆದು ಹಾಕಿ ಆತ್ಮಬಲ - ಮನೋಬಲಗಳನ್ನು ವೃದ್ಧಿಸಲು ವಿಶ್ವಶಾಂತಿ ಹಾಗೂ ಲೋಕ ಕಲ್ಯಾಣಾರ್ಥವಾಗಿ ಬಾಳೆಹೊನ್ನೂರಿನ ಶ್ರೀಪೀಠದ ಪರಿಸರದಲ್ಲಿ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರು 29 ನೇ ವರ್ಷದ ಶಾವಣ ಮಾಸದ ಇಷ್ಟಲಿಂಗ ಮಹಾಪೂಜೆ ತಪೋನುಷ್ಠಾನವನ್ನು ಇದೇ ದಿನಾಂಕ 21 ರಿಂದ ಆರಂಭಿಸಿದ್ದು, ಬರುವ ಆಗಸ್ಟ್ 19 ರವರೆಗೆ ಕೈಗೊಂಡಿದ್ದಾರೆ.

ಈ ಪವಿತ್ರ ಶ್ರಾವಣ ಪರ್ವಕಾಲದಲ್ಲಿ ಪ್ರತಿನಿತ್ಯ ಶ್ರೀಜಗದ್ಗುರು ರೇಣುಕಾಚಾರ್ಯರಿಗೆ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿಗೆ, ಶಕ್ತಿಮಾತೆ ಶ್ರೀಚೌಡೇಶ್ವರಿ ದೇವಿಗೆ, ಶ್ರೀ ಸೋಮೇಶ್ವರ ಮಹಾಲಿಂಗಕ್ಕೆ ಮಹಾರುದ್ರಾಭಿಷೇಕ ಅಷ್ಟೋತ್ತರ ಮಹಾಮಂಗಲ ವಿಶೇಷ ಪೂಜೆ, 'ಶ್ರೀ ಜಗದ್ಗುರು ರೇಣುಕ ವಿಜಯ' ಪಾರಾಯಣ ಜರುಗಲಿದೆ.

**- ಶ್ರೀ ಮಲ್ಲಿಕಾರ್ಜುನಸ್ವಾಮಿ ಕಲ್ಮಠ,**
ಟಿಎಪಿಸಿಎಂಸ್ ಅಧ್ಯಕ್ಷರು, ಹರಪನಹಳ್ಳಿ.

## ಶಿಕ್ಷಣ ನೀತಿಗೆ ಎಬಿವಿಪಿ ಸ್ವಾಗತ

ದಾವಣಗೆರೆ, ಜು.1- ರಾಷ್ಟ್ರೀಯ ಶಿಕ್ಷಣ ನೀತಿ ಯನ್ನು ಜಾರಿಗೆ ತಂದಿರುವ ಕ್ರಮವನ್ನು ಅಖಿಲ ಭಾರ ತೀಯ ವಿದ್ಯಾರ್ಥಿ ಪರಿಷತ್ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದೆ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ ಕಾರ್ಯಾಲಯ ಕಾರ್ಯ ದರ್ಶಿ ಬಿ.ಸಿ. ದರ್ಶನ್ ತಿಳಿಸಿದ್ದಾರೆ.

ಭಾರತದ ಪ್ರಬುದ್ಧ ನಾಗರಿಕನು ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣಕ್ಕೆ ದೊಡ್ಡ ಬದಲಾವಣೆಗಳನ್ನು ಕಾಣಲು ಬಹಳ ಸಮಯದಿಂದ ನಿರೀಕ್ಷಿಸುತ್ತಿದ್ದು, ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನ ಆಧಾರಿತ, ಉದ್ಯೋಗ-ಆಧಾರಿತ, ತಂತ್ರಜ್ಞಾನ ಆಧಾರಿತ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಅನುಕೂಲವಾಗಲಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಸಾಮಾನ್ಯ ಭಾರತೀಯರಿಗೆ ಎಲ್ಲಾ ನಿರೀಕ್ಷೆಗಳಿಗೆ ಅನುಗುಣವಾಗಿ ಬರಲಿದೆ ಎಂದಿದ್ದಾರೆ.

# ನೂಲ ಹುಣ್ಣಿಮೆಯ ಆಚರಣೆ

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಹಬ್ಬಗಳಿಗೆ ವಿಶಿಷ್ಟ ಹಾಗೂ ಮಹತ್ವ ಪೂರ್ಣ ಸ್ಥಾನವಿದೆ. ವಿಶ್ವದ ಅಂಗಳದಲ್ಲಿ ಬೆಳೆದುನಿಂತ ಭಾರತವು ವಿಶಾಲ ವಟುವೃಕ್ಷವೆನಿಸಿದೆ, ವೃಕ್ಷಗಳ ಆಶ್ರಯ ಬಯಸುವ ಪಕ್ಷಿಗಳಂತೆ ಇಲ್ಲಿ ನಾನಾ ಜಾತಿ, ಧರ್ಮ, ಜನಾಂಗದ ಜನರು ಆಶ್ರಯ ಪಡೆದಿದ್ದಾರೆ, ಅನೇಕ ಧರ್ಮ, ಜಾತಿ, ಮತ, ಪಂಥಗಳ ಜನರು ಕಾಲ ಕಾಲದಿಂದ ವಾಸಿಸುತ್ತಿರುವುದರಿಂದ, ಸಹಿಷ್ಣುತೆ, ಸದ್ಭಾವನೆ, ಸಹಬಾಳ್ವೆಯ ಜೀವನದಿಂದ, ನಮ್ಮ ದೇಶದಲ್ಲಿ ತನ್ನದೇ ಆದ ಭಾರತೀಯ ಸಂಸ್ಕೃತಿ ಬೆಳೆದು ಬಂದಿದೆ

ಎಲ್ಲಾ ಧರ್ಮ, ಮತಗಳಿಗೆ ತಮ್ಮದೇ ಆದ ಧರ್ಮ ಹಬ್ಬಗಳ ಆಚರಣೆಗಳು ಇರುವುದು ಸಹಜ, ಎಲ್ಲಾ ಹಬ್ಬ ಆಚರಣೆಗಳಲ್ಲಿ ಎಲ್ಲರೂ ಭಾಗವಹಿಸಿ, ಸಹಕಾರ, ಸದ್ಭಾವನೆಯಿಂದ ಬದುಕುವುದು ಭಾರತ ದೇಶದ ವೈಶಿಷ್ಟ್ಯ,

ಹೋಳಿ ಹುಣ್ಣಿಮೆ, ಕಾರ ಹುಣ್ಣಿಮೆ, ಗೌರಿ ಹುಣ್ಣಿಮೆ, ಅನಂತನ ಹುಣ್ಣಿಮೆಯಂತೆ, ನೂಲಹುಣ್ಣಿಮೆ ಯು ಒಂದು ಹಬ್ಬ, ನೂಲು ಎಂದರೆ ಸೂತ್ರ, ಸೂತ (ಹಿಂದಿ ಭಾಷೆ) ಎಳೆದಾರ ಎಂದು ಅರ್ಥ, ಈ ಒಂದು ಸಣ್ಣ ಎಳೆ, ಸಾಮಾನ್ಯ ದಾರಕ್ಕೆ ಇಷ್ಟೇಕೆ ಮಹತ್ವಕೊಟ್ಟು ಹಬ್ಬವಾಗಿ ಆಚರಿಸಲಾಗುತ್ತದೆ ? ಇದರ ಪೂಜೆ ಏನು? ಪ್ರಶ್ನೆಗಳು ಸಹಜ.

ನಾವು ಉಡುವ ತೊಡುವ ಉಡುಗೆ, ಬಟ್ಟೆಗಳು ನೂಲಿನಿಂದ ನಿರ್ಮಾಣವಾಗುತ್ತವೆ, ನಮ್ಮ ಮಾನ ಮುಚ್ಚಿಕೊಳ್ಳಲು



ಸಮಾಜ ಸಮಾರಂಭಗಳಲ್ಲಿ ಮಾನ್ಯತೆಗೆ ಈ ನೂಲೇ ಮೂಲ ಆಧಾರ, ಎಲ್ಲಾ ಜಾತಿ, ಮತ, ಧರ್ಮದವರು ನೂಲಿನ ಮಹತ್ವ ಅರಿತು ಒಂದಲ್ಲಾ ಒಂದು ರೀತಿಯಿಂದ ನೂಲನ್ನು ಅದರ ಭಾವದಿ ಬಳಸುತ್ತಾರೆ. ಉಡುದಾರ, ಜನಿವಾರ, ಶಿವದಾರ, ಮಂಗಳಸೂತ್ರ, ಕಂಕಣ ಬಂದ, ಮೊಹರಂನಲ್ಲಿ ಲಾಡಿ ಧರಿಸುವುದು, ಅನಂತನ ದಾರ, ಎಳೆ ಅಷ್ಟಮಿ ದಾರ, ಕಾಶಿ ದಾರ , ತಾಯತ ಯಂತ್ರಗಳನ್ನು ಕಟ್ಟಿಸುವ ದಾರ, ಹೂಮಾಲೆಗೆ, ಹಾರಕ್ಕೆ, ಹೀಗೆ ಹಲವಾರು ಕಾರಣಕ್ಕಾಗಿ ದಾರ ಬಳಕೆ ಮಾಡುತ್ತಾರೆ,

ಮದುವೆಯಲ್ಲಿ ಲಕ್ಷ ಲಕ್ಷ ಆಭರಣ ಧರಿಸುವ ಚಿನ್ನದ ಸರ ಗಳಿದ್ದರೂ ಮಾಂಗಲ್ಯ ಕಂಕಣ ಬಂಧನಕ್ಕೆ ಈ ನೂಲೇ ಮುಖ್ಯ, ಈ ದೃಷ್ಟಿಯಿಂದ ನಮ್ಮ ಪೂರ್ವಜರು ಇದಕ್ಕೆ ಹೆಚ್ಚಿನ ಮಹತ್ವಕೊಟ್ಟು ಸಂಪ್ರದಾಯ, ಪೂಜೆಗಳಲ್ಲಿ, ಆಚರಣೆಗೆ ಬರುವಂತೆ ಇದಕ್ಕೆ ಒಂದು ಹಬ್ಬದ ಮಹತ್ವ ಕೊಟ್ಟು ನೂಲಿನಿಂದ ಆಗುವ ಪ್ರಯೋಜನ ಗಳನ್ನು ಮರೆಯದಂತೆ ಮಾಡಿದ್ದಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರಿಗೆ ನೂಲುವುದು ಅವರ ದೈನಂದಿನ ಕಾರ್ಯದ ಅವಿಭಾಜ್ಯ ಅಂಗವಾಗಿತ್ತು. ನೂಲು ತಿರುಗುವಾಗ ಶ್ರೀರಾಮನನ್ನು ಧ್ಯಾನಿಸುತ್ತಿದ್ದಾಗ ನೂಲಿನಲ್ಲಿ ಶ್ರೀರಾಮನ ಭಗವದ್ ರೂಪ ಕಾಣುತ್ತಿದ್ದರಂತೆ.

ಇತ್ತೀಚಿಗೆ 100 ಹುಣ್ಣಿಮೆಯಂದು ರಕ್ಷಾಬಂಧನ ಆಚರಣೆಯಿಂದ ಇದರ ಸಂಭ್ರಮ ಸಡಗರ ಇನ್ನೂ ಹೆಚ್ಚಾಗಿದೆ, 'ರಾಖಿ ಹಬ್ಬ' ಎಂದೇ ಪ್ರಸಿದ್ಧಿ ಪಡೆಯುತ್ತಿದೆ ಭಾತೃ-ಭಗಿನಿ , ಪ್ರೀತಿ, ಸಹೋದರತ್ವ, ಭಾವ ಬೆಳೆಸಲು ಹೆಣ್ಣುಮಕ್ಕಳು ಗಂಡು ಮಕ್ಕಳಿಗೆ, ಪ್ರೀತಿ ರಕ್ಷಣೆಗೆ ರಾಖಿಯನ್ನು ಕಟ್ಟಿ ಸಿಹಿ ತಿನಿಸುಗಳನ್ನು, ಸಹೋದರತ್ವವನ್ನು ಪರಸ್ಪರ ಹಂಚಿಕೊಳ್ಳುತ್ತಾರೆ.

ನೂಲಿನ ಮಹತ್ವ ತಿಳಿಸಲು ಮೊಘಲ್ ಸಾಮ್ರಾಜ್ಯದ ರಾಜನಾದ ಅಕ್ಬರನ ನವರತ್ನಗಳೆಂದು ಹೆಸರಾದ ವಿದ್ವಾಂಸರು, ಮಂತ್ರಿಗಳು, ಪಂಡಿತರು ಇರುವ (ಸಭೆ) ದರಬಾರದಲ್ಲಿ ಪ್ರಶ್ನೆ ಹಾಕುತ್ತಾನೆ, ಹೂಗಳಲ್ಲಿ ಯಾವುದು ಶ್ರೇಷ್ಠ ? ಅನೇಕ ಹೂವುಗಳನ್ನು ಹೆಸರಿಸಿದರು ಅಕ್ಬರನು ಒಪ್ಪಲಿಲ್ಲ ಕೊನೆಗೆ ಹತ್ತಿ ಬೆಳೆವ ಗಿಡದ ಹೂವು ಶ್ರೇಷ್ಠವೆಂದು ಬೀರಬಲ್ಲ ಹೇಳಿದಾಗ ಸಂತೋಷಿಸಿ ಸನ್ಮಾನಿಸುತ್ತಾನೆ, ಮಾನವನ ಮಾನ ಮರ್ಯಾದೆ ಈ ಹೂ ನೀಡುವ ಫಲದಿಂದ ಎಂಬುದು ವಿದಿತವಾಗುತ್ತದೆ, ಹೀಗೆ ಪೂರ್ವ ಮತ್ತು ಇತ್ತೀಚಿನ ಇತಿಹಾಸ ಹಾಗೂ ಅಧ್ಯಾತ್ಮ ಕ್ಷೇತ್ರದ ಜ್ಞಾನಿಗಳಿಂದ ನೂಲಿನ ಮಹತ್ವ, ಮಾಹಿತಿ ತಿಳಿದು ನೂಲು ಹುಣ್ಣಿಮೆ ಭಾರತದ ಹಬ್ಬಗಳಲ್ಲಿ ತನ್ನದೇ ಆದ ಸ್ಥಾನ ಪಡೆದು ಆಚರಣೆಯಲ್ಲಿದೆ,

**- ಜೆಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ.

## ಎಂದಿದರಂತ್ಯವೋ ?

ಕಂಕಣ, ಉಂಗುರ, ಪೂರ್ಣ, ಅರ್ಧ, ಚಟಾಕು, ಪಾವು!
ಇವೆಲ್ಲಾ ತಮಗೆ ವರವಾಗಿದ್ದವು
ಹೀಗೆಂದು ಕೆಲವು ಖಾಸಗಿ-ಪಾಸಗಿ ಟಿ.ವಿ ಚಾನೆಲ್‌ನವು
ಒಮ್ಮೆನನಗೆ ಹೇಳಿದ್ದವು.

ಏನಿದು? ಅರ್ಧಪೂರ್ಣ, ಉಂಗುರ, ಕಂಕಣ!
ಬಂಗಾರದೊಡವೆದಾಗಿ ನಾನಾ?
ಏನೂ ಅಲ್ಲ; ಸೂರ್ಯ, ಚಂದ್ರಗ್ರಹಣ ;
'ನೋಡಿರಿ, ಕೇಳಿರಿ' ಇದರಿಂದಾಗುವ ವಿಪತ್ತುಗಳನ್ನ.

ಅದರಲ್ಲೂ ನೀಲಿ, ಕೆಂಪು, ರಕ್ತಚಂದನ, ಕಂದು!
ಭಲೇ ! ದಿನವೆಲ್ಲಾ ಬಣ್ಣ-ಬಣ್ಣಿಸಿ ತಂದು,
ಏನೇನಾಗಿತ್ತು, ಅಂದು, ಇನ್ನೇ ನೇನಾಗುತ್ತೆ ಮುಂದು,
ಅವಘಡಗಳ ಹೇಳುತ್ತಾ ಹೆದರಿಸಲೇಬೇಕೆಂದು.

ಆಗಿದ್ದು ಹೋಗಿದ್ದಕ್ಕೆಲ್ಲಾ ಗ್ರಹಣವೇ ಕಾರಣವಂತೆ!
ಬಿಡುತ್ತಲೇ ಇದ್ದರು ಸುಳ್ಳಿನಕಂತೆ,
ದುಶ್ಯಾಸನರಾಯ ಸೆಳೆವ ಸೀರೆಯಂತೆ,
ಮುಕ್ತಾಯವೆಂಬುದೇ ಇಲ್ಲದಂತೆ.

ಆಕ್ಷೇಪ ಅಲಕ್ಷಿಸಿ, ಕಾಲಕ್ಷೇಪ ಮುಂದುವರೆದೇ ಇತ್ತು,
ಹಾಡಿದ್ದೇ ಹಾಡಿ ಚಾನೆಲ್‌ನವರಿಗೇ ಬೋರಾಗಿತ್ತು,
ಹೆದರಿಸಲು ಹೊಸದೇನೆಂದು ಹುಡುಕಾಟ ಸಾಗಿತ್ತು.
ವಾಹ್! ಕೊರೊನಾ-ಕೋವಿಡ್ ಸಿಕ್ಕೇ ಬಿಟ್ಟಿತು.

ಗ್ರಹಣವಾದರೋ ಒಂದೇ ದಿನದ ಕೆಲವೇ ಗಂಟೆ,
ಕವಡೆ ಹಾಕುವ ಗುರೂಜಿಗಳೆಷ್ಟು ಹೇಳಿಯಾರು ?
ಕೊರೊನಾ ಕೋವಿಡ್‌ಗೆ ಕೊನೆಯೆಂಬುದುಂಟೆ,
ಎಂದಿದರಂತ್ಯವೋ ಬಲ್ಲವರ್‍ಯಾರು ?

ಬೆಳಗೂ ಬೈಗೂ, ಹಗಲೂ ಇರುಳು ಒಂದೇ ಗೋಳು,
ಚೂಯಿಂಗ್ ಗಮ್ ಜಗಿದಂತೆ ಹೇಳಿದ್ದೇ ಹೇಳು.
ಬಿಟ್ಟರೆ ಬೇಯಲಿಕ್ಕಿಲ್ಲ ಚಾನೆಲ್‌ಗಳ ಬೇಳೆಕಾಳು,
ನೋಡುತ್ತಾ, ಕೇಳುತ್ತಾ ಕೂತವರ ಸಮಯ ಹಾಳು.

**- ಹೆಚ್.ಬಿ.ಮಂಜುನಾಥ,** ಹಿರಿಯ ಪತ್ರಕರ್ತ

# ವಿಶ್ವ ಸ್ತನ್ಯಪಾನ ಸಪ್ತಾಹ 2020 : ಎದೆ ಹಾಲು ಪರಿಸರ ಪ್ರೇಮಿ

**(3ನೇ ಪುಟದಿಂದ)** ಬೆಳವಣಿಗೆಗೆ ಅಭಿವೃದ್ದಿಗೊಳಿಸುವ ಯೋಜನೆಗಳನ್ನು ಹೊಂದಿದೆ. ಅದರಲ್ಲಿ ಸುಮಾರು ಗುರಿಗಳನ್ನು ತಲಪಲು ಎದೆ ಹಾಲುಣಿಸುವಿಕೆಯ ಪಾತ್ರ ಅತ್ಯಂತ ವಿಶೇಷವುಳ್ಳದ್ದಾಗಿದೆ. 2020 ರೊಳಗೆ, ವಿಶ್ವದಾದ್ಯಂತ ಗುರಿ ಮುಟ್ಟುವುದಾಗಿದೆ.

1. ಗುರಿಗಳಾದ 1, 8 ಮತ್ತು 10 ರ ಧ್ಯೇಯಗಳೆಂದರೆ, ಬಡತನದ ನಿರ್ಮೂಲನೆ, ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹ, ಅಸಮತೋಲನ ತೊಲಗಿಸುವಿಕೆ. ಎದೆ ಹಾಲುಣಿಸುವುದರಿಂದಾಗಿ ಬಡತನದ ನಿರ್ಮೂಲನೆ ಅವಶ್ಯವಾಗಿದೆ. ಎದೆಹಾಲು ನೈಸರ್ಗಿಕವಾದದು, ಸ್ವಚ್ಛ, ಸುಲಭವಾಗಿ ದೊರಕುವುದು, ಯಾವುದೇ ರೀತಿಯ ಕುಟುಂಬಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗದು. ಮಗುವಿನ ಆರೋಗ್ಯಕರವಾದ ಬೆಳವಣಿಗೆಗೆ ಬೇಕಾದ ಎಲ್ಲಾ ಪೌಷ್ಠಿಕಾಂಶ ಒದಗಿಸುವದರಿಂದ ಎದೆ ಹಾಲು ಆರ್ಥಿಕವಾಗಿ ಸಹಾಯ ಮಾಡುತ್ತದೆ. ಹೆಚ್ಚಿನ ರೀತಿಯಲ್ಲಿ ಎದೆ ಹಾಲುಣಿಸುವಿಕೆಯಿಂದಾಗಿ ವಾರ್ಷಿಕವಾಗಿ 320 ಬಿಲಿಯನ್ ಡಾಲರ್ ನಷ್ಟು ಹೆಚ್ಚಿನ ಆರ್ಥಿಕ ಆದಾಯವು ಜಗತ್ತಿನ ಆರ್ಥಿಕ ವ್ಯವಸ್ಥೆಗೆ ಶೇ. 0.5 ನಷ್ಟು ಸೇರ್ಪಡೆಯಾಗುತ್ತದೆ.

ಹಾಲು ಣಿಸುವುದರಿಂದ ಹಸಿವಿನ ಅಂತ್ಯ, ಆಹಾರದ ಭದ್ರತೆ ಹಾಗು ಉತ್ತಮವಾದ ಪೌಷ್ಠಿಕ ಆಹಾರ ಹಾಗು ಸುಸ್ಥಿರ ವ್ಯವಸಾಯಕ್ಕೆ ಪ್ರೋತ್ಸಾಹವನ್ನೂ ನೀಡುತ್ತದೆ. ಆರು ತಿಂಗಳವರೆಗೆ ಎದೆಹಾಲು ಹಾಗು ಪೂರಕವಾದ ಆಹಾರ ಆರು ತಿಂಗಳ ನಂತರ ಕೊಡುವುದರಿಂದ, ತಾಯಿ ಹಾಗು ಮಗುವಿನ ಆರೋಗ್ಯ ಸುಧಾರಿಸುವುದಲ್ಲದೇ, ಅಪೌಷ್ಠಿಕತೆಯನ್ನು ಹೋಗಲಾಡಿಸುತ್ತದೆ. ಬೊಜ್ಜುತನ ವನ್ನು ತಡೆಗಟ್ಟುತ್ತದೆ, ಶಿಶುಗಳಿಗೆ ಆಹಾರ ಸುಭದ್ರತೆ ಯನ್ನು ಒದಗಿಸುತ್ತದೆ. ಎದೆ ಹಾಲುಣಿಸುವಿಕೆಯು ಅತ್ಯುತ್ತಮವಾದ ಒಂದು ಸಾಧನ, 5 ವರುಷದೊಳಗಿನ ಮಕ್ಕಳ ಸಾವನ್ನು ಕಡಿಮೆ ಮಾಡುತ್ತದೆ.

ಗುರಿ 4-ಶಿಕ್ಷಣದ ಬಗ್ಗೆ, ಎದೆ ಹಾಲುಂಡು ಬೆಳೆದ ಮಕ್ಕಳಲ್ಲಿ ಬುದ್ಧಿಮತ್ತೆ ಹೆಚ್ಚಾಗಿರುವುದು ಕಂಡುಬಂದಿದೆ. ಜಾಗತಿಕ ಶಿಕ್ಷಣದ ಗುರಿ ತಲುಪಲು ಸಹಾಯವಾಗುತ್ತದೆ.

ಗುರಿ 5- ರಲ್ಲಿ ಲಿಂಗ ಭೇದ ಅಸಮಾನತೆಗೆ ಒತ್ತು ನೀಡಲಾಗಿದೆ. ಎದೆ ಹಾಲುಣಿಸುವಿಕೆಯಿಂದಾಗಿ, ತಾಯಿಗೆ ಸಹಜವಾದ ಗರ್ಭ ನಿರೋಧಕವಾಗಿ ಕೆಲಸ ಮಾಡುವುದು ಹಾಗು ಕೆಲಸ ಮಾಡುವ ಜಾಗಗಳಲ್ಲಿ ಆಕೆಗೂ ಸಮಾನವಾದ ಹಕ್ಕುಗಳಿಗೆ ಬಾಧ್ಯಳಾಗಿದ್ದಾಳೆ.

ಗುರಿ 12 ರಲ್ಲಿ ಸ್ತನ್ಯಪಾನ ಮಾಡಿಸಲು ಯಾವುದೇ ಕಾರ್ಖಾನೆಗಳ ಅವಶ್ಯವಿರುವುದಿಲ್ಲ, ಇದು ನಿಸರ್ಗದತ್ತ ವಾದದ್ದು. ಹಾಗಾಗಿ ಸಂಪನ್ಮೂಲ ಗಳ ಅವಶ್ಯವಿರದೇ ಇರುವುದರಿಂದ, ಪ್ರಕೃತಿಯ ರಕ್ಷಣೆಗೆ ಮುಖ್ಯ ಕಾರಣ.

ಎದೆ ಹಾಲುಣಿಸುವಿಕೆಯು ಪೌಷ್ಟಿಕತೆ, ಆರೋಗ್ಯ ಹಾಗು ಉತ್ತಮ ಜೀವನವನ್ನು ಮಕ್ಕಳಿಗೆ ಹಾಗು ತಾಯಂದರಿಗೆ ಒದಗಿಸುವುದಕ್ಕೆ, 2020 ಸುಸ್ಥಿರ ಅಭಿವೃದ್ದಿಗೆ ಕಾರಣವಾದ ಗುರಿಗಳನ್ನು ತಲುಪಲು ಇದು ಒಂದು ಕೇಂದ್ರ ಬಿಂದುವಾಗಿದೆ. ಸ್ತನ್ಯಪಾನವನ್ನು ಹೆಚ್ಚಿಸುವುದರಿಂದ 820000 ಕ್ಕೂ ಹೆಚ್ಚು 5 ವರ್ಷದೊಳಗಿನ ಮಕ್ಕಳ ಜೀವವನ್ನು ಉಳಿಸಬಹುದಾಗಿದೆ.

ಕಡಿಮೆ ಎದೆ ಹಾಲು ಕುಡಿದು ಅಥವಾ ಎದೆ ಹಾಲು ಕುಡಿಯದೆ ಬೆಳೆದ ಮಕ್ಕಳಿಗೆ ಹೋಲಿಸಿದರೆ ಎದೆ ಹಾಲನ್ನು ಹೆಚ್ಚು, ಕನಿಷ್ಠ ಎರಡು ವರ್ಷಗಳವರೆಗೆ ಕುಡಿದು ಬೆಳೆದ, ಮಕ್ಕಳು ಅನೇಕ ಸೋಂಕುಗಳಿಂದ ರಕ್ಷಿಸಲ್ಪಡುವರು. ಹಾಗಾಗಿ ಇವರಲ್ಲಿ ಮರಣ ಸಂಖ್ಯೆ ಕಡಿಮೆ ಪ್ರಮಾಣದಲ್ಲಿ ಇರುವುದು.

ಎದೆ ಹಾಲುಣಿಸುವಿಕೆಯಿಂದ, ಕ್ಯಾನ್ಸರಿನಿಂದಾಗಿ 20,000 ತಾಯಿಂದಿರ ಮರಣ ಹೊಂದುವುದನ್ನು ತಪ್ಪಿಸಬಹುದು. ಅಷ್ಟೇ ಅಲ್ಲ, ಸಕ್ಕರೆ ಕಾಯಿಲೆ ಕೂಡ ಕಡಿಮೆ ಪ್ರಮಾಣದಲ್ಲಿ ಇರುವುದಲ್ಲದೆ, ಅಂಡಾಣುವಿನ ಕ್ಯಾನ್ಸರ್ ಆಗುವುದು ಕೂಡ ಕಡಿಮೆ.

ಗುರಿ 5 -ದುಡಿಯುವ ಮಹಿಳೆ. ವಿಶ್ವದಲ್ಲಿ 40.6% ದುಡಿಯುವ ಮಹಿಳೆಗೆ ಮಾತ್ರ ಕಾಯಿದೆ ಪ್ರಕಾರ ಹೆರಿಗೆ ರಜೆ ಪಡೆಯುವುದಕ್ಕೆ ಬಾಧ್ಯರಾಗಿದ್ದರೆ. ದುಡಿಯುವ ಮಹಿಳೆಗೆ, ಎದೆ ಹಾಲುಣಿಸಲು ಆಕೆಯ ಕೆಲಸವೇ ಆಕೆಗೆ ದೊಡ್ಡ ಅಡ್ಡಿ. ಹಾಗಾಗಿ ಆಕೆ ಎದೆ ಹಾಲು ಬೇಗನೆ ನಿಲ್ಲಿಸಲು ಇದು ಒಂದು ಕಾರಣ. ತಾಯಂದರಿಗೆ ಹೆರಿಗೆ ಭತ್ಯೆ, ದುಡಿಯುವ ಜಾಗಗಳಲ್ಲಿ ಆಕೆಗೆ ಬೆಂಬಲ ಹಾಗು ಸಹಾಯದಿಂದಾಗಿ ಶೇ. 30ರಷ್ಟು ಎದೆ ಹಾಲುಣಿಸುವ ಪ್ರಮಾಣವನ್ನು ಹೆಚ್ಚಿಸಿದೆ.

**ಎದುರಿಸಬೇಕಾದ ಸವಾಲುಗಳು :** ಮಾನವನ ಸತತ ಪರಿಸರದ ಶೋಷಣೆ ಹಾಗು, ಅಖಂಡ ನೈಸರ್ಗಿಕ ಸಂಪನ್ಮೂಲಗಳ ಸವಕಳಿ ಹಾಗು ಹಾನಿಯಿಂದಾಗಿ ಜನ ಜೀವನ ಅಸ್ತವ್ಯಸ್ತವಾಗಿದೆ. ಹಸಿರು ಮನೆ ಅನಿಲದ ಹೊರಸೂಸುವಿಕೆ ಕೂಡ ಹೆಚ್ಚಾಗಿದೆ. ನಾವು ಈಗ ನಮ್ಮ ಭೂ ಸಂಪತ್ತನ್ನು ಕಾಪಾಡುವುದಲ್ಲದೇ, ನಮ್ಮ ಆರೋಗ್ಯವನ್ನು ಕೂಡಾ ರಕ್ಷಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಭೂಮಿ, ಜಲ, ನೈಸರ್ಗಿಕ ಶಕ್ತಿಯನ್ನು ಯಥೇಚ್ಛವಾಗಿ ಬಳಸದೆ ಇತಿಮಿತಿಯಲ್ಲಿ ಉಪಯೋಗಿಸಿ, ಸಂಪನ್ಮೂಲ ಗಳನ್ನು ರಕ್ಷಣೆ ಮಾಡುವುದಾಗಿದೆ. ಸುಸ್ಥಿರ ಬೆಳವಣಿಗೆಯಡಿ ನಿರ್ದಿಷ್ಟ ಮಾರ್ಗಸೂಚಿಗಳನ್ನು ಕೊಡಲಾಗಿದೆ. ಎದೆ ಹಾಲುಣಿಸುವಿಕೆಯು ಕೂಡ ಇದಕ್ಕೆ ಮುಖ್ಯ ಸಂಪರ್ಕ ಕೊಂಡಿಯಾಗಿದೆ.

**ಸುಸ್ಥಿರ ಅಭಿವೃದ್ದಿಯ ಬೆಳವಣಿಗೆಗೆ ಪರಿಹಾರ:** ಮೊತ್ತ ಮೊದಲ ಆದ್ಯತೆ ಪ್ರಕೃತಿಯ ಸಂರಕ್ಷಣೆ. ಪ್ಯಾರಿಸ್ ನಲ್ಲಿ ನಡೆದ ಒಪ್ಪಂದದ ಮೇರೆಗೆ 2015-2030 ರ ಗುರಿಗಳನ್ನು ಮುಟ್ಟಲು ತೀವ್ರವಾಗಿ ಕೆಲಸ ಮಾಡಬೇಕಿದೆ. ಅದರಲ್ಲೂ 2025 ರ ಗುರಿ ಎದೆ ಹಾಲುಣಿಸುವುದಾಗಿದೆ. ಸುಸ್ಥಿರ ಉತ್ಪಾದನೆ ಹಾಗು ಬಳಕೆಯಲ್ಲಿನ ರೀತಿಗಳು ನಮ್ಮ ಪ್ರಕೃತಿಯನ್ನು ಕಾಪಾಡುವಲ್ಲಿ, ನೈಸರ್ಗಿಕ ಸಂಪನ್ಮೂಲವನ್ನು ರಕ್ಷಿಸುವಲ್ಲಿ ಸ್ತನ್ಯಪಾನವು ಪಾತ್ರವು ಕೊಡ ಮುಖ್ಯ.ಇತ್ತೀಚಿನ ಜಾಗತಿಕ ಸನ್ನೀವೇಶದಲ್ಲಿ, ಮಂದಗತಿಯಲ್ಲಿ ಏರುತ್ತಿರುವ ಎದೆ ಹಾಲುಣಿಸುವಿಕೆ. ಏರುತ್ತಿರುವ ಕೃತಕ ಹಾಲು ಉತ್ಪಾದಿಸುವ ಕಾರ್ಖಾನೆಗಳು, ಈಗ ಪ್ರಪಂಚವೇ ಎದುರಿಸುತ್ತಿರುವ ತುರ್ತು ಪರಿಸ್ಥಿತಿಗಳು (ಕೋವಿಡ್-19), ತುಂಬಾ ಕಳವಳಕಾರಿಯಾಗಿವೆ. ಹಾಗಾಗಿ ಎಲ್ಲಾ ಹಂತದಲ್ಲೂ, ಪ್ರಕೃತಿಯ ಸಂರಕ್ಷಣೆಯಲ್ಲಿ ಎದೆ ಹಾಲಿನ ಮಹತ್ವವನ್ನು ಅರಿತು ಅದನ್ನು ಪೋಷಿಸಿ, ಬೆಂಬಲಿಸಿ ಹಾಗು ಸಂರಕ್ಷಿಸಿ, ಸದೃಢ ಜಗತ್ತು ನಿರ್ಮಿಸಿ'. ಈ ಒಳ್ಳೆಯ ಕಾರ್ಯಕ್ಕೆ ಎಲ್ಲರು ಕೈಗೂಡಿಸಿ.

ಈ ವರ್ಷ ಸ್ತನ್ಯಪಾನ ಸಪ್ತಾಹದ ಅಂಗವಾಗಿ 17 ಸಮರ್ಥನೀಯ ಬೆಳವಣಿಗೆಯ ಗುರಿಯನ್ನು ಹೊಂದಿದೆ. 2030ರ ವೇಳೆಗೆ ವಿಶ್ವದಾದ್ಯಂತ ಎಲ್ಲ ದೇಶಗಳು ಗುರಿ ತಲುಪಲು ಕಾರ್ಯ ನಿರ್ವಹಿಸಬೇಕಾಗಿದೆ. ಸತ್ಯಾಸತ್ಯತೆ ಏನೆಂದರೆ ಜಗತ್ತಿನಾದ್ಯಂತ ಎದೆ ಹಾಲುಣಿಸುವ ಪ್ರಮಾಣದಲ್ಲಿ ಯಾವುದೇ ಏರಿಕೆ ಇಲ್ಲ, ಎರಡು ದಶಕಗಳಿಂದಲೂ ಅಷ್ಟೇ ಇದೆ, ಶೇ. 40ಕ್ಕಿಂತಲೂ ಕಡಿಮೆ ತಾಯಂದಿರು ಎದೆ ಹಾಲು ಉಣಿಸುತ್ತಾರೆ.

**ಡಾ. ನೈಜೆಲ್ ರೋಲಿನ್ಸ್ (2020) :** ಆರೋಗ್ಯಕರವಾದ ಪರಿಸರ ಹಾಗೂ ಮನುಷ್ಯನ ಆರೋಗ್ಯಕ್ಕೆ ಕಾರಣವಾದ ಎದೆ ಹಾಲುಣಿಸುವಿಕೆಯಲ್ಲಿ ಕಡಿಮೆ ಪ್ರಮಾಣ ಉಂಟಾಗುವುದಕ್ಕೆ ನಮ್ಮ ಸುತ್ತಲಿನ ಜವಾಬ್ದಾರಿಯುತ ಸಮಾಜದ ಪ್ರತಿಯೊಬ್ಬರು ಕಾರಣಕರ್ತರು ಎಂದು ಹೇಳುತ್ತಾರೆ. ಇದಕ್ಕಾಗಿ ನಾವು, ನೀವುಗಳು ಎಲ್ಲಾ ಹಂತಗಳಲ್ಲಿಯೂ ಹೇಗೆ ಕೆಲಸ ಮಾಡಬಹುದು ಎಂಬುದನ್ನು ಯೋಚಿಸಿ ಕಾರ್ಯ ನಿರ್ವಹಿಸಬೇಕಾಗಿದೆ. ಪ್ರತಿಯೊಬ್ಬರೂ ಜವಾಬ್ದಾರಿಯನ್ನರಿತು ತಾವೂ ಕೊಡಾ ಪೃಥ್ವಿಯ ಸಂರಕ್ಷಣೆಯಲ್ಲಿ ಪಾಲ್ಗೊಳ್ಳುವುದು ಕರ್ತವ್ಯವೆಂದು ತಿಳಿದು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಮಹತ್ವದ ಪಾತ್ರವನ್ನು ಅರಿಯಬೇಕಿದೆ.

1. ಮೊಟ್ಟ ಮೊದಲನೆಯದಾಗಿ, ತಾಯಂದಿರಿಗೆ, ಸಮರ್ಪಕವಾಗಿ ಎದೆ ಹಾಲುಣಿಸುವುದರ ಬಗ್ಗೆ ಸರಿಯಾದ ಮಾಹಿತಿ ಸಿಗದೇ ಇರುವುದೇ ಕಾರಣ, ತಾಯಿ ತನ್ನ ಗರ್ಭವಾಸ್ಥೆಯಲ್ಲಿ ಇರುವಾಗ, ಎದೆ ಹಾಲಿನ ಮಹತ್ವ ತಿಳಿಸುವುದು, ಆಕೆಯ ಸ್ತನ ಪರೀಕ್ಷೆ ಮಾಡಿ, ಸಣ್ಣ ಪುಟ್ಟ ತೊಂದರೆಗಳು ಇದ್ದಲ್ಲಿ ಸರಿಪಡಿಸುವುದು. ಸೂಕ್ತವಾದ ಸಮಯವೆಂದರೆ, ಆಕೆ ತನ್ನ ಪ್ರಸವಪೂರ್ವ ಪರೀಕ್ಷೆಗೆ ಬಂದಾಗ, ಮಹಿಳಾ ಡಾಕ್ಟರುಗಳು, ದಾದಿಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕೆಲಸಗಾರರು, ಎದೆ ಹಾಲಿನ ಮಾಹಿತಿ ಒದಗಿಸುವುದು.

2. ಎದೆ ಹಾಲುಣಿಸುವಿಕೆಯ ಬಗ್ಗೆ ಕೌಶಲ್ಯಭರಿತ ನುರಿತ ತರಬೇತುದಾರರಿಂದ ಸಮುದಾಯದಲ್ಲಿ ಸರಿಯಾದ ಮಾಹಿತಿ ದೊರಕುವಂತೆ ಮಾಡುವುದು. ಹಾಗಾಗಿ ಎಲ್ಲಾ ಆರೋಗ್ಯ ಕಾರ್ಯಕರ್ತರನ್ನು ಹಾಗು ಸಮುದಾಯದಲ್ಲಿ ಸಮರ್ಥವಾಗಿ ಎದೆ ಹಾಲುಣಿಸಿ ಮಕ್ಕಳನ್ನು ಪೋಷಿಸಿ, ಬೆಳೆಸಿದ ಮಹಿಳೆಯರನ್ನು ಗುರುತಿಸಿ, ಅವರಿಗೂ ಕೊಡ ತರಬೇತಿ ಕೊಟ್ಟು, ಎದೆ ಹಾಲುಣಿಸುವಿಕೆಯಲ್ಲಿ ತಾಯಂದಿರಿಗೆ ಸಹಾಯ ಮಾಡುವುದಾಗಿದೆ.

3.ಕೃತಕಹಾಲಿನ ಮಾಹಿತಿ ಬಗ್ಗೆ ಅತಿಯಾದ ಜಾಹೀರಾತಿನ ಹಾವಳಿಯನ್ನು ತಪ್ಪಿಸಲು ಐ.ಎಂ.ಎಸ್. ಕಾನೂನಿನ ಸಮರ್ಪಕವಾದ ಬಳಕೆ, ಕಡ್ಡಾಯವಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ಉಪಯೋಗಿಸಿ, ಕೃತಕ ಹಾಲಿನ ಬಳಕೆಯನ್ನು ನಿಲ್ಲಿಸುವುದು.

4. ರಾಷ್ಟ್ರೀಯ ಆರೋಗ್ಯ ನಿಯಮದಡಿ ಎಲ್ಲಾ ಹೆರಿಗೆ ಆಸ್ಪತ್ರೆಗಳಲ್ಲಿ ಹಾಗು ಹೆರಿಗೆ ಕೊಠಡಿಗಳಲ್ಲಿ, ಶಿಶು ಸ್ನೇಹಪರ ಹತ್ತು ಸೂತ್ರಗಳನ್ನು ಅಳವಡಿಸಿ, ಸಮರ್ಥವಾಗಿ ಎದೆ ಹಾಲುಣಿಸಲು ಅನುಕೂಲವಾಗುವಂತೆ ಕ್ರಮಗಳನ್ನು ಪಾಲಿಸುವುದು.

5. ಉದ್ಯೋಗಸ್ಥ ಮಹಿಳೆಯರಲ್ಲಿ ಎದೆ ಹಾಲುಣಿಸುವಿಕೆ ಕಡಿಮೆಯಾಗಿದೆ. ಯಾಕೆಂದರೆ ಆಕೆಗೆ ಮರಳಿ ಕೆಲಸ ಸೇರುವ ಒತ್ತಡ ದುಡಿಯುವ ಮಹಿಳೆಗೆ, ಬೇಕಾದ ಹೆರಿಗೆ ಭತ್ಯೆ, ಹೆರಿಗೆ ರಜಾ, ಉದ್ಯೋಗ ಮಾಡುವ ಕಡೆ ಎದೆ ಹಾಲುಣಿಸಲು ಪ್ರತ್ಯೇಕವಾದ ಕೊಠಡಿ ಹಾಗು ವೇತನ ಸಹಿತ ಬಿಡುವು ಕೊಡುವುದರಿಂದ, ಆರು ತಿಂಗಳವರೆಗೆ ಎದೆ ಹಾಲುಣಿಸಲು ಸಹಕಾರಿಯಾಗುವುದು. ಎಲ್ಲಾ ಅನುಕೂಲತೆಗಳ ಬಗ್ಗೆ ಉದ್ಯಮಿಗಳು ಕಲ್ಪಿಸಿ ಕೊಡಲು ಮನವಿ ಮಾಡುವುದು.

6. ವೇತನ ಸಹಿತ ಪೋಷಕರ ಸಂರಕ್ಷಣೆಗಾಗಿ ಇರುವ ಕಾರ್ಯನೀತಿಗಳನ್ನು ಅನುಸರಿಸಿ, ಲಿಂಗ ಸಮಾನತೆಯಯನ್ನು ಎತ್ತಿ ಹಿಡಿಯಬೇಕಾಗಿದೆ.

7. ಸ್ಥಳೀಯ ಉದ್ಯಮಿಗಳೊಂದಿಗೆ ಚರ್ಚಿಸಿ, ಅವರು ಹೇಗೆ ತಮ್ಮ ಉದ್ಯೋಗ ಸ್ಥಳಗಳಲ್ಲಿ ಎದೆ ಹಾಲುಣಿಸುವಿಕೆಯನ್ನು ಬೆಂಬಲಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡು ಉದ್ಯೋಗ ಸ್ಥಳಗಳನ್ನು 'ಕುಟುಂಬ ಸ್ನೇಹಪರ'ವನ್ನಾಗಿ ಪರಿವರ್ತಿಸುವುದು. 8.ಸರ್ಕಾರದ ಮುಖಾಂತರ ಸ್ವಲ್ಪ ಬಜೆಟ್ಟನ್ನು, ಸ್ತನ್ಯಪಾನದ ಆಚರಣೆಗಾಗಿ ವ್ಯಯಸುವುದಲ್ಲದೆ, ಇದರೊಟ್ಟಿಗೆ ಮಾಲಿನ್ಯತೆ ತಡೆಯುವಲ್ಲಿ ಪ್ರಯತ್ನಿಸಬೇಕು.

ಇಂಗಾಲ ಹಾಗು ನೀರಿನ ಹಾನಿಯುಂಟಾಗು ವುದನ್ನು ತಡೆಯುವತ್ತ ಎಲ್ಲ ಕಾರ್ಯಕ್ರಮಗಳಲ್ಲಿ ಎದೆ ಹಾಲಿನ ಮಹತ್ವದ ಬಗ್ಗೆ ತಿಳಿಸುವುದಲ್ಲದೆ, ಪರಿಸರದ ಸಂರಕ್ಷಣೆಯ ಬಗ್ಗೆ ತಿಳಿಯಪಡಿಸುವುದು.

9. ರಾಜಕೀಯ ವ್ಯಕ್ತಿಗಳಿಗೆ ಹಾಗು ನಗರದ ಮುಖಂಡರುಗಳಿಗೆ ಎದೆಹಾಲಿನ ಮಹತ್ವದ ಬಗ್ಗೆ ತಿಳಿಸಿ ಸಮರ್ಥನೀಯ ಅಭಿವೃದ್ಧಿಯ ಬೆಳವಣಿಗೆಗೆ ಸಹಕಾರ ಕೋರುವುದು.

10. ತರಬೇತಿಯ ಹಂತದಲ್ಲಿಯೇ ಎಲ್ಲಾ ಡಾಕ್ಟರುಗಳಿಗೆ ಹಾಗು ಆರೋಗ್ಯ ಸಿಬ್ಬಂದಿಯವರಿಗೆ ಸ್ತನ್ಯಪಾನದ ಮಹತ್ವದ ಬಗ್ಗೆ ಪಠ್ಯಕ್ರಮದಲ್ಲಿ ಅಳವಡಿಸುವುದು.

# ಮುಚ್ಚಿರುವ ಶಾಲಾ ಕೊಠಡಿಗಳಿಂದ ತೆರೆದ ಆನ್‌ಲೈನ್ ತರಗತಿಗಳು


ದಾವಣಗೆರೆ, ಆ.1- ಕಳೆದ ನಾಲ್ಕು ತಿಂಗಳಿನಿಂದ ಕೋವಿಡ್-19 ಕಾರಣದಿಂದ ಮಕ್ಕಳು ಮನೆಯಲ್ಲೇ ಲಾಕ್‌ಡೌನ್ ಆಗಿದ್ದಾರೆ. ಕೆಲವರ ಮನೆಗಳು ಸೀಲ್‌ಡೌನ್ ಆಗಿವೆ.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಿದ್ಧಗಂಗಾ ವಿದ್ಯಾಸಂಸ್ಥೆ 'ಮುಚ್ಚಿರುವ ಶಾಲಾ ಕೊಠಡಿಗಳ ಮೂಲಕ ಆನ್‌ಲೈನ್ ತರಗತಿ' ಗಳನ್ನು ಮಕ್ಕಳಿಗೆ ತಲುಪಿಸಿ ಅವರ ಶೈಕ್ಷಣಿಕ ಚಟುವಟಿಕೆಗಳು ಕುಂಠಿತವಾಗದಂತೆ ವ್ಯವಸ್ಥೆ ಮಾಡುತ್ತಿದೆ.

ನಗರದ ಸಿದ್ಧಗಂಗಾ ಸ್ಕೂಲ್ ಯೂಟ್ಯೂಬ್ ಚಾನೆಲ್ ಮೂಲಕ ಇಲ್ಲಿಯವರೆಗೆ 1300 ವೀಡಿಯೋಗಳನ್ನು ಮಕ್ಕಳ ವಾಟ್ಸಾಪ್ ಗ್ರೂಪ್‌ಗಳಿಗೆ ಕಳಿಸಿದ್ದಾರೆ. ದ್ವಿತೀಯ ಪಿ.ಯು.ಸಿಯ 417 ಪ್ರಥಮ ಪಿ.ಯು.ಸಿಯ 179, 10ನೇ ತರಗತಿಯ 243, 9ನೇ ತರಗತಿಯ 139, 8ನೇ ತರಗತಿಯ 25 ವಿಡಿಯೋಗಳನ್ನು ಮಕ್ಕಳು ಇಲ್ಲಿಯವರೆಗೆ ವೀಕ್ಷಿಸಿದ್ದಾರೆ. ಸೋಮವಾರದಿಂದ 6 ಮತ್ತು 7ನೇ ತರಗತಿಗಳಿಗೆ ಪಾಠಗಳು ರವಾನೆಯಾಗುತ್ತಿವೆ. ಮುಂದಿನ ದಿನಗಳಲ್ಲಿ ಎಲ್‌ಕೆಜಿಯಿಂದ 5ನೇ ತರಗತಿ ಮಕ್ಕಳಿಗೂ ಇದನ್ನು ವಿಸ್ತರಿಸುವ ಯೋಜನೆ ಇದೆ ಎಂದು ಸಂಸ್ಥೆ ನಿರ್ದೇಶಕ ಡಾ. ಜಯಂತ್ ತಿಳಿಸುತ್ತಾರೆ.

ನಿಗದಿತ ಸಮಯದಲ್ಲಿ ಪ್ರಸಾರವಾಗುವ ಈ ವಿಡಿಯೋಗಳನ್ನು ತಮ್ಮ ಶಾಲೆಯ ಮಕ್ಕಳಲ್ಲದೆ, ಕರ್ನಾಟಕದಾದ್ಯಂತ ಎಲ್ಲ ಮಕ್ಕಳೂ ವೀಕ್ಷಿಸಬಹುದಾಗಿದೆ. ರಾಜ್ಯ ಪಠ್ಯಕ್ರಮದ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಹಾಗೂ ಕೇಂದ್ರ ಪಠ್ಯಕ್ರಮದಲ್ಲಿ ತರಗತಿಗಳು ನಡೆಯುತ್ತಿವೆ. ಮಕ್ಕಳಿಗೆ ಟೆಸ್ಟ್ ಕೊಡುವ, ಗೃಹಪಾಠ ಕೊಡುವ ವ್ಯವಸ್ಥೆಯೂ ಇದೆ ಎಂದು ಸಂಸ್ಥೆ ಕಾರ್ಯದರ್ಶಿ ಹೇಮಂತ್ ಹೇಳುತ್ತಾರೆ.

ಸಾಫ್ಟ್‌ವೇರ್ ಇಂಜಿನಿಯರ್ ಪ್ರಶಾಂತ್ ನೇತೃತ್ವದಲ್ಲಿ ಎಂಟು ಜನರ ತಂಡ 8 ಸ್ಟುಡಿಯೋಗಳಲ್ಲಿ ನಿರಂತರ ಕಾರ್ಯನಿರ್ವಹಿಸುತ್ತಿದ್ದಾರೆ. ಅನುಭವಿ ಪ್ರಾಧ್ಯಾಪಕರು, ಶಿಕ್ಷಕರು ಬೋಧನಾ ಕಾರ್ಯದಲ್ಲಿ




ನಿರತರಾಗಿದ್ದಾರೆ.ಆನ್‌ಲೈನ್ ಪಾಠಗಳು ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯ ಎನ್ನುತ್ತಾರೆ ಸಂಸ್ಥೆಯ ಪ್ರಾಚಾರ್ಯೆ ಗಾಯತ್ರಿ ಚಿಮ್ಮಡ್ ಹಾಗೂ ಮುಖ್ಯಶಿಕ್ಷಕಿ ರೇಖಾರಾಣಿ ಅವರು.

ಶಾಲೆಗಳು ನಡೆಯುವಾಗ ಯಾವ ಮಕ್ಕಳಿಗೆ ನಾವು ಮೊಬೈಲ್ ಮುಟ್ಟಬೇಡಿ, ನೋಡಬೇಡಿ ಎಂದು ತಾಕೀತು ಮಾಡುತ್ತಿದ್ದೆವೋ ಅದೇ ಮಕ್ಕಳಿಗೆ ಈಗ ಸ್ಮಾರ್ಟ್‌ಫೋನ್ ಮೂಲಕ ಪಾಠ ನೋಡಿ ಎಂದು ಹೇಳುವ ಪರಿಸ್ಥಿತಿ ಬಂದಿದೆ ಎನ್ನುತ್ತಾರೆ ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿ'ಸೌಜ. ಮಕ್ಕಳ ಸಂತೋಷ ಕಸಿದಿರುವ ಕೊರೊನಾದಿಂದ ಬೇಗ ಮುಕ್ತಿ ಸಿಗಲಿ. ಶಾಲೆಯ ಬಾಗಿಲು ತೆರೆಯುವಂತಾಗಲಿ, ಅಂಗಳದಲ್ಲಿ ಮಕ್ಕಳ ಕಲರವ ಕೇಳಲಿ ಎಂದು ಅವರು ಆಶಿಸುತ್ತಾರೆ.

ಆನ್‌ಲೈನ್ ತರಗತಿಗಳಿಗೆ ಪೋಷಕರ ಬೆಂಬಲ ಮತ್ತು ಪ್ರೋತ್ಸಾಹವಿದೆ. ಈಗಾಗಲೇ 12 ಸಾವಿರಕ್ಕೂ ಹೆಚ್ಚು ಮಕ್ಕಳು ಸಿದ್ಧಗಂಗಾ ಸ್ಕೂಲ್ ದಾವಣಗೆರೆ ಯೂಟ್ಯೂಬ್ ಚಾನೆಲ್‌ಗೆ ಸಬ್‌ಸ್ಕ್ರೈಬ್ ಆಗಿದ್ದಾರೆ. ಇಲ್ಲಿಯವರೆಗೆ 20 ಲಕ್ಷ ವೀಕ್ಷಣೆಯಾಗಿದೆ ಎಂದು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

ಸಿದ್ಧಗಂಗಾ ಶಾಲೆಯ ಈ ಪ್ರಯತ್ನ ಹಲವಾರು ಶಾಲೆಗಳ ಮಕ್ಕಳ ವೀಕ್ಷಣೆಗೂ ಅನುವು ಮಾಡಿಕೊಟ್ಟಿದೆ. ಕೋವಿಡ್‌ನ ಏಕತಾನತೆಯಿಂದ ಮಕ್ಕಳು ಹೊರಬಂದು ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಶಿಕ್ಷಣ ಇಲಾಖೆಯೂ ಸಹ ಪಠ್ಯಪುಸ್ತಕಗಳ ಸರಬರಾಜು ಮಾಡಿರುವುದರಿಂದ 'ಮಕ್ಕಳ ಇಸ್ಕೂಲ್ ಮನೇಲೇ' ನಡೀತಿದೆ. ಚಂದನ ಟಿ.ವಿಯ ಮೂಲಕವೂ ಶಿಕ್ಷಣ ಇಲಾಖೆ ಉತ್ತಮ ಕಾರ್ಯ ಮಾಡುತ್ತಿದೆ. ಕೆಲವು ಮಕ್ಕಳಿಗೆ ಸ್ಮಾರ್ಟ್ ಫೋನ್ ಇಲ್ಲದೆ ಪಾಠಗಳ ವೀಕ್ಷಣೆ ಸಾಧ್ಯವಾಗುತ್ತಿಲ್ಲವೆಂಬ ಅಸಹಾಯಕತೆಯನ್ನು ಪಾಲಕರು ಹೇಳಿಕೊಳ್ಳುತ್ತಿದ್ದಾರೆ. ಅಂತಹ ಕೆಲವು ಮಕ್ಕಳಿಗೆ ಶಾಲೆಯಿಂದ ಟ್ಯಾಬ್‌ಗಳನ್ನು ಕೊಡುತ್ತಿದ್ದೇವೆ. ಕೆಲ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಸಂಘಟಿಸಿರುವ 'ನರ್ಚರ್' ಸಂಸ್ಥೆಯವರು ತಮ್ಮ ಸಹೋದ್ಯೋಗಿಗಳಿಂದ ಹಳೆಯ ಉಪಯೋಗಿಸದ ಸ್ಮಾರ್ಟ್‌ಫೋನ್‌ಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಡಾ. ಜಯಂತ್ ಅವರು ತಮ್ಮ ಸಹಪಾಠಿಗಳಿಂದಲೂ ಈ ಮನವಿ ಮಾಡುತ್ತಿದ್ದಾರೆ. ಇದು ಫಲಪ್ರದವಾದರೆ ಆನ್‌ಲೈನ್ ಪಾಠಗಳಿಂದ ವಂಚಿತರಾಗುತ್ತಿರುವ ಮಕ್ಕಳಿಗೂ ಅವರ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಿದಂತಾಗುತ್ತದೆ.

# ಎಲ್ಲಾ ಸಂಬಂಧಗಳ ಮೀರಿದ ಬಂಧ ಈ ಸ್ನೇಹಬಂಧ

***ರಕ್ತ ಸಂಬಂಧಗಳ ಮೀರಿದ ಬಂಧವಿದು,***
***ಯಾವ ಬಿಂದುವಿನಲ್ಲೂ ಸಂಧಿಸಿಹುದು***
***ಚಾಚಿ ತೋಳುಗಳನು ಬಿಗಿದಪ್ಪಿಕೊಳ್ಳುವುದು***
***ನಮ್ಮ ಪ್ರತಿ ನೋವನ್ನು ತನ್ನದೆಂದು....***



ಹೌದು, ಮನುಷ್ಯನ ಎಲ್ಲಾ ಸಂಬಂಧಗಳನ್ನು ಮೀರಿದ ಒಂದು ಬಂಧ ಇದೆಯೆಂದರೆ ಅದು ಸ್ನೇಹ ಬಂಧನ...

ನಿಷ್ಕಲ್ಮಶ ಮನಸ್ಸು, ಪವಿತ್ರ ಭಾವನೆ, ಭೇದಭಾವ ಇರದ ಸಂಬಂಧವೇ ಸ್ನೇಹ ಸಂಬಂಧ. ದೊಡ್ಡ ದೊಡ್ಡ ವ್ಯಕ್ತಿಗಳೆಲ್ಲಾ ನಮ್ಮ ಸ್ನೇಹಿತರಾಗಲಿ ಎಂದು ಬಯಸುವುದಕ್ಕಿಂತ, ನಮ್ಮ ಸ್ನೇಹಿತರೆಲ್ಲಾ ದೊಡ್ಡ ದೊಡ್ಡ ವ್ಯಕ್ತಿಗಳಾಗಲಿ ಎಂದು ಬಯಸುವ ಯಾವುದಾದರೂ ಒಂದು ಬಂಧವಿದೆಯೆಂದರೆ ಅದು ಸ್ನೇಹ ಬಂಧನ.

ನೋವಾದಾಗ ಸಮಾಧಾನ ಹೇಳಿ, ಎಡವಿದಾಗ ಮೇಲೆತ್ತಿ, ಸುಖ, ದುಃಖ ಜೀವನದುದ್ದಕ್ಕೂ ಸಾಗುವ ಪವಿತ್ರ ಸಂಬಂಧವೇ ನಿಜವಾದ ಸ್ನೇಹ.

ಒಂದೇ ಮನೆಯಲ್ಲಿ ಹುಟ್ಟದಿದ್ದರೂ ಯಾವುದೇ ಬೇರೆ ಬೇರೆ ಸ್ಥಳಗಳಲ್ಲಿ ಹುಟ್ಟಿ ಎಲ್ಲೋ ಬೆಳೆದು, ನಮ್ಮ ಜೀವನದಲ್ಲಿ ಅಪರಿಚಿತರಾಗಿ ಬಂದು, ಸೇರಿ ಚಿರಪರಿಚಿತರಾಗಿ ಉಳಿದು, ಶಾಶ್ವತವಾಗಿ ನಮ್ಮ ಜೀವನದ ಕೊನೆಯವರೆಗೂ ನಮ್ಮ ಉಸಿರಲ್ಲಿ ಉಸಿರಾಗಿ ಬೆರೆತು, ನಮ್ಮೊಂದಿಗೆ ಉಳಿಯುವ ಸುಂದರ ಸಂಬಂಧವೇ ಸ್ನೇಹ.

***ಪ್ರೀತಿಯಲ್ಲಿ ಸ್ನೇಹ ಇದೆಯೋ***
***ಇಲ್ಲವೋ ಗೊತ್ತಿಲ್ಲ... ಆದರೆ***
***ಉತ್ತಮ ಸ್ನೇಹದಲ್ಲಿ ಮಾತ್ರ ಪ್ರೀತಿ ಇದ್ದೇ ಇರುತ್ತದೆ.***

ಉತ್ತಮ ಸ್ನೇಹ ಅಂದ ತಕ್ಷಣ ನೆನಪಾಗುವ ಹೆಸರು ಕೃಷ್ಣ-ಕುಚೇಲ ಹಾಗೂ ದುರ್ಯೋಧನ-ಕರ್ಣ.

ಬಡವನಾದ ಕುಚೇಲ ಬಾಲ್ಯದ ಗೆಳೆಯ ಕೃಷ್ಣನ ಮನೆಗೆ ಬರಿಗೈಯ್ಯಲ್ಲಿ ಬರದೇ ತಂದ ಹಿಡಿ ಅವಲಕ್ಕಿಯನ್ನು ಪ್ರೀತಿಯಿಂದ ಮೃಷ್ಟಾನ್ನ ಭೋಜನವೆಂಬಂತೆ ತಂದು, ಸಹಾಯ ಯಾಚಿಸಲು ಬಂದ ಕುಚೇಲ ಅವನ ಪ್ರೀತಿಗೆ ಮಾರು ಹೋಗಿ ಸಹಾಯ ಕೇಳದಿದ್ದರೂ, ಗೆಳೆಯನ ಮನಸ್ಸನ್ನು ಅರ್ಥೈಸಿಕೊಂಡು ಕುಚೇಲನಿಗೆ ಸಕಲೈಶ್ವರ್ಯ ದಯಪಾಲಿಸಿದ ಕಥೆಯನ್ನು ಯಾರೂ ಮರೆಯಲಾರರು. ಇಂತಹ ಸ್ನೇಹ ಬಂಧನದಲ್ಲಿ ಬಡತನ, ಸಿರಿತನವಿಲ್ಲ.

## ಸ್ನೇಹಿತರ ದಿನಾಚರಣೆ

ವಿದ್ಯಾವಂತ-ಅವಿದ್ಯಾವಂತ ಎಂಬ ಭೇದ-ಭಾವವಿಲ್ಲ. ಪವಿತ್ರತೆ ಮತ್ತು ಪ್ರೀತಿಯಷ್ಟೇ ಇರುವ ಒಂದು ಗೆಳೆತನ ಇದಾಗಿದೆ. ರಾಷ್ಟ್ರೀಯ ಶೈಕ್ಷಣಿಕ ಮತ್ತು ಸಂಶೋಧನೆ ಮತ್ತು ತರಬೇತಿ ಮಂಡಳಿಯವರು ಸೂಚಿಸಿರುವ ಮೌಲ್ಯಗಳಲ್ಲಿ ಸ್ನೇಹ ಒಂದು ಅತ್ಯಮೂಲ್ಯ ಮೌಲ್ಯ.

***ಸ್ನೇಹ ಅನ್ನೋದು ಕನಸೂ ಅಲ್ಲ***
***ನೆನಪೂ ಅಲ್ಲ.***
***ನಮ್ಮ ಜೊತೆ ಸದಾ ಇರೋ ಇನ್ನೊಂದು ಮನಸ್ಸು...***

ಮಹಾಭಾರತದಲ್ಲಿ ಒಮ್ಮೆ ದುರ್ಯೋಧನನ ಪತ್ನಿ ಭಾನುಮತಿ ಮತ್ತು ಕರ್ಣ ಪಗಡೆ ಆಡುವಾಗ, ತಮಾಷೆಗೆ ಕರ್ಣನ ಕೈ ಭಾನುಮತಿಯ ಕೊರಳಿಗೆ ಬಡಿದು ಆಕೆ ಧರಿಸಿದ್ದ ಮುತ್ತಿನ ಸರ ಹರಿದು ಮುತ್ತುಗಳು ನೆಲದ ಮೇಲೆ ಚೆಲ್ಲಾಪಿಲ್ಲಿ ಆದವಂತೆ. ಅದೇ ಸಮಯದಲ್ಲಿ ಆಗಮಿಸಿದ ದುರ್ಯೋಧನ ಈ ದೃಶ್ಯ ನೋಡಿ, ಮುತ್ತುಗಳನ್ನು ಆರಿಸಲು ನಾನು ಸಹಾಯ ಮಾಡಲೇ? ಎಂದು ಸ್ನೇಹಿತನನ್ನು ಕೇಳಿದನಂತೆ. ಇದನ್ನು ನಾವು ಕಲ್ಮಶ ಇಲ್ಲದ ಸ್ನೇಹ ಎನ್ನಬಹುದು. ಅದಕ್ಕೇ ಹೇಳುತ್ತಾರೇನೋ ಜೀವನದಲ್ಲಿ ಪ್ರತಿಯೊಬ್ಬರೂ ಕರ್ಣ ಮತ್ತು ಕೃಷ್ಣನಂತೆ ಇಬ್ಬರು ಸ್ನೇಹಿತರು ಇರಬೇಕು ಅಂತ.

ಯಾಕೆ ಗೊತ್ತಾ ಕೃಷ್ಣನಂತಹ ಗೆಳೆಯ ಯಾವತ್ತೂ ಯುದ್ಧ ಮಾಡಲ್ಲ. ಆದರೆ ನಮ್ಮನ್ನು ಯಾವತ್ತು ಗೆಲ್ಲುತ್ತಾನೆ. ಇನ್ನು ಕರ್ಣನಂತಹ ಗೆಳೆಯ ನಮ್ಮದು ತಪ್ಪಿದ್ದರೂ ನಮ್ಮ ಪರವಾಗಿ ನಿಂತು ಯುದ್ಧ ಮಾಡ್ತಾನೆ.

ಅದಕ್ಕೆ ಸ್ನೇಹ ಯಾವಾಗಲೂ ಪೆನ್ಸಿಲ್ ಮತ್ತು ರಬ್ಬರ್ ತರಹ ಇರಬೇಕು. ಯಾಕೆ ಅಂದರೆ ಪೆನ್ಸಿಲ್ ನಿಂದ ಆದ ತಪ್ಪನ್ನು ರಬ್ಬರ್ ಹೇಗೆ ಅಳಿಸುವುದೋ ಹಾಗೆಯೇ ನಮ್ಮಿಂದ ಏನಾದರೂ ತಪ್ಪಾದಾಗ ಅದನ್ನು ತಿದ್ದಿ ಬುದ್ದಿ ಹೇಳುವವ ನಿಜವಾದ ಸ್ನೇಹಿತ. ಎಲ್ಲಾ ಸಂಬಂಧಗಳಿಗಿಂತ ಹೆಚ್ಚು.

ಆದ್ದರಿಂದ ಸ್ನೇಹಿತನೇ ಎಲ್ಲದಕ್ಕೂ ಬುನಾದಿ.

ಸ್ನೇಹದಿಂದ ಪ್ರೀತಿ, ಪ್ರೇಮ, ಅಭಿವೃದ್ಧಿ, ತೃಪ್ತಿ, ನೆಮ್ಮದಿ, ಶಾಂತಿ, ಭಾಗ್ಯ, ಕುಟುಂಬ, ಸಮಾಜ, ಗೌರವ, ಸುಖ, ಸಮೃದ್ಧಿ, ಸಂಪತ್ತು ಎಲ್ಲವೂ ಲಭಿಸುತ್ತದೆ.

ಇನ್ನು ಸಂಬಂಧಗಳಲ್ಲಿ ಗಂಡ-ಹೆಂಡತಿ, ಸಹೋದರ-ಸಹೋದರಿಯರು, ಮಕ್ಕಳು, ಸಂಬಂಧಿಕರು ಸ್ನೇಹಭಾವದಿಂದ ಇದ್ದರೆ ನೆಮ್ಮದಿಯನ್ನು ಹುಡುಕುವ ಅವಶ್ಯಕತೆಯೇ ಇಲ್ಲ.

ಒಂದು ಉತ್ತಮ ಪುಸ್ತಕ ನೂರು ಅತ್ಯುತ್ತಮ ಸ್ನೇಹಿತರಿಗೆ ಸಮ. ಆದರೆ ಒಬ್ಬ ಅತ್ಯುತ್ತಮ ಸ್ನೇಹಿತ ಒಂದು ಗ್ರಂಥಾಲಯಕ್ಕೆ ಸಮ.

**-ಡಾ. ಅನಿತಾ ಹೆಚ್. ದೊಡ್ಡಗೌಡರ್,**
ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ.
ಮೊ. 99021 98655

## ಕ್ಷಮಯಾಧರಿತ್ರಿ

'ಕ್ಷಮಯಾ ಧರಿತ್ರಿ' ಎಂಬುವರು,
'ಕ್ಷಮೆಯಲಿ ಭೂಮಿಯಂತಿರಬೇಕಂತೆ.
ಕ್ಷಮೆಗೂ ಮಿತಿಯಿರಬೇಕಲ್ಲವೆ,
ಕ್ಷಮಿಸಿ ಎಲ್ಲ ದುಷ್ಟರನೂ,
ಸಹಿಸಿ ಕ್ಷಮತೆಯಿಂದ ದುರಾಚಾರಗಳನು, ಧರಣಿ
ತಾನಲುಗಿಹಳು. !!

ಕ್ಷೀಣಗೊಳಿಸಿಹರು ಮನುಜರು
ಆಕೆಯ ತೇಜಸ್ಸನು.
ಕ್ಷತ್ರಿಯನೆನಿಸಿ,ಕ್ಷೇತ್ರವ ಆಕ್ರಮಿಸಿ, ಹೆಣ್ಣು, ಹೊನ್ನನೆಲ್ಲ
ಕಬಳಿಸಿ,ಕ್ಷೇತ್ರ ಪಾಲಕನೆನಿಸಿ,
ಕ್ಷಾತ್ರ ತೇಜಸ್ಸಿನಲಿ ವಿಜೃಂಬಿಸಿ,
ಬೀಗಿ, ವಸುಂಧರೆಯ ಶೋಷಿಸಿದರು ಕೆಲವರು.!!

ಧರಣಿಯ ಅಗೆದು ಬಗಿದು,
ತುಳಿದು, ಮಲಿನ ಗೊಳಿಸಿ,
ಅವಳ ಮೈಯ ಕೊರೆದು, ಒಡಲ ರತ್ನವದೋಚಿ,
ಅತ್ಯಾಚಾರವೆಸಗಿ ಕ್ಷೋಭೆಗೊಳಿಸುತಿಹರು ಹಲವರು.!!

ಧರಿತ್ರಿ ಕ್ಷಮಿಸಲಾರಳು ಇನ್ನು,
ಉಗುಳುವಳು ಬೆಂಕಿಯನು,
ತಿರುತಿರುಗಿ ಕಂಪಿಸುತ,
ವ್ಯಾಧಿಗಳ ಸೃಷ್ಟಿಸುತ, ಕ್ಷಾಮದ
ಬೇಗೆಯಲಿ ಸುಡಲು ಕಾದಿಹಳು.!!

ಕ್ಷಮಿಸಲು ಯೋಗ್ಯರೇ ಇವರು
ಎಂದು ಧಾರಿಣಿ ಕೇಳುತಿಹಳು.
ದುರಾಸೆಯ ಬಿಟ್ಟು,ಭೂಮಿಯ
ರಕ್ಷಣೆಯ ಪಣತೊಟ್ಟು,
ಸನ್ನಡತೆ ಮೆರೆದಾಗ
ಕ್ಷಮಿಸುವಳೇನೋ ಧರಿತ್ರಿ ಇವಳು.!!

**ಅಪರ್ಣಾ ದೇವಿ,** ದಾವಣಗೆರೆ.

## ಪೂಜೆ ವೇಳೆ ರಾಮ ಮಂತ್ರಕ್ಕೆ ಕರೆ

**(1ನೇ ಪುಟದಿಂದ)** 69ನೇ ಸ್ವಾಮೀಜಿಗಳಾದ ಶ್ರೀ ಜಯೇಂದ್ರಸರಸ್ವತಿ ಅವರ ಜಯಂತಿಯೂ ಇದೇ ದಿನದಂದು ಬರುತ್ತದೆ. ಶ್ರೀಗಳು ರಾಮ ಜನ್ಮಭೂಮಿ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

# ನಗರದಲ್ಲಿ ಬಕ್ರೀದ್ ಆಚರಣೆ

**(1ನೇ ಪುಟದಿಂದ)** ಬಡವರಿಗೆ, ಸಂಬಂಧಿಕರಿಗೆ, ತಮ್ಮ ಮನೆಗೆ ಒಂದು ಪಾಲು ಪಡೆಯುವ ಮೂಲಕ ಬಕ್ರೀದ್ ಆಚರಿಸಿದ ಮುಸ್ಲಿಂ ಬಾಂಧವರು ಈ ಬಾರಿ ಹಜ್ ಯಾತ್ರೆ ರದ್ದುಗೊಂಡಿರುವ ಪ್ರಯುಕ್ತ ಅದಕ್ಕೆ ತೆಗೆದಿಟ್ಟ ಹಣದಲ್ಲಿ ಬಲಿದಾನ ನೀಡಿ ಸರ್ವರೂ ಸಹ ಹಬ್ಬದಲ್ಲಿ ಸಮಪಾಲು-ಸಮಬಾಳು ಎಂಬ ಧ್ಯೇಯದೊಂದಿಗೆ ನಗರಾದ್ಯಂತ ಮುಸ್ಲಿಂ ಬಾಂದವರು ಪ್ರಸಾದ (ಮಾಂಸ) ಹಂಚಿಕೆ ಮಾಡಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬೆಳಿಗ್ಗೆ 8 ಗಂಟೆಯಿಂದಲೇ ಎರಡು, ಮೂರು ತಂಡಗಳನ್ನು (ಜಮಾತ್) ಮಾಡುವ ಮೂಲಕ ಸಾಮಾಜಿಕ ಅಂತರ ಕಾಪಾಡಿಕೊಂಡು, ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಗರದ ಹಳೇ ಭಾಗದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಪೊಲೀಸ್ ವಾಹನಗಳು ಗಸ್ತು ತಿರುಗುತ್ತಿದ್ದ ಕೆಲವು ಭಾಗಗಳಲ್ಲಿ ಭಯದ ವಾತಾವರಣ ನಿರ್ಮಾಣಗೊಂಡಿದ್ದರೂ ಸಹ ಸಂಜೆಯಾಗುತ್ತಿದ್ದಂತೆ ಸಾಮಾನ್ಯವಾಗಿತ್ತು. ನಗರದ ಪಿ.ಬಿ.ಬಸ್ತೆಯಲ್ಲಿರುವ ಈದ್ಗಾ ಗೇಟಿಗೆ ಬೀಗ ಹಾಕಲಾಗಿತ್ತು. ಹೀಗಾಗಿ ಅಲ್ಲಿ ತೆರಳು ಯಾರಿಗೂ ಅವಕಾಶವಿರಲಿಲ್ಲ.

ವಿಶ್ವಾದ್ಯಂತ ಹರಡಿರುವ ಕೊರೊನಾ ಸೋಂಕು ತೊಲಗಲಿ, ದೇಶ ಹಾಗೂ ರಾಜ್ಯ ಸೇರಿದಂತೆ ಜಿಲ್ಲೆ ಅಭಿವೃದ್ಧಿ ಪಥದತ್ತ ಸಾಗಲಿ ಎಂದು ವಿಶೇಷವಾಗಿ 'ದುವಾ' ಮಾಡಿದ ಮೌಲಾನಾ ಸಮಸ್ಯೆಗೆ ನಾವು ಹೆದರಬಾರದು.ಸಮಸ್ಯೆಯನ್ನು ನಾವು ಹೆದರಿಸಬೇಕು ಎಂದು ಸಲಹೆ ನೀಡಿ, ತಮ್ಮಗಳ ಆರೋಗ್ಯ, ದೇಶ ಪ್ರಗತಿಗೆ 'ಅಲ್ಲಾ'ನು ಸುಖ, ಶಾಂತಿ, ಸಮೃದ್ಧಿ ನೀಡಲಿ ಎಂದು ಆಶಿಸಿ, ಹಬ್ಬದ ಶುಭ ಕೋರಿದರು.

ಕೊರೊನಾ ಕರಿನೆರಳಿನಲ್ಲಿ ಜೀವನ ಸಾಗುತ್ತಿರುವ ಇಂತಹ ಸಂದರ್ಭದಲ್ಲಿ ಸಂಭ್ರಮ ಸಮಂಜಸವಲ್ಲ ಎಂಬ ರಂಜಾನ್ ಹಬ್ಬದ ತೀರ್ಮಾನ ಬಕ್ರೀದ್ ಹಬ್ಬಕ್ಕೂ ಸೀಮಿತವಾಗಿದ್ದು, ಈ ಹಬ್ಬದಲ್ಲಿಯೂ ಸಹ ಮಕ್ಕಳು ಹೊಸಬಟ್ಟೆ ಹಾಕಿಕೊಳ್ಳದೇ ಸಂದರ್ಭಕ್ಕೆ ಅನುಗುಣವಾಗಿ ತಮ್ಮ ಪೋಷಕರೊಂದಿಗೆ ಶ್ರದ್ಧಾ-ಭಕ್ತಿಯಿಂದ ಹಬ್ಬದಲ್ಲಿ ಪಾಲ್ಗೊಂಡಿದ್ದ ದೃಶ್ಯ ನಗರದ ವಿವಿಧ ಭಾಗಗಳಲ್ಲಿ ಕಂಡು ಬಂದಿತ್ತು.

ಕಳೆದ ವರ್ಷಕ್ಕಿಂತ ಈ ವರ್ಷ ಖುರ್ಬಾನಿ (ಬಲಿದಾನ) ಕೊಂಚ ಮಂದಗತಿಯಲ್ಲೇ ನೀಡಿದರೂ ಸಹ ಈ ಬಾರಿ ಬೇರೆ ಬೇರೆ ರಾಜ್ಯಗಳಿಂದ ತಂದಿದ್ದ ಪ್ರಾಣಿಗಳ ಬೆಲೆ ಲಕ್ಷ ರೂ.ಗಿಂತ ಜಾಸ್ತಿಯಾಗಿತ್ತು. ಆದರು ಸಹ ಮುಸ್ಲಿಂ ಬಾಂಧವರು ಬಡ ಪ್ರದೇಶದಲ್ಲಿ ವಾಸಿಸುವ ನಿರ್ಗತಿಕರನ್ನು ಗುರುತಿಸಿ, ಅವರಿಗೆ ಸೇರಬೇಕಾದ ಪಾಲು ನೀಡುವ ಮೂಲಕ ತ್ಯಾಗದ ಸಂಕೇತ ಬಕ್ರೀದನ್ನು ಸರಳ ರೀತಿಯಲ್ಲಿ ಆಚರಿಸಿ, ಬಡವರ ಸಂತೋಷದಲ್ಲಿ ಸಂಭ್ರಮಿಸಿದ ಕೆಲವು ಘಟನೆಗಳು ನಗರದ ವಿವಿಧ ಪ್ರದೇಶಗಳಲ್ಲಿ ಕೇಳಿ ಬಂದವು. ಬೆಳಿಗ್ಗೆ ಸಿಹಿಯೂಟ ಸೇವಿಸಿ, ಪ್ರಾರ್ಥನೆ ಹೋಗಿ, ರಾತ್ರಿ ಎಲ್ಲರ ಮನೆಯಲ್ಲಿ ಬಾಡೂಟ ಬಿರಿಯಾನಿ ಸೇವಿಸಿದರು.

## ಕರ್ಫ್ಯೂ ಅಂತ್ಯ, ಭಾನುವಾರ ಲಾಕ್ ಇಲ್ಲ

**(1ನೇ ಪುಟದಿಂದ)** ರಾತ್ರಿ 8ರಿಂದ ಬೆಳಿಗ್ಗೆ 5ರವರೆಗೆ ಹೇರಲಾಗುತ್ತಿದ್ದ ರಾತ್ರಿ ಕರ್ಫ್ಯೂ ಶನಿವಾರ ರಾತ್ರಿಯಿಂದಲೇ ಜಾರಿಗೆ ಬರುವಂತೆ ರದ್ದಾಗಿದೆ. ಇದೇ ರೀತಿ ಭಾನುವಾರದ ಲಾಕ್‌ಡೌನ್ ಸಹ ಇರುವುದಿಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದ್ದಾರೆ.

## ಮೊಬೈಲ್ ಉತ್ಪಾದನೆ

**(1ನೇ ಪುಟದಿಂದ)** ಹೇಳಿದ್ದಾರೆ.

ಸ್ಯಾಮ್‌ಸಂಗ್, ಫಾಕ್ಸ್‌ಕಾನ್, ರೈಸಿಂಗ್ ಸ್ಟಾರ್, ವಿಸ್ಟ್ರಾನ್ ಹಾಗೂ ಪೆಗಟ್ರಾನ್ ಕಂಪನಿಗಳು ಅರ್ಜಿ ಸಲ್ಲಿಸಿವೆ. ಫಾಕ್ಸ್‌ಕಾನ್, ವಿಸ್ಟ್ರಾನ್ ಹಾಗೂ ಪೆಗಟ್ರಾನ್ ಕಂಪನಿಗಳು ಆಪಲ್‌ನ ಐಫೋನ್ ಮೊಬೈಲ್‌ಗಳನ್ನು ಉತ್ಪಾದಿಸುತ್ತವೆ. ಭಾರತೀಯ ಕಂಪನಿಗಳಿಗೆ ಪಿಎಲ್‌ಐ ಯೋಜನೆಯಡಿ ಯಾವುದೇ ಬೆಲೆ ಮಿತಿ ಇಲ್ಲ.

ಜಾಗತಿಕ ಮೊಬೈಲ್ ಉತ್ಪಾದನೆಯಲ್ಲಿ ಆಪಲ್ ಆದಾಯದ ಪಾಲು ಶೇ.37 ಹಾಗೂ ಸ್ಯಾಮ್‌ಸಂಗ್ ಪಾಲು ಶೇ.22ರಷ್ಟಿದೆ. ಪಿಎಲ್‌ಐ ಯೋಜನೆಯಿಂದಾಗಿ ಅವುಗಳು ಭಾರತದಲ್ಲಿ ಉತ್ಪಾದಿಸುವ ಪ್ರಮಾಣ ಗಣನೀಯವಾಗಿ ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಕಂಪನಿಗಳು ಭಾರತದಲ್ಲಿ ಸಾವಿರಾರು ಕೋಟಿ ರೂ.ಗಳ ಹೂಡಿಕೆ ಮಾಡುವ ನಿರೀಕ್ಷೆ ಇದೆ ಎಂದಿರುವ ಸಚಿವ ಪ್ರಸಾದ್, ಭಾರತೀಯ ಕಂಪನಿಗಳಾದ ಲಾವಾ, ಡಿಕ್ಸಾನ್ ಟೆಕ್ನಾಲಜೀಸ್, ಪ್ಯಾಡ್ಜೆಟ್ ಎಲೆಕ್ಟ್ರಾನಿಕ್ಸ್, ಭಗವತಿ (ಮೈಕ್ರೋಮ್ಯಾಕ್ಸ್), ಸೋಜೋ ಮ್ಯಾನ್ಯುಫ್ಯಾಕ್ಚರಿಂಗ್ ಸರ್ವೀಸ್ ಹಾಗೂ ಆಪ್ಟಿಮಸ್ ಹಾಗೂ ಹತ್ತು ಕಂಪನಿಗಳು ನಿರ್ದಿಷ್ಟ ಎಲೆಕ್ಟ್ರಾನಿಕ್ ಉಪಕರಣ ವಲಯದಡಿ ಅರ್ಜಿಗಳನ್ನು ಸಲ್ಲಿಸಿವೆ ಎಂದು ಹೇಳಿದ್ದಾರೆ.

ಉಪಕರಣಗಳ ವಲಯದಲ್ಲಿ ಉತ್ಪಾದನೆಗಾಗಿ ಎಟಿಅಂಡ್‌ಎಸ್, ಅಸೆಂಟ್ ಸರ್ಕಿಟ್ಸ್, ವಿಸಿಕಾನ್, ವಾಲ್ಸಿನ್, ಸಹಸ್ರ, ವೆಟಿಸ್ಕೋ ಹಾಗೂ ನಿಯೋಲಿಂಕ್ ಕಂಪನಿಗಳು ಅರ್ಜಿ ಸಲ್ಲಿಸಿವೆ. ಈ ಯೋಜನೆಗೆ ಚೀನಾದ ಯಾವುದೇ ಕಂಪನಿಗಳು ಅರ್ಜಿ ಸಲ್ಲಿಸಿಲ್ಲ.

ಯಾವ ದೇಶದ ಕಂಪನಿಯಿಂದ ಹೂಡಿಕೆ ಬಂದರೂ ಭಾರತ ಹಿಂಜರಿಯುವುದಿಲ್ಲ. ಆದರೆ, ಕಂಪನಿಗಳು ರಕ್ಷಣೆ ಕುರಿತ ನಿಯಮಗಳಿಗೆ ಅನುಗುಣವಾಗಿರಬೇಕು ಎಂದು ಸಚಿವ ಪ್ರಸಾದ್ ಸ್ಪಷ್ಟಪಡಿಸಿದ್ದಾರೆ.

## ಆಯೋಗ ದೂರು ದಾಖಲು

**(1ನೇ ಪುಟದಿಂದ)** ಪ್ರಯತ್ನದ ಕೊರತೆ, ಸರ್ಕಾರದಲ್ಲಿ ಇಲ್ಲದಿರುವ ಸಮನ್ವಯತೆಗಳಿಂದಾಗಿ ಅದರ ಜೊತೆ ಜೊತೆಗೆ ಎಲ್ಲಿ ನೋಡಿದಲ್ಲಿ ಭ್ರಷ್ಟಾಚಾರದ ವಾಸನೆಗಳಿಂದಾಗಿ ಜನರಿಗೆ ಆಸ್ಪತ್ರೆಯಲ್ಲಾಗಲೀ, ಕೋವಿಡ್ ಕೇಂದ್ರಗಳಲ್ಲಾಗಲೀ ಅಥವಾ ಆಂಬ್ಯುಲೆನ್ಸ್ ಸೇವೆಯಲ್ಲಾಗಲೀ ಸಮರ್ಪಕ ಸೇವೆ ಇಲ್ಲದಾಗಿದೆ ಎಂದವರು ದೂರಿದ್ದಾರೆ.

ಬಳ್ಳಾರಿ, ರಾಯಚೂರು, ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ಜಿಲ್ಲೆಗಳಲ್ಲಿ ಬಳ್ಳಾರಿ ಇರಲಿ ಬೆಂಗಳೂರಲ್ಲಾಗಲೀ ಭಾವನೆಗಳಿಗೆ ಘಾಸಿಯಾಗುವ ರೀತಿಯಲ್ಲಿ ಶವಗಳ ಅಂತ್ಯಸಂಸ್ಕಾರ ಮಾಡಿದ್ದಾರೆ ಎಂಬ ಚಿತ್ರ ಹಾಗೂ ವರದಿಗಳು ಹೃದಯ ವಿದ್ರಾವಕ ಘಟನೆಗಳಾಗಿವೆ'' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಆಯೋಗವು ಆಹ್ವಾನಿಸಿದರೆ, ಚರ್ಚೆ ಬಯಸಿದರೆ ಇನ್ನೂ ಹೆಚ್ಚಿನ ವಿವರ ಲಭ್ಯಗೊಳಿಸುವೆ. ಜನ ಕಲ್ಯಾಣ ಎಲ್ಲ ಸಂಸ್ಥೆಗಳ ಉದ್ದೇಶ, ಗಾಬರಿಗೊಳಿಸುವ ಇಂಥ ಸಂಕಷ್ಟದ ಸಂದರ್ಭದಲ್ಲಿ ತಕ್ಷಣದಿಂದ ಆಯೋಗ ತನ್ನ ಉಳಿದೆಲ್ಲ ಕೆಲಸ ಬದಿಗೊತ್ತಿ ಕೊರೊನಾ ಸಂದರ್ಭದಲ್ಲಿ ವಿಶಿಷ್ಟ ಕರ್ತವ್ಯ ನಿರ್ವಹಣೆಗೆ ಮುಂದಾಗಲಿ ಎಂದು ಕೋರಿದ್ದಾರೆ.

ಜುಲೈ 27 ರಂದು ಸಭೆ ಸೇರಿದ ಮಾನವ ಹಕ್ಕುಗಳ ಆಯೋಗದ ಪೂರ್ಣಪೀಠ ಈ ಕುರಿತು ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಪ್ರಾರಂಭಿಸಿದೆ.

# ಕೊರೊನಾ : ಜಿಲ್ಲೆಯಲ್ಲಿ 188 ಗುಣಮುಖ

**(1ನೇ ಪುಟದಿಂದ)** ಬಡಾವಣೆಯ 16ರ ಬಾಲಕ, ಆಜಾದ್ ನಗರದ 75ರ ವೃದ್ಧ, ವಿನೋಬನಗರದ 48ರ ಮಹಿಳೆ, ಆಂಜನೇಯ ಬಡಾವಣೆಯ 26ರ ಮಹಿಳೆಯಲ್ಲಿ ಸೋಂಕು ಕಾಣಿಸಿಕೊಂಡಿದೆ.

ಎಸ್.ಎಸ್. ಬಡಾವಣೆಯ 47ಹಾಗೂ 48ರ ಪುರುಷರು ಹಾಗೂ 48, 42ರ ಮಹಿಳೆಯರು, ಜಯನಗರದ 48ರ ಪುರುಷ, ಆವರಗೆರೆಯ 72ರ ವೃದ್ಧ, ವಿನೋಬನಗರದ 55ರ ಮಹಿಳೆ, ಭಗತ್ ಸಿಂಗ್ ನಗರದ 29ರ ಮಹಿಳೆ, ಚಿಕ್ಕಮ್ಮಣ್ಣಿ ಲೇಔಟ್‌ನ 25ರ ಮಹಿಳೆ, ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 23ರ ಪುರುಷ, ಸರಸ್ವತಿ ನಗರದ 52ರ ಪುರುಷರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಸರಸ್ವತಿ ನಗರದ 23ರ ಪುರುಷ, ಭಗತ್ ಸಿಂಗ್ ನಗರದ 64ರ ಪುರುಷ, ನಿಟುವಳ್ಳಿ ಹೊಸ ಬಡಾವಣೆಯ 52ರ ಪುರುಷ, ಗಣೇಶ್ ಲೇಔಟ್‌ನ 49ರ ಮಹಿಳೆ, ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 48ರ ಪುರುಷ, ಇ.ಎಸ್.ಐ. ಆಸ್ಪತ್ರೆಯ ಬಳಿಯ 19ರ ಯುವಕ, ಡಿ.ಎ.ಆರ್. ಕ್ವಾರ್ಟರ್ಸ್‌ನ 9ರ ಬಾಲಕಿ, ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 20ರ ಪುರುಷ, ವಿವೇಕಾನಂದ ಬಡಾವಣೆಯ 40ರ ಮಹಿಳೆ, ಡಿ.ಎ.ಆರ್. ಕ್ವಾರ್ಟರ್ಸ್‌ನ 30ರ ಪುರುಷ, 12ರ ಬಾಲಕಿ, ಎಸ್.ಎಸ್. ಬಡಾವಣೆಯ 40, 49ರ ಪುರುಷರು, ಡಿ.ಎಸ್.ಆರ್. ಕ್ವಾರ್ಟರ್ಸ್‌ನ 30ರ ಮಹಿಳೆ, ಸಾಂಸ್ಥಿಕ ಕ್ವಾರಂಟೈನ್‌ನ 23ರ ಮಹಿಳೆ ಹಾಗೂ 32ರ ಪುರುಷರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಎಸ್.ಓ.ಜಿ. ಕಾಲೋನಿಯ 33ರ ಪುರುಷ, ವಿದ್ಯಾನಗರದ 60ರ ಪುರುಷ, ಎ.ಕೆ. ಕಾಲೋನಿಯ 55ರ ಮಹಿಳೆ, ಜ್ಞಾನಶಂಕರದ 37ರ ಪುರುಷನಲ್ಲಿ ಸೋಂಕಿರುವುದು ಕಂಡು ಬಂದಿದೆ.

ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 34, 65 ಹಾಗೂ 35ರ ಮಹಿಳೆಯರು, 27, 34 ಹಾಗೂ 43ರ ಪುರುಷರು, ಡಿ.ಎ.ಆರ್. ಪೊಲೀಸ್ ಕ್ವಾರ್ಟರ್ಸ್‌ನ 44ರ ಪುರುಷ, ಡಿ.ಸಿ.ಎಂ. ಲೇಔಟ್‌ನ 34ರ ಪುರುಷನಲ್ಲಿ ಸೋಂಕು ಕಂಡು ಬಂದಿದೆ.

ಖಾಸಗಿ ಆಸ್ಪತ್ರೆಯ ಸಿಬ್ಬಂದಿ, ಜಿಲ್ಲಾ ಆಸ್ಪತ್ರೆಯ 24, 31, 35 ಹಾಗೂ 29ರ ಸ್ಟಾಫ್ ನರ್ಸ್‌ಗಳು, ಜಿಲ್ಲಾ ಆಸ್ಪತ್ರೆಯ 22ರ ತಾಂತ್ರಿಕ ಸಿಬ್ಬಂದಿ ಹಾಗೂ ಸರ್ಕಾರಿ ಆಸ್ಪತ್ರೆಯ 35ರ ಅಟೆಂಡರ್‌ಗಳಲ್ಲಿ ಸೋಂಕು ಪತ್ತೆಯಾಗಿದೆ.

ದಾವಣಗೆರೆ ತಾಲ್ಲೂಕು ನವಿಲೇಹಾಳ್‌ನ 43ರ ಪುರುಷ, ಬೇತೂರಿನ 70ರ ವೃದ್ಧ, ಕಕ್ಕರಗೊಳ್ಳದ 65ರ ಪುರುಷ, ಕುಂದೂರಿನ 65ರ ಪುರುಷ, ಬಾತಿಯ 40ರ ಪುರುಷ, ಆನಗೋಡಿನ 25ರ ಪುರುಷ ಹಾಗೂ 11ರ ಬಾಲಕ, ತುರ್ಚಘಟ್ಟದ ಐದು ವರ್ಷದ ಬಾಲಕನಲ್ಲಿ ಸೋಂಕು ಕಂಡು ಬಂದಿದೆ.

ಜಗಳೂರಿನ 80ರ ವೃದ್ಧೆ, 60 ಹಾಗೂ 21ರ ಪುರುಷರು, ರಾಮಾಲಯ ರಸ್ತೆಯ 21, 45 ಹಾಗೂ 50ರ ಪುರುಷರು, 40ರ ಮಹಿಳೆಯರಲ್ಲಿ ಸೋಂಕು ಪತ್ತೆಯಾಗಿದೆ.

ಹೊನ್ನಾಳಿಯ 74 ಹಾಗೂ 79ರ ವೃದ್ಧರು ಹಾಗೂ ಹೊನ್ನಾಳಿ ತಾಲ್ಲೂಕಿನ ಕುಂಬಾರಗುಂಡಿಯ 29ರ ಪುರುಷ, ಹೊಡೇನಹಳ್ಳಿಯ 22ರ ಪುರುಷ, 30ರ ಮಹಿಳೆ, ದುರ್ಗಿಗುಡಿಯ 70ರ ವೃದ್ಧೆಯರಲ್ಲಿ ಸೋಂಕು ಕಂಡು ಬಂದಿದೆ.

ಹರಿಹರ ವಿದ್ಯಾನಗರದ 38ರ ಪುರುಷ, 56ರ ಪುರುಷ, ಕಾಳಿದಾಸ ನಗರದ 25ರ ಪುರುಷ, 33ರ ಪುರುಷ, ಜೆ.ಸಿ. ಬಡಾವಣೆಯ 38ರ ಮಹಿಳೆ, ಆದಿಶಕ್ತಿನಗರದ 74ರ ವೃದ್ಧ, 19ರ ಯುವಕ, 30ರ ಪುರುಷರಲ್ಲಿ ಸೋಂಕು ಪತ್ತೆಯಾಗಿದೆ

ಹರಿಹರ ತಾಲ್ಲೂಕು ಹಾಲಿವಾಣದ 50ರ ಮಹಿಳೆ,ಹಳ್ಳದಕೆರೆಯ 75ರ ವೃದ್ಧ, ಕುಂಬಳೂರಿನ 58ರ ಮಹಿಳೆಯರಲ್ಲಿ ಸೋಂಕಿರುವುದು ಕಂಡು ಬಂದಿದೆ.

ಚನ್ನಗಿರಿಯ 24ರ ಮಹಿಳೆ ಹಾಗೂ ಚನ್ನಗಿರಿ ತಾಲ್ಲೂಕು ಕಬ್ಬಳದ 31ರ ಮಹಿಳೆ, ಕಂಚಿನಾಳದ 29ರ ಪುರುಷ, ಸಂತೇಬೆನ್ನೂರಿನ 36 ಹಾಗೂ 39ರ ಮಹಿಳೆಯರಲ್ಲಿ ಸೋಂಕು ಕಂಡು ಬಂದಿದೆ

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯ 76ರ ವೃದ್ಧ, ಹಾವೇರಿಯ ಕುರುಬರಕೇರಿಯ 56ರ ಪುರುಷರಲ್ಲಿ ಸೋಂಕು ಕಂಡು ಬಂದಿದೆ.

**ಬಿಡುಗಡೆಯಾದವರ ವಿವರ :** ದಾವಣಗೆರೆಯ ಕುಂಬಾರಕೇರಿಯ 58ರ ಪುರುಷ, 50ರ ಮಹಿಳೆ, ಎಂಸಿಸಿ ಎ ಬ್ಲಾಕ್‌ನ 45ರ ಪುರುಷ, ಕೆ.ಟಿ.ಜೆ. ನಗರದ 35ರ ಮಹಿಳೆ, ಆಜಾದ್ ನಗರದ 72ರ ವೃದ್ಧ, ಕುವೆಂಪು ನಗರದ 40ರ ಪುರುಷ, ಕುವೆಂಪು ನಗರದ 40ರ ಪುರುಷ, ಸೈಯದ್ ಪೀರ್ ಬಡಾವಣೆಯ 42ರ ಪುರುಷ, ಬಡಾವಣೆ ಪೊಲೀಸ್ ಠಾಣೆಯ 46ರ ಪುರುಷ, ಪಿ.ಜೆ ಬಡಾವಣೆಯ 58ರ ಪುರುಷ, ಎಲ್.ಐ.ಸಿ. ಕಾಲೋನಿಯ 29ರ ಮಹಿಳೆ, ನಿಜಲಿಂಗಪ್ಪ ಬಡಾವಣೆಯ 45ರ ಪುರುಷ, ಎಂ.ಸಿಸಿ ಎ ಬ್ಲಾಕ್‌ನ 45ರ ಪುರುಷ, ನಾಯ್ಡು ಹೋಟೆಲ್ ಬಳಿಯ 55ರ ಪುರುಷ, ಜೆ.ಪಿ. ನಗರದ 21ರ ಮಹಿಳೆ, ಇಮಾಮ್ ನಗರದ 49ರ ಮಹಿಳೆ, ಎಂಸಿಸಿ ಬಿ ಬ್ಲಾಕ್‌ನ 25ರ ಮಹಿಳೆ, ಮುಸ್ತಫಾ ನಗರದ 54ರ ಪುರುಷ, ವಿದ್ಯಾನಗರದ 30ರ ಮಹಿಳೆ.

ಕುಂಬಾರ ಬೀದಿಯ 69ರ ಪುರುಷ, ಪಾಮೇನಹಳ್ಳಿಯ 20ರ ಮಹಿಳೆ, ಸರಸ್ವತಿ ನಗರದ 49ರ ಮಹಿಳೆ, ಬೀಡಿ ಲೇಔಟ್‌ನ 40ರ ಮಹಿಳೆ, ಇಜಾರ್‌ದಾರ್ ಗಲ್ಲಿಯ 52, 56 ಹಾಗೂ 30ರ ಪುರುಷರು, ಬಾಷಾನಗರದ 23ರ ಮಹಿಳೆ, ವಿದ್ಯಾನಗರದ 30ರ ಮಹಿಳೆ, ಎಂಸಿಸಿ ಎ ಬ್ಲಾಕ್‌ನ 16ರ ಯುವಕ, ಜೆ.ಹೆಚ್. ಪಟೇಲ್ ಬಡಾವಣೆಯ 68ರ ಮಹಿಳೆ, ಆರ್. ವಿ.ಕೆ. ಶಾಲೆಯ ಬಳಿಯ 35ರ ಪುರುಷ, ಆವರಗೆರೆಯ 44ರ ಮಹಿಳೆ, ಎಸ್.ಎಸ್. ಬಡಾವಣೆಯ 65ರ ಪುರುಷ.

ಎಂ.ಸಿ.ಸಿ. ಎ ಬ್ಲಾಕ್‌ನ 36ರ ಪುರುಷ, 38 ಹಾಗೂ 62ರ ಮಹಿಳೆ, ಪೊಲೀಸ್ ಕ್ವಾರ್ಟರ್ಸ್‌ನ 43ರ ಮಹಿಳೆ, ಆಜಾದ್ ನಗರದ 38ರ ಪುರುಷ, ಎಂಸಿಸಿ ಎ ಬ್ಲಾಕ್‌ನ 10ರ ಬಾಲಕ, 70 ಹಾಗೂ 78ರ ವೃದ್ಧೆಯರು, 93ರ ವೃದ್ಧ, 69ರ ಪುರುಷ, 4ರ ಬಾಲಕ, 43ರ ಪುರುಷ, ವಿನೋಬನಗರದ 65ರ ಪುರುಷ, ಆಜಾದ್ ನಗರದ 35 ಹಾಗೂ 49ರ ಮಹಿಳೆಯರು, ಆಜಾದ್ ನಗರದ 20 ಹಾಗೂ 54ರ ಪುರುಷರು, ದುಗ್ಗಮ್ಮನ ದೇವಾಲಯ ಬಳಿಯ 53ರ ಪುರುಷ.

ಬಸವರಾಜಪೇಟೆಯ 41 ಹಾಗೂ 45ರ ಪುರುಷರು, ಇಮಾಮ್ ನಗರದ 32ರ ಪುರುಷ, ಡಿಸಿಎಂ ಬಡಾವಣೆಯ 42ರ ಮಹಿಳೆ, ಶಿವಾಲಿ ಥಿಯೇಟರ್ ಬಳಿಯ 47ರ ಪುರುಷ, ಎಸ್.ಪಿ.ಎಸ್. ನಗರದ 48ರ ಪುರುಷ, ಎನ್.ಆರ್. ರಸ್ತೆಯ 59ರ ಮಹಿಳೆ ಹಾಗೂ 36ರ ಪುರುಷ, ನೂರಾನಿ ಮಸೀದಿ ರಸ್ತೆಯ 70ರ ವೃದ್ಧ, ತರಳಬಾಳು ಬಡಾವಣೆಯ 82ರ ವೃದ್ಧ, ಯಾತ್ರಿ ನಿವಾಸದ 27ರ ಪುರುಷ, ನಿಟುವಳ್ಳಿಯ 55ರ ಪುರುಷ, ಸರಸ್ವತಿ ಬಡಾವಣೆಯ 30ರ ಪುರುಷ, ಜಯನಗರದ 35ರ ಮಹಿಳೆ, ಬೀಡಿ ಲೇಔಟ್‌ನ 32ರ ಪುರುಷ, ನಿಟುವಳ್ಳಿಯ 27ರ ಪುರುಷ, ಚಾಮರಾಜ ಪೇಟೆಯ 37ರ ಮಹಿಳೆ, ಜಿಲ್ಲಾಸ್ಪತ್ರೆಯ 34ರ ಸ್ಟಾಫ್ ನರ್ಸ್, ವಿನಾಯಕ ನಗರದ 42ರ ಪುರುಷ ಹಾಗೂ 12ರ ಬಾಲಕಿ, ಆಜಾದ್ ನಗರದ 21ರ ಪುರುಷ, ಕೆ.ಟಿ.ಜೆ. ನಗರದ 87ರ ವೃದ್ಧ, ರಂಗನಾಥ ಬಡಾವಣೆಯ 59ರ ಪುರುಷ.

ಅಂಜನೇಯ ಬಡಾವಣೆಯ 58ರ ಮಹಿಳೆ, ಎಸ್.ಎಸ್. ಬಡಾವಣೆಯ 57ರ ಪುರುಷ, ಮಹಾಲಕ್ಷ್ಮಿ ಬಡಾವಣೆಯ 29ರ ಪುರುಷ, ನಿಟುವಳ್ಳಿಯ 43ರ ಪುರುಷ, ಮಹಾರಾಜ ಪೇಟೆಯ 51ರ ಮಹಿಳೆ, ವಿನೋಬನಗರದ 23ರ ಪುರುಷ, ಎಂಸಿಸಿ ಎ ಬ್ಲಾಕ್‌ನ 30ರ ಪುರುಷ, ನಿಟುವಳ್ಳಿಯ 14ರ ಬಾಲಕ, ಆಜಾದ್ ನಗರದ 33ರ ಪುರುಷ, ಎಸ್.ಎಸ್.ಎಂ. ನಗರದ 24ರ ಮಹಿಳೆ, ನಿಟುವಳ್ಳಿಯ 50ರ ಮಹಿಳೆ, ವಿನೋಬನಗರದ 65ರ ಮಹಿಳೆ.

ದಾವಣಗೆರೆ ತಾಲ್ಲೂಕು ಗೊಲ್ಲರಹಳ್ಳಿಯ 25ರ ಮಹಿಳೆ, ಬಿಳಿಚೋಡಿನ 13ರ ಬಾಲಕ ಹಾಗೂ 29ರ ಪುರುಷ, ಚಿಕ್ಕಮೇಗಳಗೆರೆಯ 18ರ ಯುವತಿ, ಬಸವನಾಳಿನ 42ರ ಪುರುಷ, ಅತ್ತಿಗೆರೆಯ 41ರ ಪುರುಷ, ಆನೆಕೊಂಡದ 33ರ ಪುರುಷ, ತೋಳಹುಣಸೆಯ 27ರ ಮಹಿಳೆ ಹಾಗೂ 38ರ ಪುರುಷ, ಅಗಸನಕಟ್ಟೆಯ 35ರ ಪುರುಷ.

ಹೊನ್ನಾಳಿಯ 36ರ ಪುರುಷ ಹಾಗೂ ಹೊನ್ನಾಳಿ ತಾಲ್ಲೂಕು ಕ್ಯಾಸಿನಕೆರೆಯ 48ರ ಮಹಿಳೆ, ಬೈರನಹಳ್ಳಿಯ 70ರ ವೃದ್ಧೆ ಹಾಗೂ 45ರ ಮಹಿಳೆ, ದುರ್ಗಿಗುಡಿಯ 57ರ ಪುರುಷ, ಕುಂಕುವದ 17ರ ಯುವಕ, ಕೆಂಚಿಕೊಪ್ಪದ 25ರ ಮಹಿಳೆ, ಕುಂದೂರಿನ 20ರ ಮಹಿಳೆ, ನ್ಯಾಮತಿ ತಾಲ್ಲೂಕಿನ ಹೊನ್ನಹಳ್ಳಿಯ 32ರ ಮಹಿಳೆ.

ಜಗಳೂರು ವಿದ್ಯಾನಗರದ 30ರ ಪುರುಷ, 63ರ ಮಹಿಳೆ ಹಾಗೂ ಜಗಳೂರು ತಾಲ್ಲೂಕು ಭೈರನಹಳ್ಳಿಯ 79ರ ವೃದ್ಧೆ, ಎರೆಹೊಸಳ್ಳಿಯ 75ರ ವೃದ್ಧೆ, ದೊಣೆಹಳ್ಳಿಯ 17ರ ಯುವಕ, ತೋರಣಗಟ್ಟೆಯ 75ರ ವೃದ್ಧೆ, ಒಂದು ವರ್ಷದ ಬಾಲಕ, ಬಿಳಿಚೋಡಿನ 2ರ ಗಂಡು ಮಗು, 14ರ ಬಾಲಕ, ಹೊರಕೆರೆಯ 14ರ ಬಾಲಕಿ, 19ರ ಯುವಕ, ಚಿಕ್ಕರಕೆರೆಯ 20ರ ಪುರುಷ, 21ರ ಮಹಿಳೆ, 65ರ ಪುರುಷ.

ಹರಿಹರ ವಿನಾಯಕನಗರದ 19ರ ಮಹಿಳೆ, ಕೆ.ಆರ್. ನಗರದ 18ರ ಪುರುಷ, ಬೆಂಕಿ ನಗರದ 65ರ ಪುರುಷ, ಕೆ.ಆರ್. ನಗರದ 40ರ ಮಹಿಳೆ, ಕೆ.ಎಸ್.ಆರ್.ಟಿ.ಸಿ.ಯ 32ರ ಪುರುಷ ಕಾಳಿದಾಸ ನಗರದ 26ರ ಪುರುಷ, ಗಾಂಧಿನಗರದ 76ರ ವೃದ್ಧೆ, ಸರ್ಕಾರಿ ಆಸ್ಪತ್ರೆಯ 32ರ ಮಹಿಳೆ, ಕುಂಬಾರ ಓಣಿಯ 98ರ ವೃದ್ಧೆ, ಹೆಚ್.ಎಸ್. ಬಡಾವಣೆಯ 28ರ ಪುರುಷ, ಸಾಂಸ್ಥಿಕ ಕ್ವಾರಂಟೈನ್‌ನ 36ರ ಪುರುಷ, ಜೆ.ಸಿ. ಬಡಾವಣೆಯ 23ರ ಮಹಿಳೆ, ಬೆಂಕಿನಗರದ 80ರ ವೃದ್ಧೆ, ಪ್ರಶಾಂತ ನಗರದ 34ರ ಮಹಿಳೆ, ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನ 36ರ ಪುರುಷ.

ಹರಿಹರ ತಾಲ್ಲೂಕು ಹರ್ಲಾಪುರದ 23ರ ಪುರುಷ, ಮಲೇಬೆನ್ನೂರಿನ 31 ಹಾಗೂ 45ರ ಪುರುಷರು, ಹೊಸಪಾಳ್ಯದ 26ರ ಮಹಿಳೆ, ಹನಗವಾಡಿಯ 30 ಹಾಗೂ 53ರ ಮಹಿಳೆಯರು.

ಚನ್ನಗಿರಿಯ 50ರ ಮಹಿಳೆ, 68ರ ಪುರುಷ, ದಿಗ್ಗೇನಹಳ್ಳಿ ರಸ್ತೆಯ 7 ಹಾಗೂ 12ರ ಬಾಲಕರು, 75ರ ವೃದ್ಧೆ, 65ರ ಪುರುಷ, 27ಹಾಗೂ 34ರ ಮಹಿಳೆಯರು,

ಚನ್ನಗಿರಿ ತಾಲ್ಲೂಕು ನಲ್ಲೂರಿನ 37 ಹಾಗೂ 45ರ ಪುರುಷರು, ತಣಿಗೆರೆಯ 19ರ ಯುವಕ, ಕೊಂಡದಹಳ್ಳಿಯ 38ರ ಮಹಿಳೆ, ಕೆರೆಬಿಳಚಿಯ 45ರ ಪುರುಷ,

ಹಾವೇರಿ ಜಿಲ್ಲೆ ರಾಣೇಬೆನ್ನೂರಿನ 34ರ ಮಹಿಳೆ, ನಂದಿಹಳ್ಳಿ ಕೋಡಿಯಾಲದ 27ರ ಮಹಿಳೆ, ಬಳ್ಳಾರಿ ಜಿಲ್ಲೆ ಹೊಸಪೇಟೆಯ 21ರ ಮಹಿಳೆ, ಹುಬ್ಬಳ್ಳಿಯ 61ರ ಪುರುಷ, ಬಳ್ಳಾರಿ ಜಿಲ್ಲೆ ಕೊಟ್ಟೂರಿನ 22ರ ಪುರುಷ ಹಾಗೂ 40ರ ಮಹಿಳೆ, ಹರಪನಹಳ್ಳಿ 30ರ ಮಹಿಳೆ.

ಮೃತರ ವಿವರ : ದಾವಣಗೆರೆ ನಗರದ ಬಸವರಾಜ ಪೇಟೆಯ 59 ವರ್ಷದ ಪುರುಷ ಮೃತಪಟ್ಟಿದ್ದು, ಇವರು ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದರು. ಜಾಲಿನಗರದ 80 ವರ್ಷದ ರಕ್ತದೊತ್ತಡದಿಂದ ಬಳಲುತ್ತಿದ್ದ ವೃದ್ಧೆ ಹಾಗೂ ಕೆ.ಟಿ.ಜೆ. ನಗರದ ರಕ್ತದೊತ್ತಡ ಹಾಗೂ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದ 63ರ ಪುರುಷ ಮೃತಪಟ್ಟಿದ್ದಾರೆ. ಚನ್ನಗಿರಿಯ ಪಿ.ಡಬ್ಲ್ಯೂ.ಡಿ. ರಸ್ತೆಯ 55ರ ಮಹಿಳೆ ಮೃತಪಟ್ಟಿದ್ದಾರೆ.

**ಭಾರತ ಸರ್ಕಾರದ ಆತ್ಮ ನಿರ್ಭರ್ ಯೋಜನೆಯ ಸಾಲ ಸೌಲಭ್ಯಗಳಿಗೆ ಉದ್ಯಮ/ಉದ್ಯೋಗ ಆಧಾರ್ (MSME) ಗೆ ರಿಜಿಸ್ಟ್ರೇಷನ್ ಮಾಡಿಕೊಡಲಾಗುವುದು.**
98449 69738

**ಮಾರಾಟಕ್ಕೆ**
ಎಸ್.ಎಸ್ ಲೇಔಟ್‌ನಲ್ಲಿ 30x40, (ಉತ್ತರ) 3 ಫ್ಲೋರ್ ಮನೆ, ಶಕ್ತಿನಗರ 22x30, (ಪೂರ್ವ) ಮನೆ, ಚಿಕ್ಕಮ್ಮಣ್ಣಿ ಲೇಔಟ್ 20x30, (ಪೂರ್ವ) ಡುಪ್ಲೆಕ್ಸ್ ಮನೆ ಹಾಗೂ ಡಾಲರ್ಸ್ ಕಾಲೋನಿಯ 30x40 (ಉತ್ತರ) ಸೈಟ್ ಮಾರಾಟಕ್ಕಿದೆ.
98804 40602

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಎಸ್.ಎಸ್.ಎಸ್. (SSS) ಎಂಟರ್ ಪ್ರೈಸಸ್ ರವರಿಂದ**
ಶ್ರಾವಣದ ಪ್ರಯುಕ್ತ ರಿಯಾಯಿತಿಯಲ್ಲಿ ಸೈಟುಗಳು ಲಭ್ಯ ಕೆ.ಹೆಚ್.ಬಿ. ಎದುರು, ಜಿನಿಸಿಸ್ ಪಕ್ಕ, ನ್ಯಾಷನಲ್ ಹೈವೇಯಲ್ಲಿರುವ ಸಿಟಿಗೆ ಹತ್ತಿರವಿರುವ ಎಂ.ಬಿ ಸಿಟಿ ಯಲ್ಲಿ ಈ ಹಿಂದೆ ಮಾರಾಟ ಮಾಡಿದ್ದ ರೂ. 1200/- ರಿಂದ 1250/-ಗಳ ಬದಲಿಗೆ ಕೇವಲ ರೂ.999/- ಗಳಲ್ಲಿ ಫೈನಲ್ ಅಪ್ರೂವಲ್ ನೋಂದಾವಣೆಗೆ ಸಿದ್ಧವಿರುವ ಹಾಗೂ ಬ್ಯಾಂಕ್ ಸಾಲ ದೊರೆಯುವ ಸೈಟುಗಳು ದೊರೆಯುತ್ತವೆ. ಸಂಪರ್ಕಿಸಿ :
ಪಠಾಣ್ : 81399-88555, 81973-00410

**ಮನೆ ಬಾಡಿಗೆಗೆ ಇದೆ**
1BHK 1ನೇ ಮಹಡಿ ಲೇಬರ್ ಕಾಲೋನಿ, 9ನೇ ಕ್ರಾಸ್ ತ್ರಿಶೂಲ್ ಕಾಲೇಜು ಗೇಟ್, KSRTC ಬಸ್ ಸ್ಟಾಂಡ್‌ಗೆ ಹತ್ತಿರ, ಡೋ.ನಂ 1862/19, ಮುನ್ಸಿಪಲ್ ನೀರು ಹಾಗೂ ಬೋರ್ ನೀರಿನ ವ್ಯವಸ್ಥೆ, ಪೂರ್ವಾಭಿಮುಖವುಳ್ಳ ಮನೆ ಬಾಡಿಗೆಗೆ ಇದೆ.
93412 26040

**ಸೈಟ್ ಮಾರಾಟಕ್ಕಿದೆ**
ಕಮರ್ಷಿಯಲ್ ಪ್ರಾಪರ್ಟಿ
31'X54' East - South Cornner
40 ಫೀಟ್ ಮೇನ್ ರೋಡ್ ಉತ್ತಮ್ ಬಡಾವಣೆ, ರಿಲಯನ್ಸ್ ಪೆಟ್ರೋಲ್ ಬಂಕ್ ಹಿಂಭಾಗ, ಪಿ.ಬಿ ರೋಡ್ ಆವರಗೆರೆ, ದಾವಣಗೆರೆ.
83107 72277

**ಮನೆ ಬಾಡಿಗೆಗೆ ಇವೆ**
ಗ್ರೌಂಡ್ ಫ್ಲೋರ್‌ನಲ್ಲಿರುವ ಡಬಲ್ ಬೆಡ್ ರೂಂ, ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ: # 83, ಲೇಬರ್ ಕಾಲೋನಿ, (KHB ಕಾಲೋನಿ) 4ನೇ ಕ್ರಾಸ್, ನಿಟ್ಟುವಳ್ಳಿ ರಸ್ತೆ, ಗಣೇಶ ದೇವಸ್ಥಾನದ ಹತ್ತಿರ, ದಾವಣಗೆರೆ.
99451 25173, 78920 94954

**ಮನೆ ಮತ್ತು ಸೈಟ್‌ಗಳು ಮಾರಾಟಕ್ಕಿವೆ**
20X25, 30X40, ಮನೆಗಳು ಮತ್ತು ಸೈಟುಗಳು ಮತ್ತು ಹೊಸ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ.
87224 07999

**ಬೇಕಾಗಿದ್ದಾರೆ**
Auditor Office / Accountant Officeನಲ್ಲಿ ಕೆಲಸ ಮಾಡಿದ ಅನುಭವ ಇರುವ Female candidate Full Time ಕೆಲಸ ಮಾಡಲು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಮೊ. 80882-10419

**ಸೈಟ್ ಮಾರಾಟಕ್ಕಿದೆ**
ಕರ್ನಾಟಕ ಗೃಹ ಮಂಡಳಿಯ ತುಂಗಭದ್ರಾ ಬಡಾವಣೆಯಲ್ಲಿ 30x50 ಅಳತೆಯ ಸೈಟು ಮಾರಾಟಕ್ಕಿದೆ. ದಕ್ಷಿಣ ಮತ್ತು ಉತ್ತರಕ್ಕೆ ರಸ್ತೆ
ಸಂಪರ್ಕಿಸಿ : 98451 65075

**ಮನೆ/ಮಳಿಗೆ ಬಾಡಿಗೆಗೆ ಇದೆ**
RMC ಲಿಂಕ್ ರೋಡ್, ಪಾರ್ಕ್ ಎದುರು ಮಹಡಿಯ ಸಿಂಗಲ್ ಬೆಡ್ ರೂಂ ಮನೆ (ಸಸ್ಯಹಾರಿಗಳಿಗೆ ಮಾತ್ರ) ಮತ್ತು ಮಳಿಗೆ ಬಾಡಿಗೆಗೆ ಇದೆ.
98450 41516

**ಮನೆ ಲೀಜ್‌ಗೆ ಇದೆ**
ದಾವಣಗೆರೆ ಆಂಜನೇಯ ಬಡಾವಣೆ 17ನೇ ಕ್ರಾಸ್ # 1810/86, ಸಿದ್ದೇಶ್ವರ ಕಾಲೇಜು ರಸ್ತೆಯಲ್ಲಿ ಗ್ರೌಂಡ್ ಫ್ಲೋರ್, ಸಿಂಗಲ್ ಬೆಡ್ ರೂಂನ ಎರಡು ಮನೆಗಳು ಲೀಜ್‌ಗೆ ಇವೆ.
91642 33611

**2 BHK ಮನೆ ಬಾಡಿಗೆಗೆ ಇದೆ**
ದಕ್ಷಿಣಕ್ಕೆ ರಸ್ತೆ, ಮನೆ ಬಾಗಿಲು ಪೂರ್ವಕ್ಕೆ ಅಶೋಕ ನಗರ, 1ನೇ ಕ್ರಾಸ್, ಬಲಭಾಗ, ಯರಗುಂಟೆ ಹೆಚ್.ಪಿ. ಗ್ಯಾಸ್ ಗೋಡೌನ್ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ
88841 67704

**ಜಮೀನು ಮಾರಾಟಕ್ಕಿದೆ**
NH 4 ಮಲ್ಲಶೆಟ್ಟಿಹಳ್ಳಿ ಸೈಟ್ ಲೇಔಟ್ ಪಕ್ಕದಲ್ಲಿ 1 ಎಕರೆ ಜಮೀನು ಮಾರಾಟಕ್ಕಿದೆ.
80734 65615

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್, ಬಸವೇಶ್ವರ ಲೇಔಟ್‌ನಲ್ಲಿರುವ ವಾಟರ್ ಟ್ಯಾಂಕ್ (ಟ್ರಾನ್ಸ್‌ಫಾರ್ಮ) ನಿಂದ 7ನೇ ಕ್ರಾಸ್‌ನಲ್ಲಿರುವ, ಉತ್ತರ ದಿಕ್ಕಿನ ಮನೆ, 20x60 ಅಳತೆಯುಳ್ಳ 1ಫ್ಲೋರ್ 3 ಬೆಡ್ ರೂಂ , 2ಫ್ಲೋರ್ 1 ಬೆಡ್ ರೂಂ ಮನೆ ಲೀಜಿಗೆ ಇವೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
97318 31987

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ 2ನೇ ಹಂತ 6ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್, 2 ಬೆಡ್ ರೂಂ ಮನೆ # 800/5
94489 80263

**2 BHK ಮನೆ ಬಾಡಿಗೆಗೆ ಇದೆ**
# 1700, KTJ ನಗರ 18ನೇ ಕ್ರಾಸ್, ಕೆ.ಇ.ಬಿ. ಆಫೀಸ್ ಎದುರು, 1ನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ. ಮುನ್ಸಿಪಲ್/ಬೋರ್ ನೀರಿನ ವ್ಯವಸ್ಥೆ ಇದೆ.
76765 50352

**WANTED**
HEAD MASTER - 1
B.A./B.Sc./B.Ed. - 4
Aaya - 2, CONTACT :
99801 48289
63616 62669

**ಮನೆ ಬಾಡಿಗೆಗೆ / ಲೀಸ್ ಗೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಲೀಸ್ ಗಿವೆ.
99726-75759

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ನಿಜಲಿಂಗಪ್ಪ ಬಡಾವಣೆ ಅಮೃತ ವಿದ್ಯಾಲಯ ಶಾಲೆ ಪಕ್ಕ 2BHK ಮನೆ ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ:
96643 28038

**ಮನೆ ಬಾಡಿಗೆಗೆ ಇದೆ**
ನೆಲಮಹಡಿಯಲ್ಲಿ 2 ಬೆಡ್‌ರೂಂವುಳ್ಳ ಮುನ್ಸಿಪಲ್/ಬೋರ್ ನೀರಿನ ಸೌಲಭ್ಯವುಳ್ಳ ವಿನಾಯಕ ಬಡಾವಣೆ, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ವಿದ್ಯಾನಗರದಲ್ಲಿ ಮನೆ ಬಾಡಿಗೆಗೆ ಇದೆ.
ಫೋ. : 87626 21495

**ಮನೆ ಮಾರಾಟಕ್ಕೆ ಇದೆ**
ನಿಜಲಿಂಗಪ್ಪ ಬಡಾವಣೆ 30x40 ನಿವೇಶನದಲ್ಲಿ ಕಟ್ಟಿರುವ ಐದು ಮನೆಗಳುಳ್ಳ ಮನೆ ಮಾರಾಟಕ್ಕಿವೆ.
ಸಂಪರ್ಕಿಸಿ :
72599 21669

**ಮನೆಗಳು ಬಾಡಿಗೆಗಿವೆ**
ಒಂದನೇ ಮಹಡಿಯಲ್ಲಿ 2BHK ಯ ಬೋರ್- ಕಾರ್ಪೋರೇಷನ್ ನೀರಿನ ಸೌಲಭ್ಯವಿರುವ ಮನೆ, ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ
ಮೊ.: 70194 27951, 93410 14488

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 11 ನೇ ಮೇನ್ 3 ನೇ ಕ್ರಾಸ್, ಬಾಪೂಜಿ ಹೈಸ್ಕೂಲ್ ಹತ್ತಿರ ಮೊದಲ ಮಹಡಿಯಲ್ಲಿ ವಾಸ್ತು ಪ್ರಕಾರ ಉತ್ತರಕ್ಕೆ ಬಾಗಿಲಿರುವ ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಎರಡು ಬೆಡ್ ರೂಂ, ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ
Ph : 94480 46613

**ಸೈಟ್ ಮಾರಾಟಕ್ಕೆ**
ಸರಸ್ವತಿನಗರ 30x50, ಡಿಸಿಎಮ್ 40x70, ಹೈಟೆಕ್ 30x50, ಜಯನಗರ 30x31 ಸೈಟ್‌ಗಳು ಮಾರಾಟಕ್ಕಿವೆ. ಮನೆ ಬಾಡಿಗೆ/ಲೀಸ್‌ಗೆ ಇವೆ.
ಏಜೆಂಟ್: ಶಾಂತಪ್ಪ ಪೂಜಾರಿ
99647 29123

**2 BHK ಮನೆ ಮತ್ತು ರೂಂ ಬಾಡಿಗೆಗೆ**
ಪೂರ್ವ ದಿಕ್ಕಿನ ಸುಸಜ್ಜಿತ ಮನೆ ಹಾಗೂ ರೂಂ ತಿಮ್ಮಾರೆಡ್ಡಿ, ಮಹೇಶ್ ಪಿ.ಯು. ಕಾಲೇಜ್ ಹಾಗೂ ಬಿ.ಐ.ಇ.ಟಿ. ಕಾಲೇಜಿಗೂ ಹತ್ತಿರ ಇರುವಂತೆ ಆಂಜನೇಯ ಬಡಾವಣೆ 18ನೇ ಕ್ರಾಸ್, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ.
98452 16749, 95352 82899

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 14ನೇ ಕ್ರಾಸ್‌ನಲ್ಲಿ 2 BHK ಮನೆಗಳು ಬಾಡಿಗೆಗೆ ಇವೆ.
ಸಂಪರ್ಕಿಸಿ :
72599 21669

**1BHK AND 2BHK HOME FOR RENT**
ADDRESS: 15TH MAIN, BEHIND BAPUJI SCHOOL, MCC 'B' BLOCK, KUVEMPU NAGAR, DAVANGERE.
CONTACT : 97384 05209

**ತಕ್ಷಣ ಬೇಕಾಗಿದ್ದಾರೆ**
ಗಾಡಿ ಹೋಟೆಲ್‌ಗೆ ಸಹಾಯಕರು ಮತ್ತು ದೋಸೆ ಭಟ್ಟರು ಬೇಕಾಗಿದ್ದಾರೆ.
ಸಹಾಯಕರು -1 - 6000/-
ದೋಸೆ ಭಟ್ಟರು -1- 8000/-
ಸಮಯ: ಬೆಳಿಗ್ಗೆ 6-10 ಸಂಜೆ 5-9
63641 23846

**ಮನೆ ಬಾಡಿಗೆಗೆ ಇವೆ**
ಎಸ್. ಎಸ್ ಬಡಾವಣೆ 'ಎ' ಬ್ಲಾಕ್‌ನಲ್ಲಿ ಶಾಮನೂರು ರಸ್ತೆ, ಕರ್ನಾಟಕ ಬ್ಯಾಂಕ್ ಹಿಂಭಾಗ 15X50, 15x50, ಅಕ್ಕ-ಪಕ್ಕ ಮನೆ 2BHK. ಪೂರ್ವ ದಿಕ್ಕಿನ ಗ್ರೌಡ್ ಫ್ಲೋರ್ ಮನೆ ಬಾಡಿಗೆಗೆ ಇವೆ.
ಮಂಜುನಾಥ್ : 92422 20342


# ಆಡಳಿತ ವ್ಯವಸ್ಥೆಯಲ್ಲಿ ಪತ್ರಿಕಾ ರಂಗದ ಪಾತ್ರ ಅವಶ್ಯ

## ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಮತಿ ತಹಶೀಲ್ದಾರ್ ತನುಜಾ ಟಿ.ಸವದತ್ತಿ

ನ್ಯಾಮತಿ, ಆ.1- ಪ್ರಜಾಪ್ರಭುತ್ವದ ಯಶಸ್ಸಿಗೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾರಂಗ ಬಹು ಮುಖ್ಯವಾದವು. ಆಡಳಿತ ವ್ಯವಸ್ಥೆಗಳು ಸಮಾಜಮುಖಿಯಾಗಬೇಕಾದರೆ ಪತ್ರಿಕಾ ರಂಗದ ಕೊಡುಗೆ ಅಗತ್ಯವಾಗಿದೆ ಎಂದು ನ್ಯಾಮತಿ ತಹಶೀಲ್ದಾರ್ ತನುಜಾ ಟಿ.ಸವದತ್ತಿ ಹೇಳಿದರು.




ನ್ಯಾಮತಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಪತ್ರಕರ್ತರ ಸಂಘ, ಹೊನ್ನಾಳಿ - ನ್ಯಾಮತಿ ಘಟಕದ ವತಿಯಿಂದ ಮೊನ್ನೆ ಆಯೋಜಿಸಲಾಗಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಇತಿಹಾಸದಲ್ಲಿ ಇಡೀ ಆಡಳಿತ ವ್ಯವಸ್ಥೆ ಸರಿಯಾದ ದಾರಿಯಲ್ಲಿ ಸಾಗುವಂತೆ ಪತ್ರಿಕಾ ರಂಗ ನೋಡಿಕೊಂಡು ಬರುತ್ತಿದೆ. ಪ್ರಸ್ತುತ ಕೊರೊನಾ ವೈರಸ್ ಸಂದಿಗ್ಧ ಪರಿಸ್ಥಿತಿಯಲ್ಲಿ ಕೊರೊನಾ ವಾರಿಯರ್ಸ್‌ಗಳಾಗಿ ಪತ್ರಕರ್ತರು ತಮ್ಮ ಜೀವದ ಹಂಗು ತೊರೆದು ಆಡಳಿತ ವ್ಯವಸ್ಥೆಯೊಂದಿಗೆ ಕೈ ಜೋಡಿಸಿ ಸಮಾಜ ಸೇವೆಗೆ ಧುಮುಕಿರುವುದು ಶ್ಲಾಘನೀಯ ಸಂಗತಿಯಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹನುಮಂತಪ್ಪ ಎಂ. ಶಿರಿಹಳ್ಳಿ ಮಾತನಾಡಿ, ಪತ್ರಿಕಾ ರಂಗ ಹುಟ್ಟಿ ಅದು ಬೆಳೆದು ಬಂದ ಹಾದಿಯ ಬಗ್ಗೆ ಮಾಹಿತಿ ನೀಡಿ ಪತ್ರಕರ್ತರು ತಮ್ಮ ಸಾಮಾಜಿಕ ಜವಾಬ್ದಾರಿ ಅರಿತು ಕೆಲಸ ಮಾಡಿದಲ್ಲಿ ಅವರ ಕಾರ್ಯ ಇಡೀ ಸಮಾಜಕ್ಕೆ ಅದರ್ಶಪ್ರಾಯ ವಾಗಿರುತ್ತದೆ ಎಂದು ಹೇಳಿದರು. ನ್ಯಾಮತಿ ಸರಕಾರಿ ಆಸ್ಪತ್ರೆಯ ವೈದ್ಯ ಡಾ. ರೇಣುಕಾನಂದ, ಉಪ ತಹಶೀಲ್ದಾರ್ ಎನ್. ನಾಗರಾಜ್ ಭಾಗವಹಿಸಿದ್ದರು.

ಆಯುಷ್ ಇಲಾಖೆ ವೈದ್ಯ ಡಾ. ಸಾಲಿಮಠ ಅವರು ಕೊರೊನಾ ವೈರಸ್ ವಿರುದ್ಧ ರೋಗ ನಿರೋಧಕ ಔಷಧ ಕಿಟ್‌ಗಳನ್ನು ಪತ್ರಕರ್ತರಿಗೆ ವಿತರಿಸಿ ಅವುಗಳ ಬಳಕೆ ಮತ್ತು ಉಪಯೋಗದ ಬಗ್ಗೆ ವಿವರಿಸಿದರು. ವೈದ್ಯ ಡಾ.ಲಿಂಗರಾಜೇಂದ್ರ ಆರ್ಯುವೇದ ಔಷಧ ಪದ್ಧತಿಗಳ ಉಪಯೋಗದ ಬಗ್ಗೆ ಮಾಹಿತಿ ನೀಡಿದರು. ಸಂಘದ ಜಿಲ್ಲಾಧ್ಯಕ್ಷ ಎಂ.ಪಿ.ಎಂ. ಷಣ್ಮುಖಯ್ಯ, ಪ್ರಧಾನ ಕಾರ್ಯದರ್ಶಿ ಡಿ.ಎಂ. ಹಾಲಾರಾಧ್ಯ ಮಾತನಾಡಿದರು.

ಎಂ.ಎಸ್.ಶಾಸ್ತ್ರಿ ಹೊಳೆಮಠ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

**ಪದಾಧಿಕಾರಿಗಳ ಆಯ್ಕೆ:** ಸಂಘದ ನೂತನ ಅಧ್ಯಕ್ಷರಾಗಿ ರಾಂಪುರದ ಎ.ಕೆ. ಹಾಲೇಶ್, ಉಪಾಧ್ಯಕ್ಷ ರಾಜು , ಪ್ರಧಾನ ಕಾರ್ಯದರ್ಶಿ ಡಿ.ಎಂ.ಹಾಲಾರಾಧ್ಯ, ಸಹ ಕಾರ್ಯದರ್ಶಿ ಶಕೀಲ್ ಆಹಮ್ಮದ್, ಖಜಾಂಚಿ ಎಸ್.ಸುರೇಶ್, ಸಂಘಟನಾ ಕಾರ್ಯದರ್ಶಿ ರಮೇಶ್ ಮಡಿವಾಳ, ಜಿಲ್ಲಾ ಸಂಚಾಲಕರಾಗಿ ಗಿರೀಶ್ ನಾಡಿಗ್, ಸಲಹಾ ಸಮಿತಿ ಸದಸ್ಯರಾಗಿ ಎಂ.ಎಸ್.ಶಾಸ್ತ್ರಿ ಹೊಳೆಮಠ, ಎಂ.ಪಿ.ಎಂ. ವಿಜಯಾನಂದ ಕುಮಾರ ಸ್ವಾಮಿ, ಮಾಸಡಿ ಅರುಣಗೌಡ ಆಯ್ಕೆಯಾದರು.

# ಹಲವಾಗಲು ಸಾರ್ವಜನಿಕ ಆಸ್ಪತ್ರೆ , ನೆಮ್ಮದಿ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ



ಹರಪನಹಳ್ಳಿ

ಹರಪನಹಳ್ಳಿ, ಆ. 1 - ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ತಾಲ್ಲೂಕಿನ ಹಲವಾಗಲು ಗ್ರಾಮದ ಸಾರ್ವ ಜನಿಕ ಆಸ್ಪತ್ರೆ ಹಾಗೂ ನೆಮ್ಮದಿ ಕೇಂದ್ರವನ್ನು ಈ ಕ್ಷೇತ್ರದ ಜನರಿಗೆ ಅನುಕೂಲವಾಗುವಂತೆ ಈ ಉಪಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿ ಪ್ರತ್ಯೇಕ ನೆಮ್ಮದಿ ಕೇಂದ್ರವನ್ನಾಗಿ ಮಾಡ ಬೇಕು ಎಂದು ಹಲವಾಗಲು ಜಿಲ್ಲಾ ಪಂಚಾಯತಿ ಸದಸ್ಯ ರಾದ ಆರುಂಡಿ ಸುವರ್ಣ ನಾಗರಾಜ್ ಒತ್ತಾಯಿಸಿದ್ದಾರೆ.

ಹಲವಾಗಲು ಜಿಲ್ಲಾ ಪಂಚಾಯತಿ ಕ್ಷೇತ್ರ ಹೆಚ್ಚು ಜನಸಂಖ್ಯೆಯಿಂದ ಕೂಡಿದ್ದು, ಅನೇಕ ಗ್ರಾಮಗಳಿಂದ ಸಾರ್ವಜನಿಕರು, ತಮ್ಮ ಕೆಲಸ ಕಾರ್ಯಗಳಿಗಾಗಿ ಬರುತ್ತಾರೆ. ಕ್ಷೇತ್ರದ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಸಾರ್ವಜನಿಕ ಆಸ್ಪತ್ರೆ ಹಾಗೂ ನೆಮ್ಮದಿ ಕೇಂದ್ರವನ್ನು ಮೇಲ್ದರ್ಜೆಗೇರಿಸಬೇಕು.

ಈ ಹಿಂದೆ ಈ ಕ್ಷೇತ್ರ ತೆಲಗಿ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿದ್ದು, ಅಭಿವೃದ್ಧಿ ಕಾರ್ಯಗಳು ಕುಂಠಿತ ಗೊಂಡಿದ್ದು, ಆಗಿನ ಸರ್ಕಾರ 2016 ರಲ್ಲಿ ಕೇತ್ರ ಮರುವಿಂ ಗಡಣೆ ಮಾಡಿ ಪ್ರತ್ಯೇಕ ನೂ ತ ನ ಹಲವಾಗಲು ಜಿಲ್ಲಾ ಪಂಚಾಯತಿ ಕ್ಷೇತ್ರವ ನ್ನಾಗಿ ಮಾಡಿದ ಬಳಿಕ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಇನ್ನು ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿವೆ ಎಂದರು.

ಹಲವಾಗಲು ಕ್ಷೇತ್ರದ ಅಭಿವೃದ್ದಿಗೆ ಹಾಗೂ ಇತರೆ ಸರ್ಕಾರಿ ಕಛೇರಿಗಳ ಮೇಲ್ದರ್ಜೆಗಾಗಿ ದಾವಣಗೆರೆ ಹಾಗೂ ಬಳ್ಳಾರಿ ಜಿಲ್ಲಾ ಪಂಚಾಯತಿಗಳ ಸಾಮಾನ್ಯ ಸಭೆಗಳಲ್ಲಿ ನಾನು ಪ್ರತಿ ಸಾಮಾನ್ಯ ಸಭೆಗಳಲ್ಲಿ ಹಾಗೂ ಕೆ.ಡಿ.ಪಿ.ಸಭೆಗಳಲ್ಲಿ ಒತ್ತಾಯಿಸುತ್ತಾ ಬಂದಿ ದ್ದೇನೆ. ಅತ್ಯಂತ ಹಿಂದುಳಿದ ಕ್ಷೇತ್ರ ವಾಗಿರುವ ಹಲವಾ ಗಲು ಜಿಲ್ಲಾ ಪಂಚಾಯತಿ ಕ್ಷೇತ್ರದಲ್ಲಿ ಬಡವರು, ಕೂಲಿ ಕಾರ್ಮಿಕರು, ರೈತಾಪಿ ವರ್ಗದವರು, ಮಧ್ಯಮ ವರ್ಗದ ಜನರಿರುವ ಕ್ಷೇತ್ರದಲ್ಲಿ ಸಾರ್ವಜನಿಕರ ಆಸ್ಪತ್ರೆ ಹಾಗೂ ನೆಮ್ಮದಿ ಕೇಂದ್ರವನ್ನು ಸರ್ಕಾರ ಮೇಲ್ದರ್ಜೆಗೆ ಏರಿಸ ಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಅವರು ತಿಳಿಸಿದರು.

# ರಾಷ್ಟ್ರೀಯ ಶಿಕ್ಷಣ ನೀತಿಗೆ ಎಐಡಿಎಸ್‌ಓ ಖಂಡನೆ

ದಾವಣಗೆರೆ, ಆ.1- ಶಿಕ್ಷಣವನ್ನು ಖಾಸಗೀಕರಣ, ವ್ಯಾಪಾರೀಕರಣ, ಕೇಂದ್ರೀಕರಣ, ವೃತ್ತಿ ಕೇಂದ್ರತೆ ಹಾಗೂ ಕೋಮುವಾದೀಕರಣಗೊಳಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಕೇಂದ್ರ ಸಚಿವ ಸಂಪುಟವು ರಾಷ್ಟ್ರೀಯ ಶಿಕ್ಷಣ ನೀತಿ-2020 ಅನುಮೋದಿಸಿರುವುದನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಓ) ಕಟುವಾಗಿ ಖಂಡಿಸಿದೆ.

ಕೇಂದ್ರ ಸರ್ಕಾರ ಈಗಿರುವ ಪ್ರಜಾತಾಂತ್ರಿಕ ರೂಢಿಗಳನ್ನು ಧ್ವಂಸಗೊಳಿಸಿದ್ದಲ್ಲದೆ, ಶಿಕ್ಷಣದ ನೀತಿಯನ್ನು ರೂಪಿಸುವಲ್ಲಿ ರಾಜ್ಯ ಸರ್ಕಾರಗಳ ಪಾತ್ರವನ್ನು ತಿರಸ್ಕರಿಸಿದೆ. ಹಾಗೆಯೇ ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರ ಸಂಘಟನೆಗಳ ಅಭಿಪ್ರಾಯ ವನ್ನು ಅಲಕ್ಷಿಸಿದ್ದಲ್ಲದೆ, ಕೊರೊನಾ ಸಾಂಕ್ರಾಮಿಕ ರೋಗವು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸರ್ಕಾರವು ತನ್ನ ದುರುದ್ದೇಶವನ್ನು ಸಾಧಿಸಿಕೊಳ್ಳಲು ಮುಂದಾಗಿದೆ ಎಂದು ದೂರಿದೆ.

ಈ ನೀತಿಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದ್ದು, ವೈಜ್ಞಾನಿಕ, ಪ್ರಜಾತಾಂತ್ರಿಕ ಮತ್ತು ಧರ್ಮನಿರಪೇಕ್ಷ ಶಿಕ್ಷಣಕ್ಕಾಗಿ ರಾಷ್ಟ್ರಾದ್ಯಂತ ಹೋರಾಟಗಳನ್ನು ಬೆಳೆಸಬೇಕೆಂದು ಎಐಡಿಎಸ್‌ಓ ಕರೆ ನೀಡುವುದಾಗಿ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

# ಹರಿಹರದ ಗಿರಿಯಮ್ಮ ಕಾಲೇಜು ಪ್ರಾಂಶುಪಾಲರಾಗಿ ಡಾ. ಗಂಗಾಧರಪ್ಪ

ಹರಿಹರ ಆ.1 - ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಪ್ರಾಂಶು ಪಾಲರಾದ ಪ್ರೊ. ಯು. ಆರ್. ಕಾಡಪ್ಪನವರ್ ವಯೋ ನಿವೃತ್ತಿ ಹೊಂದಿದ್ದಾರೆ. ನೂತನ ಪ್ರಾಂಶುಪಾಲರಾಗಿ ಡಾ. ಜಿ.ಬಿ. ಗಂಗಾಧರಪ್ಪ ಅವರು ಅಧಿಕಾರ ಸ್ವೀಕರಿಸಿದ್ದಾರೆ.

ಕಾಡಪ್ಪನವರ್ ಮತ್ತು ಗಂಗಾಧರಪ್ಪ ಅವರುಗಳಿಗೆ ಪೌರ ಸೇವಾ ಸಮಿತಿಯ ಅಧ್ಯಕ್ಷ ಜಿ. ತಿಪ್ಪೇಸ್ವಾಮಿ, ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ನಿರ್ದೇಶಕರಾದ ಎಂ.ಆರ್. ಸತ್ಯನಾರಾಯಣ, ಬಲರಾಮ ಶ್ರೇಷ್ಠಿ, ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಟಿ.ಡಿ. ಸುಜಾತ ಮತ್ತಿತರರು ಶುಭಾಶಯ ಸಲ್ಲಿಸಿದ್ದಾರೆ.

# ಶಿಕ್ಷಣ ಇಲಾಖೆಯಿಂದ ಉಚಿತ ಪಠ್ಯ ಪುಸ್ತಕ ವಿತರಣೆ




ಹರಿಹರ, ಆ.1- ಕೊರೊನಾ ರೋಗದ ಭಯದಿಂದಾಗಿ ಓದುವ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿ ತೊಂದರೆ ಪಡಬಾರದು ಎಂದು ಶಿಕ್ಷಣ ಇಲಾಖೆಯು ವಿದ್ಯಾಗಮ ಯೋಜನೆಯಡಿಯಲ್ಲಿ ತಾಲ್ಲೂಕಿನ 204 ಸರ್ಕಾರಿ ಮತ್ತು ಅನುದಾನಿತ ಶಾಲೆಯ 19 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಹರಿಹರ ತಾಲ್ಲೂಕು ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಹೇಳಿದರು.

ಅವರು ಶಿಕ್ಷಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಪಠ್ಯ ಪುಸ್ತಕಗಳನ್ನು ಶಾಲೆಯ ಶಿಕ್ಷಕರಿಗೆ ವಿತರಿಸಿ ಮಾತನಾಡಿದರು.

ವಿದ್ಯಾರ್ಥಿಗಳು ನಿರಂತರವಾಗಿ ಶಿಕ್ಷಣದಲ್ಲಿ ತೊಡಗಿಸಿಕೊಂಡಿರಬೇಕು ಎಂದು ಗ್ರಾಮದಲ್ಲಿ ಇರುವ ಶಾಲೆಯಲ್ಲಿ ಓರ್ವ ಶಿಕ್ಷಕರಿಂದ ವಾರದಲ್ಲಿ ಒಂದು ದಿನ ಶಿಕ್ಷಣ ನೀಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಪಠ್ಯಪುಸ್ತಕಗಳ ಜೊತೆಗೆ ಅಭ್ಯಾಸ ಪುಸ್ತಕ, ಡೈರಿ ನೀಡಲಾಗುತ್ತಿದ್ದು, ಮಕ್ಕಳು ಶಾಲೆಗೆ ಬರದಿದ್ದಲ್ಲಿ ಅವರ ಪೋಷಕರಿಗೆ ತಲುಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪಠ್ಯ ಪುಸ್ತಕಗಳ ನೋಡಲ್ ಅಧಿಕಾರಿ ತೀರ್ಥಪ್ಪ, ಪ್ರಭು, ಅಶೋಕಪ್ಪ, ರವಿ, ಮಂಜುನಾಥ್, ಧೂಳೆಹೊಳೆ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕ ಶರಣ್ ಕುಮಾರ್ ಹೆಗಡೆ, ಶಿಕ್ಷಕಿ ಹೇಮಾ, ಮಂಜುನಾಥ್ ಇತರರಿದ್ದರು.

# ರಾಣೇಬೆನ್ನೂರಿನಲ್ಲಿ ರಕ್ತದಾನ ಶಿಬಿರ



ರಾಣೇಬೆನ್ನೂರು, ಆ.1- ಸ್ಥಳೀಯ ನಿರಾಮಯ ಫೌಂಡೇಷನ್ ವತಿಯಿಂದ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ರಾಣೇಬೆನ್ನೂರು ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಬಿಜೆಪಿ ಮುಖಂಡ ಸಂತೋಷಕುಮಾರ ಪಾಟೀಲ್ ಶಿಬಿರಕ್ಕೆ ಚಾಲನೆ ನೀಡಿ, ರಕ್ತದಾನದ ಮಹತ್ವ ಕುರಿತು ಮಾತನಾಡಿದರು. ನಿರಾಮಯ ಸಂಸ್ಥೆಯ ಪ್ರೀತಂಗೌಡ, ಮಂಜುನಾಥ ಪಾಟೀಲ, ರಾಣೇಬೆನ್ನೂರು ಬ್ಲಡ್ ಬ್ಯಾಂಕ್ ಮುಖ್ಯಸ್ಥ ಶ್ರೀಧರ, ಯುವರಾಜ ಬಾರಾಟಕ್ಕಿ ಮತ್ತಿತರರಿದ್ದರು.


**FOR RENT**
Commercial 2000 Sqft building for Rent Near court circle 24x7 water, Toilet, Parking with all Amenities.
87468 12999
87468 13999

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಸೈಟ್‌ಗಳು ಮಾರಾಟಕ್ಕಿವೆ**
ಭರಮಸಾಗರ, ಸಿಂಗ್ರಿಹಳ್ಳಿ ಮತ್ತು ಮಲ್ಲಶೆಟ್ಟಿಹಳ್ಳಿಯಲ್ಲಿ ಫೈನಲ್ ಅಪ್ರೂವಲ್ ಆಗಿರುವ ಈ.ಸ್ವತ್ ಮತ್ತು ಡೋರ್ ನಂಬರ್ ಸಹಿತ ಸೈಟ್‌ಗಳು ಮಾರಾಟಕ್ಕಿವೆ.
81529 66109

**2 BHK FOR RENT**
Sir MV College, TV Station, High tech Hospital, ZP Office, Shashi soap Factory, Lalitha International School, Subramanya Temple, Industrial Estate, Car Parking with Lift, Water Supply, 2 Bed Room, House is available for Rent.
9986538099, 9900411110

**ಬೇಕಾಗಿದ್ದಾರೆ**
ಬೇಸಿಕ್ ಕಂಪ್ಯೂಟರ್ ಆದ ಮಹಿಳಾ ಆಪರೇಟರ್ ಬೇಕಾಗಿದ್ದಾರೆ.
ಮಧುರ ಇಂಟೀರಿಯರ್ಸ್
ಮಧುರ ಡೀಲಕ್ಸ್, ಲಾಡ್ಜ್ ಹದಡಿ ರಸ್ತೆ, ದಾವಣಗೆರೆ.
94480 28276, 70198 33126

**ಎರೆಹುಳು ಗೊಬ್ಬರ ಹಾಗೂ ಸಿಟಿ ಕಾಂಪೋಸ್ಟ್ ದೊರೆಯುತ್ತದೆ**
License No - JDA/F&PP/KAR/FE19-200282/2019-20
93411 71212, 81054 98069

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
70190 73080

**Introducing on-line English Classes from 6th Std to 10th std**
**Bruit Abacus & Vedic Maths**
Contact : 97390 66956

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**Wanted immediately**
experienced principal / leatuerer for science PCMB and pcmcs all subjects Attractive salary. walk in interview 3-8-2020@10.30 Am
M.E.S PU College
Anjeneya extension 9 th cross , Davanagere
9880436414

**SITE FOR SALE**
Site No.56, Door No.396/56, Opp KHB Clony, Near New Court, Harihara, Facing East & South Cornner.
98868 61122
79755 33911

**ಯಾವುದೇ ಕಂಪನಿಯ ಸೋಲಾರ್ ವಾಟರ್ ಹೀಟರ್ ಸರ್ವೀಸ್ ಹಾಗೂ ಎಕ್ಸ್‌ಚೇಂಜ್ ಆಫರ್‌ಗಾಗಿ**
ಸಂಪರ್ಕಿಸಿ:
97413 97006, 94487 83332

**Thanvi Biotechnology**
ನಮ್ಮಲ್ಲಿ ಅಣಬೆ ಬೇಸಾಯ ಮಾಡಲು ಎಲ್ಲಾ ವಿಧದ ಬೀಜಗಳು (oyster, milky, Button) 350 ಗ್ರಾಂ ಪ್ಯಾಕ್‌ಗಳಲ್ಲಿ ದೊರೆಯುತ್ತವೆ.
78928 74049

**ಮನೆ ಬಾಡಿಗೆಗೆ ದೊರೆಯುತ್ತದೆ**
ನಿಜಲಿಂಗಪ್ಪ ಬಡಾವಣೆಯಲ್ಲಿರುವ ಗ್ರೌಂಡ್ ಫ್ಲೋರ್ 1 ಬಿಹೆಚ್‌ಕೆ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
72599 21669

**ತಕ್ಷಣ ಬೇಕಾಗಿದ್ದಾರೆ**
Samson Distillery ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆಯ ಸುತ್ತಮುತ್ತಲಿನಲ್ಲಿ 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಲೇಡಿ ಸೆಕ್ಯೂರಿಟಿಗಳು ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ. ತಕ್ಷಣ ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
98455 24897, 90605 45500, 70199 48769

**ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ**
150ಕ್ಕೂ ಹೆಚ್ಚಿನ ಐಟಮ್‌ಗಳಿಗೆ ಕರ್ನಾಟಕದಾದ್ಯಂತ ಸಬ್ ಡಿಸ್ಟ್ರಿಬ್ಯೂಟರ್/ ಡಿಸ್ಟ್ರಿಬ್ಯೂಟರ್ / ಸ್ಟಾಕಿಸ್ಟ್ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
JD Consultancy
98459 54289

**ಸಾಲಗಳಿಗಾಗಿ ಸಂಪರ್ಕಿಸಿ**
ವಾರ್ಷಿಕ 8% ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ, ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ, ವ್ಯವಸಾಯ, ವ್ಯವಹಾರ, ಪರ್ಸನಲ್ ಲೋನ್, ಬಂಗಾರ ಸಾಲಗಳು, 60 ಪೈಸೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳಿಗೆ ಸಂಪರ್ಕಿಸಿ :
73385 80345

**ದೋಸೆ ಭಟ್ಟರು ಬೇಕಾಗಿದ್ದಾರೆ**
ಭಂಡಿ ಹೋಟೆಲ್
ಲೋಕಿಕೆರೆ ರೋಡ್
ಹೊಸ ನಾಯಕನಹಳ್ಳಿ ಕ್ರಾಸ್
97423 17477
95130 33363

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
Vidya Nagara, Nutan College Road, Davangere.
Web.:www.bhoomikamatrimony.com
7760316576, 9008055813

**ಮಾರಾಟಕ್ಕಿದೆ**
ವಾಹನಗಳ ವಾಯು ಮಾಲಿನ್ಯ ತಪಾಸಣಾ ಯಂತ್ರ ಮತ್ತು ಪರವಾನಿಗೆ ಮಾರಾಟಕ್ಕಿದೆ.
98445 03377
80732 47892

**ಮರು ಮದುವೆಗೆ**
ಗೃಹಿಣಿ ಆಗಲು ಬಯಸುವವರು ಜಂಗಮ ಅಥವಾ ಲಿಂಗಾಯತ ಕನ್ಯೆಯಾಗಿರಬೇಕು, ವಯಸ್ಸು 40 ರಿಂದ 45ರ ವಯಸ್ಸಿನ ವಿಧವೆ ಅಥವಾ ಮದುವೆ ಆಗದೇ ಇರುವ ಕನ್ಯೆಯಾಗಿರಬೇಕು. ಮಧ್ಯವರ್ತಿಗಳಿಗೆ ಅವಕಾಶ ಇರುವುದಿಲ್ಲ.
ಸಂಪರ್ಕ : 90086 96322

ನಮ್ಮಲ್ಲಿ ವಯೋ ವೃದ್ಧರಿಗೆ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು
ಸಂಪರ್ಕಿಸಿ: ಜ್ಯೋತಿ ನಿರಂತರ ಸೇವಾ ಚಾರಿಟಬಲ್ ಟ್ರಸ್ಟ್ (ರಿ)
76250 15036
8971192936

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧ, ಬೆಡ್‌ರಿಡನ್, ಮಾನಸಿಕ, ಅಂಗವಿಕಲ, ಬುದ್ದಿ ಮಾಂದ್ಯರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು.
ನಿಟ್ಟುವಳ್ಳಿ, ಹೊಸ ಬಡಾವಣೆ, ದಾವಣಗೆರೆ.
89711 92936
76250 15036

**ಕೇವಲ 30 ದಿನಗಳಲ್ಲಿ**
ನುರಿತ ಶಿಕ್ಷಕರಿಂದ ಕಂಪ್ಯೂಟರ್ ಮತ್ತು ಮೊಬೈಲ್ ರಿಪೇರಿ ತರಬೇತಿಯೊಂದಿಗೆ ಉಚಿತ ವಸತಿ ಮತ್ತು Latest Problem solved DVD kit ನೀಡಲಾಗುವುದು.
ಫ್ಯೂಚರ್ ಕೇರ್
99029 99615
99025 45387

**SOFTWARES AVAILABLE**
DO YOU NEED SCHOOL SOFTWARES, FOOD DELIVERY APP, E-COMMERCE MOBILE APPLICATION
CALL : 63616 62669

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮಾಂತ್ರಿಕ ಮೋಡಿ ಬೆಟ್ಟಪ್ಪ ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
ಮೊ. : 8971699826

**ಮನೆ ಬಾಡಿಗೆಗೆ ಇದೆ**
ಡೋ.ನಂ. 2287, 8ನೇ ಮೇನ್, ಎಂಸಿಸಿ ಎ ಬ್ಲಾಕ್, ಸಾಯಿಬಾಬಾ ಗುಡಿ ಹತ್ತಿರ, ಒಂದನೇ ಮಹಡಿಯಲ್ಲಿ ವಿಶಾಲವಾಗಿರುವ ಎರಡು ಬೆಡ್ ರೂಮಿನ ಮನೆ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
94816 49329


**ಕ್ರಾಸಿಂಗ್ ಮಾಡಿದ ತ್ಯಾಗದ ಗಿಡಗಳು ದೊರೆಯುತ್ತವೆ.**
ರೈತರಿಗೆ ಸರ್ಕಾರದಿಂದ ಸಹಾಯಧನ ಸಿಗುತ್ತದೆ. ಡೋರ್ ಡಿಲೆವರಿ ಕೊಡಲಾಗುವುದು.
ಸಂಪರ್ಕಿಸಿ: 9845801330

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, Duroflex Bed, ಕಿಟಕಿಗೆ Aluminium door ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜ ಪೇಟೆ, ದಾವಣಗೆರೆ
98445 81966

**WHOLESALE PRICE**
Thermometer (Made in India) 2 years warranty, All type mask, variety N95 original Mask, Sanitizer, Face shield, Pen Spray, Sanitizer stand, latex gloves, sodium, Rain card all covid 19 Related products available in wholesale price.
93530-55008
80882-10419

**HOMBAL e-Commerce**
ಬಂಡವಾಳ ಹೂಡಿಕೆದಾರರಿಗೆ ಅವಕಾಶ
ಒಂದು ಲಕ್ಷಕ್ಕೆ ಪ್ರತಿ ತಿಂಗಳು 4500 ರೂ.ರಂತೆ ಆದಾಯದ ದರ
ಸ್ಟಾಕ್ ಸೆಕ್ಯೂರಿಟಿ ಜೊತೆಗೆ ಅಗ್ರಿಮೆಂಟ್ ಮತ್ತು ಇನ್ನು ಇತರೆ ಭದ್ರತೆಯನ್ನು ನೀಡಲಾಗುವುದು.
ಆಸಕ್ತ ಹೂಡಿಕೆದಾರರು ಕರೆ ಮಾಡಿ
9008985112
ನಿಮ್ಮ ಹೂಡಿಕೆಯನ್ನು ನಾವು ಗೌರವಿಸುತ್ತೇವೆ

# ಸಂಘ-ಸಂಸ್ಥೆಗಳ ಕಾರ್ಯ ಸಾಧನೆ ತಿಳಿಯಲು ದಾಖಲೆ ಸಹಕಾರಿ



ದಾವಣಗೆರೆ, ಆ. 1 - ಸಂಘ, ಸಂಸ್ಥೆಗಳು ಮಾಡಿರುವ ಕೆಲಸ, ಕಾರ್ಯ ಯೋಜನೆ ಹಾಗೂ ಸಾಧನೆ ಕುರಿತು ದಾಖಲೆ ಮಾಡಿಟ್ಟುಕೊಳ್ಳುವುದು ಒಳ್ಳೆಯ ಕೆಲಸ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಹೇಳಿದರು.

ಅವರು ಜಿಲ್ಲಾ ಸರ್ಕಾರಿ ನೌಕರರ ಸಮುದಾಯ ಭವನದ ಮೇರಿ ದೇವಾಸಿಯ ಸಭಾಂಗಣದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾವು ಏನು ಮಾಡಿದ್ದೇವೆ ಎಂಬುದರ ಕುರಿತು ಅವಲೋಕನ ಮಾಡಿಕೊಳ್ಳಲು ಹಾಗೂ ಮುಂದಿನ ದಾರಿ ಕುರಿತು ಚರ್ಚಿಸಲು ದಾಖಲೆ ಇರಬೇಕಾಗಿದ್ದು, ಬೇರೆಯವರಿಗೆ ನಮ್ಮಯ ಕಾರ್ಯ ಸಾಧನೆ ತಿಳಿಯಲು ಸಹಕಾರಿಯಾಗಿದೆ ಎಂದರು.

ಕೊರೊನಾದಿಂದಾಗಿ ಬಹಳ ಕಠಿಣ ಪರಿಸ್ಥಿತಿ ಎದುರಾಗಿದ್ದು, ಮಹಾಮಾರಿಯನ್ನು ಎದುರಿಸಲು ಸನ್ನದ್ಧರಾಗಬೇಕಿದೆ. ಸರ್ಕಾರದ ಸೂಚನೆಯನ್ನು ಪಾಲಿಸುವ ಮೂಲಕ ನಿಯಂತ್ರಣಕ್ಕೆ ಎಲ್ಲರೂ ಸಹಕರಿಸಬೇಕಾಗಿದೆ ಎಂದರು.

ಸಂಘದ ಪದಾಧಿಕಾರಿಗಳ ಆಯ್ಕೆಯ ಪ್ರಥಮ ವರ್ಷದ ಹಿನ್ನೆಲೆಯಲ್ಲಿ 'ಪ್ರಗತಿಯ ಹಾದಿಯಲ್ಲಿ' ಎಂಬ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಸಂಘದ ಜಿಲ್ಲಾ ಅಧ್ಯಕ್ಷ ಬಿ. ಪಾಲಾಕ್ಷಿ, ಖಜಾಂಚಿ ಎಸ್. ಕಲ್ಲೇಶ್ವರಪ್ಪ, ಗೌರವಾಧ್ಯಕ್ಷ ಉಮೇಶ್, ಸಾಂಸ್ಕೃತಿಕ ಕಾರ್ಯದರ್ಶಿ ಪ್ರಕಾಶ್, ಮಾರುತಿ, ಶಿವಣ್ಣ, ಚಂದ್ರ ಶೇಖರ್ ಇನ್ನಿತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಉತ್ಸವಾಂಬ ದೇವಿಗೆ ಮಹಾಮಂಡಲಾಭಿಷೇಕ

ಪಿ. ಹಾಲೇಶಪ್ಪ (ವಸಂತ ರಸ್ತೆ) ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿ ದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 8ನೇ ವರ್ಷದ ಮಹಾಮಂಡಲಾಭಿಷೇಕವು ಇಂದಿನಿಂದ ಇದೇ ದಿನಾಂಕ 19ರವರೆಗಿನ ದೇವರಿಗೆ ಸರ್ವ ಭಕ್ತಾದಿಗಳಿಂದ ಮಹಾಭಿಷೇಕವಿರುತ್ತದೆ. ಕೊನೆಯ ದಿನದಂದು ಬೆಳಗಿನ ಜಾವದಿಂದ ತಾಯಿಗೆ ಮಹಾಪೂಜೆ ಹಾಗೂ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗವಿರುತ್ತದೆ.

# ಸತ್ತವರನ್ನೂ ಸತಾಯಿಸುವ ಕೊರೊನಾ..!

ಸಾಮಾನ್ಯವಾಗಿ ರೋಗಗಳು ರೋಗ ಬಂದವರನ್ನು ಕಾಡುತ್ತವೆ ಇಲ್ಲವೇ ಅವರ ಕುಟುಂಬದವರನ್ನು ಕಾಡುತ್ತವೆ. ಆದರೆ, ಕೊರೊನಾ ಎಂಬ ರೋಗ ಬಂದವರನ್ನೂ, ಬರದವರನ್ನು, ಸುಮ್ಮನಿದ್ದವರನ್ನೂ ಬಿಡದೆ ಕಾಡುತ್ತಿದೆ. ಸಾಲದು ಎಂಬಂತೆ ಸತ್ತವರನ್ನೂ ಸತಾಯಿಸುತ್ತಿದೆ!

ಯಾರಾದರೂ ಮೃತಪಟ್ಟಾಗ ಕೊನೆ ಬಾರಿ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸುವುದು ಪದ್ಧತಿ. ಆದರೆ, ಕೊರೊನಾ ಭುಗಿಲೆದ್ದ ನಂತರ ಸಾವಿನಲ್ಲೂ ಸಾಮಾಜಿಕ ಅಂತರವಾಗಿದೆ. ಸಾವಿನ ಮನೆಯವರು ತಾವೇ ನೋವುಂಡುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ.

ಇನ್ನು ಕೊರೊನಾ ಬಂದು ಸಾವನ್ನಪ್ಪಿದವರ ಅಂತ್ಯಕ್ರಿಯೆ ಶಾಸ್ತ್ರೋಕ್ತವಾಗಿ ನಡೆಯುವ ಸಾಧ್ಯತೆಗಳೇ ಇಲ್ಲ. ಇಲ್ಲೆಲ್ಲಾ ಐ.ಸಿ. ಎಂ.ಆರ್. ಮಾರ್ಗಸೂಚಿಗಳೇ ಮಂತ್ರಗಳು. ಇವರದು ಒಂದು ರೀತಿ ಅಂತ್ಯಕ್ರಿಯೆ ನಡೆದರೆ, ಕೊರೊನಾ ರಹಿತವಾಗಿ ಸಾಮಾನ್ಯ ಸಾವು ಕಂಡವರದು ಸಾಮಾಜಿಕ ಅಂತರದಲ್ಲಾದರೂ, ಶಾಸ್ತ್ರೋಕ್ತವಾಗಿ ಅಂತ್ಯಕ್ರಿಯೆ ನಡೆಯುತ್ತದೆ.

ಆದರೆ, ಕೆಲವೊಮ್ಮೆ ಇವೆರಡರ ನಡುವೆ ತ್ರಿಶಂಕು ನರಕವೂ ಸೃಷ್ಟಿಯಾಗುತ್ತದೆ. ಮೃತರ ಕೊರೊನಾ ಪರೀಕ್ಷೆ ನಡೆಸಿದಾಗ ಅದರ ವರದಿ ಬರದೇ ಸೋಂಕಿದೆಯೋ ಅಥವಾ ಇಲ್ಲವೋ ಎಂಬುದು ತಿಳಿಯದೇ ಅಂತ್ಯಕ್ರಿಯೆ ಹೇಗೆ ನಡೆಸಬೇಕು ಎಂಬುದೇ ಈ ತ್ರಿಶಂಕು ಸ್ಥಿತಿ.

ಇತ್ತೀಚೆಗೆ ತಿಪ್ಪಯ್ಯ (ಹೆಸರು ಬದಲಿಸಲಾಗಿದೆ) ಅವರ ಮಾವ ಅಸ್ವಸ್ಥರಾಗಿದ್ದರು. ಅಂದು ನೋಡಿದರೆ ಭಾನುವಾರದ ಲಾಕ್‌ಡೌನ್. ಇಷ್ಟರ ನಡುವೆಯೂ ಬೇರೆ ಊರಿನಲ್ಲಿದ್ದ ಮಾವನ ಕಾಳಜಿಗೆ ಅವರು ತೆರಳಿದರು. ಆದರೆ, ಅದೇ ದಿನ ಮಾವ ಹೃದಯಾಘಾತದಿಂದ ಕೊನೆಯುಸಿರೆಳೆದರು.

ಉಸಿರಾಟದ ಸಮಸ್ಯೆ ಇದ್ದ ಕಾರಣ ಅವರನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿತ್ತು, ಆದರೆ ವರದಿ ಇನ್ನೂ ಬಂದಿರಲಿಲ್ಲ. ಹೀಗಾಗಿ ವರದಿ ಬಂದ ನಂತರವೇ ಶವ ಹಸ್ತಾಂತರ ಮಾಡುವುದಾಗಿ ತಿಳಿಸಲಾಯಿತು. ನಿಧನದ ಒಂದು ದಿನ ಕಳೆದರೂ ವರದಿ ಬರಲಿಲ್ಲ.



ಮತ್ತೊಂದೆಡೆ ಅಂತ್ಯಕ್ರಿಯೆಗಾಗಿ ಹತ್ತಿರದ ಸಂಬಂಧಿಗಳು ಬೇರೆ ಊರುಗಳಿಂದ ಬಂದರು. ಅವರ ಪರಿಸ್ಥಿತಿಯೂ ಅತಂತ್ರವಾಯಿತು. ಇತ್ತ ಶವದ ಪರೀಕ್ಷಾ ವರದಿ ನಿರೀಕ್ಷೆ, ಅತ್ತ ಊರಿಂದ ಬಂದವರಿಗೆ ವಸತಿ ಸೌಲಭ್ಯ ಕಲ್ಪಿಸುವಷ್ಟರಲ್ಲಿ ತಿಪ್ಪಯ್ಯ ಹೈರಾಣಾಗಬೇಕಾಯಿತು. ಎರಡನೇ ದಿನ ಕಳೆಯುತ್ತಾ ಸಾಗಿದರೂ ವರದಿ ಇನ್ನೂ ಸ್ಪಷ್ಟವಾಗಲಿಲ್ಲ.

ಕೊನೆಗೆ ಐ.ಸಿ.ಎಂ.ಆರ್. ಮಾರ್ಗಸೂಚಿ ಪ್ರಕಾರ, ಕೊರೊನಾ ಸಂಹಿತೆಯ ರೀತಿಯಲ್ಲೇ ಅಂತ್ಯಸಂಸ್ಕಾರ ನಡೆಸಲು ಕುಟುಂಬದವರು ಒಪ್ಪಿದರು. ತಮ್ಮ ಸಂಪ್ರದಾಯದ ಪ್ರಕಾರ ಮೃತದೇಹ ಸುಡುವ ಬದಲು ಹೂಳಲು ಮುಂದಾದರು. ಇದಕ್ಕಾಗಿ ಆಳವಾದ ಗುಂಡಿ ತೆಗೆದಿದ್ದಾಯಿತು.

ಆದರೆ, ಅದೇ ವೇಳೆ ಕೊರೊನಾ ನೆಗೆಟಿವ್ ಆಗಿದೆ ಎಂಬ ಫಲಿತಾಂಶ ಬಂತು. ಇನ್ನೇನು ಸಂಪ್ರದಾಯದಂತೆ ಅಗ್ನಿಸ್ಪರ್ಷ ಮಾಡಲು ಚಿತೆ ಸಿದ್ಧಪಡಿಸಿಕೊಳ್ಳಲಾಯಿತು. ಆದರೆ, ಗುಂಡಿ ತೋಡಿದ ಮೇಲೆ ಹಾಗೆಯೇ ಬಿಡಬಾರದು, ಅದು

> **ಯಾರಾದರೂ ಮೃತಪಟ್ಟಾಗ ಕೊನೆ ಬಾರಿ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸುವುದು ಪದ್ಧತಿ. ಆದರೆ, ಕೊರೊನಾ ಭುಗಿಲೆದ್ದ ನಂತರ ಸಾವಿನಲ್ಲೂ ಸಾಮಾಜಿಕ ಅಂತರವಾಗಿದೆ. ಸಾವಿನ ಮನೆಯವರು ತಾವೇ ನೋವುಂಡುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ.**

ಅಪಶಕುನವಾಗುತ್ತದೆ ಎಂದು ಕುಟುಂಬದವರು ಚಿಂತೆಗೀಡಾದರು.

ಅಷ್ಟರಲ್ಲೇ ಇನ್ನೊಬ್ಬ ವ್ಯಕ್ತಿಯ ಶವ ಅಲ್ಲಿಗೆ ಬಂತು. ಅವರಿಗೆ ಗುಂಡಿಯನ್ನು ಹಸ್ತಾಂತರ ಮಾಡಿ ತಿಪ್ಪಯ್ಯ, ಚಿತೆಯ ಕಡೆ ತೆರಳಿದರು. ಎರಡು ದಿನಗಳ ಕಾಲ ಅಂತ್ಯಸಂಸ್ಕಾರದ ಹರಸಾಹಸ ಮುಗಿಸಿ ಮನೆಗೆ ಮರಳುವಾಗ, ಸಂಜೆ ಎಂಟು ಗಂಟೆ ದಾಟಿತ್ತು. ಮಾರ್ಗ ಮಧ್ಯದಲ್ಲಿ ಪೊಲೀಸರು ಇದೇಕೆ ಇಷ್ಟು ತಡ, ಲಾಕ್‌ಡೌನ್ ನಿಯಮ ಏಕೆ ಉಲ್ಲಂಘಿಸುತ್ತಿದ್ದೀರಿ ಎಂದು ಪ್ರಶ್ನಿಸಿದ್ದೂ ಆಯಿತು.

ಇದೆಲ್ಲವನ್ನೂ ಮುಗಿಸುವಷ್ಟರಲ್ಲಿ, ಮರಣೋತ್ತರ ಅಪರ ಕರ್ಮಗಳು, ಅವುಗಳನ್ನು ಸಾಮಾಜಿಕ ಅಂತರದಲ್ಲಿ ಮುಗಿಸುವಷ್ಟರಲ್ಲಿ ಇನ್ನಾವ ಸಮಸ್ಯೆಗಳು ಬರುತ್ತವೋ ಎಂಬ ಚಿಂತೆ ಈಗ ತಿಪ್ಪಯ್ಯಗೆ ಕಾಡುತ್ತಿದೆ.

ಜೀವನಪೂರ್ತಿ ನಮ್ಮ ಕಷ್ಟ - ಸುಖಗಳಿಗೆ ಆದವರು ಹಿರಿಯ ಜೀವಗಳು. ಅವರು ಕೈ ಹಿಡಿದು ನಮ್ಮನ್ನು ಬೆಳೆಸಿದರು. ಅವರು ನಮ್ಮಿಂದ ಇದುವರೆಗೂ ಏನೂ ಕೇಳಿರಲಿಲ್ಲ. ಆದರೆ, ಅಂಥವರು ಸತ್ತಾಗ ಸರಿಯಾದ ಅಂತ್ಯ ಸಂಸ್ಕಾರವೂ ಮಾಡಲಿಲ್ಲ ಎಂಬ ಕೊರಗು ಅಗಲಿದ ಚೇತನಗಳಲ್ಲಿ ಉಳಿದು ಬಿಟ್ಟರೆ? ಎಂಬ ಚಿಂತೆ ಸದ್ಯಕ್ಕೆ ತಿಪ್ಪಯ್ಯ ಅವರದ್ದು.

- ಎಸ್.ಎ. ಶ್ರೀನಿವಾಸ್

## ಸಾಧನ ಅಭಿವೃದ್ಧಿ ಟ್ರಸ್ಟ್‌ನಿಂದ ಗುರುವಂದನೆ




ದಾವಣಗೆರೆ, ಆ. 1 - ಕರ್ನಾಟಕ ಮಹಿಳಾ ಮತ್ತು ಮಕ್ಕಳ ಸಾಧನ ಅಭಿವೃದ್ಧಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಾಧನಾ ವೃದ್ಧಾಶ್ರಮದಲ್ಲಿ ಗುರುವಂದನಾ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿದ್ದ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಮಾತನಾಡಿ, ಕೊರೊನಾ ಬಗ್ಗೆ ಭಯಪಡುವ ಅಗತ್ಯವಿಲ್ಲ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಸುತ್ತಮುತ್ತಲ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಂಡರೆ ಕೊರೊನಾ ತಡೆಗಟ್ಟ ಬಹುದು, ಜೊತೆಗೆ ನಾವುಗಳು ದೂರದರ್ಶನ ನೋಡುವುದನ್ನು ಬಿಟ್ಟರೆ, ಕೊರೊನಾ ಭಯ ಕಡಿಮೆ ಆಗಬಹುದು ಎಂದು ತಮಾಷೆ ಮಾಡಿದರು.

ಟ್ರಸ್ಟ್‌ನ ರಾಜ್ಯಾಧ್ಯಕ್ಷರಾದ ಡಾ. ಪುಷ್ಪಲತಾ ಪವಿತ್ರರಾಜ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಸವರಾಜಪ್ಪ, ತುರ್ಚಘಟ್ಟ ಹಾಲೇಶ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ತುರ್ಚಘಟ್ಟ ಹೆಚ್.ಎಚ್ ಹಾಲೇಶ್, ನಿವೃತ್ತ ಶಿಕ್ಷಕಿ ಎಸ್. ಚಂದ್ರಪ್ರಭ, ಷರೀಫ್, ಗುರು, ಕೆ. ಶ್ವೇತಾ, ಕೆ. ನೇತ್ರಾವತಿ ಇನ್ನಿತರರಿದ್ದರು.

## ಮಹಾಂತೇಶ್ ಕಿಸಾನ್ ಕಾಂಗ್ರೆಸ್ ಉಪಾಧ್ಯಕ್ಷ



ದಾವಣಗೆರೆ, ಆ. 1 - ಜಿಲ್ಲಾ ಕಿಸಾನ್ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಹಳೇಕುಂದುವಾಡದ ಜೆ.ಆರ್. ಮಹಾಂತೇಶ್ ಅವರನ್ನು ನೇಮಕ ಮಾಡಲಾಗಿದೆ.


# ಅಂಧಾನುಕರಣೆ ಮತ್ತು ವಿಮೋಚನೆಯ ಮೇಲೆ ಚಿಂತನೆ ಸಾಗುತ್ತಿದೆ : ಮುರುಘಾ ಶ್ರೀ

ಚಿತ್ರದುರ್ಗ ಆ. 1 - ಸಂಪ್ರದಾಯದ ಮೇಲೆ ಸಮಾಜ ನಡೆಯಬೇಕೆಂಬ ಕಟ್ಟುಕಟ್ಟಳೆಗಳನ್ನು ವಿಧಿಸಿಕೊಂಡು ಬರಲಾಗಿದೆ. ಪ್ರಾಚೀನ ಕಾಲದಿಂದಲೂ ಆಚರಣೆಗಳು ನಡೆದುಕೊಂಡು ಬಂದಿವೆ. ಅಂಧಾನುಕರಣೆ ಮತ್ತು ವಿಮೋಚನೆಯ ಮೇಲೆ ಚಿಂತನೆ ಸಾಗುತ್ತಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಇಲ್ಲಿನ ಮುರುಘಾ ಮಠದಿಂದ ಶನಿವಾರ ನಡೆದ ಶ್ರಾವಣ ದರ್ಶನ 12ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಅಂಧಾನುಕರಣೆ ಮತ್ತು ಅದರ ವಿಮೋಚನೆ ವಿಷಯ ಕುರಿತು ಶರಣರು ಆಶೀರ್ವಚನ ನೀಡಿದರು.

ವಿಷಯವಿಲ್ಲದೆ ನಾವು ಯಾವುದೇ ಕಾರ್ಯಕ್ರಮ ನಡೆಸುವುದಿಲ್ಲ. ಹಲವಾರು ಸಭೆ-ಸಮಾರಂಭಗಳಲ್ಲಿ ನಿರ್ದಿಷ್ಟವಾದ ವಿಷಯ ಇಲ್ಲದಿದ್ದರೆ ಆ ಸಭೆ ಗೊಂದಲಮಯವಾಗುತ್ತದೆ. ವಿಚಾರವನ್ನು ನೀಡಿದರೆ ಪ್ರತಿಯೊಬ್ಬರು ಆ ವಿಷಯದ ಮೇಲೆ ಮಾತನಾಡುತ್ತಾರೆ. ಅಂಧಾನುಕರಣೆಯಲ್ಲಿ ಅನುಕರಣೆ ಇದೆ. ಇದರಲ್ಲಿ ಎರಡು ಬಗೆ.

**ನೇತ್ಯಾತ್ಮಕವಾಗಿರುವ ಅನುಕರಣೆ :** ಚಲನಚಿತ್ರಗಳನ್ನು ನೋಡಿ ಸಾವಿಗೆ ಶರಣಾಗಬಾರದು. ನಾವು ಪರೀಕ್ಷಾ ಭಯ ಬಿಡಿಸಲು ಸಾವಿರಾರು ವಿದ್ಯಾರ್ಥಿಗಳ ಜೊತೆ



ಸಂವಾದ ನಡೆಸಿದ್ದೇವೆ. ಸಂವಾದ ಸಂದೇಹ ನಿವಾರಿಸುತ್ತದೆ. ಸಂದೇಹಗಳು ಜೀವನದಲ್ಲಿ ಇರಬಾರದು. ಸಂವಾದಗಳಿಗೆ ಅನುಭವ ಮಂಟಪ ಮುಕ್ತ ವಿಶ್ವವಿದ್ಯಾಲಯವಾಗಿತ್ತು. ನಾವು ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡುವಾಗ ಭೂತ ಪ್ರೇತಗಳಿಗೆ ಹೆದರಬಾರದು ಎಂದು ಹೇಳಿದ್ದೇವೆ.

**ಧನಾತ್ಮಕವಾಗಿರುವ ಅನುಕರಣೆ :** ಇಲ್ಲಿ ಅತ್ಯಂತ ಸಕಾರಾತ್ಮಕವಾಗಿರುವ ಅನುಕರಣೆ ನೋಡಬಹುದು. ದಾರ್ಶನಿಕರು ಜೀವನ್ಮುಖಿ ಪ್ರಯೋಗಗಳನ್ನು ಮಾಡಿದ್ದಾರೆ. ಬಂಗಾರದ ಮನುಷ್ಯ ಒಂದು ಸಕಾರಾತ್ಮಕವಾಗಿರುವ ಸಿನೆಮಾ. ದುಡಿಮೆಯ ಬಗೆಗೆ ಆಸಕ್ತಿ ಹುಟ್ಟಿಸಿದಂತಹ ಸಿನೆಮಾ ಅದು. ಇಂತವುಗಳಿಂದ ಧನಾತ್ಮಕವಾಗಿ ಯೋಚಿಸಬೇಕು. ಬಸವಣ್ಣ, ಬುದ್ಧ, ಗಾಂಧೀಜಿ ಮೊದಲಾದವರು ಧನಾತ್ಮಕವಾದ ಅನುಕರಣೆ ಮಾಡಿದರು. ಗಾಂಧೀಜಿ ಸತ್ಯಹರಿಶ್ಚಂದ್ರ ನಾಟಕ ನೋಡಿ ಸತ್ಯಕ್ಕೆ ಪ್ರಭಾವಿತರಾದರು. ನೋಡಿದವರೆಲ್ಲರು ಗಾಂಧೀಜಿ ಆಗಲು ಸಾಧ್ಯವಿಲ್ಲ. ಇಲ್ಲಿ ಸಮರ್ಪಣಾಭಾವದ ಕೊರತೆ ಎದ್ದುಕಾಣುತ್ತದೆ. ಜನರು ಸಿನೆಮಾ ಮತ್ತು ಧಾರಾವಾಹಿಗಳನ್ನು ಮನರಂಜನೆಗಾಗಿ ನೋಡುತ್ತಾರೆ. ಶ್ರವಣಕುಮಾರನ ಪಿತೃಭಕ್ತಿಯನ್ನು ಗಾಂಧೀಜಿ ನೋಡುತ್ತಾರೆ. ಹಿರಿಯರ ಬಗ್ಗೆ ಗೌರವ ಇರಬೇಕೆಂದು ಗಾಂಧೀಜಿ ನೋಡಿ ಕಲಿಯುತ್ತಾರೆ. ಜನರು ಬದುಕನ್ನು ಧನಾತ್ಮಕವಾಗಿ ನೋಡಬೇಕು.

ದಾವಣಗೆರೆಯ ಶಿವಯೋಗಾಶ್ರಮದಲ್ಲಿ ನಡೆದ ಶರಣ ಸಂಸ್ಕೃತಿ ಉತ್ಸವದಲ್ಲಿ ದೇವದಾಸಿಯರ ಗಂಟುಕಟ್ಟಿದ ಕೂದಲುಗಳಿಗೆ ಕತ್ತರಿ ಹಾಕಿ ಕತ್ತರಿಸಲಾಯಿತು. ಮಾಯಕೊಂಡದ ಹತ್ತಿರವಿರುವ ಮದಕರಿ ನಾಯಕರ ಸಮಾಧಿಗೆ ಯಾರೋ ವಾಮಾಚಾರ ಮಾಡಿದ್ದೂ ಇದೆ. ಮದಕರಿ ನಾಯಕರು ಕೆರೆ ಕಟ್ಟೆ ಕಟ್ಟಿ ಉತ್ತಮ ಆಡಳಿತ ನೀಡಿದವರು. ಅವರ ಸಮಾಧಿ ಹತ್ತಿರ ಹೋಗಿ ಅವರಿಗೆ ಅಗೌರವ ತೋರಿಸಬಾರದು ಎಂದು ಖುದ್ದಾಗಿ ನಾನೇ ಹೋಗಿ ಜಾಗೃತಿ ಮೂಡಿಸಿ ಬಂದಿದ್ದೇನೆ. ಅಮಾವಾಸ್ಯೆಯಲ್ಲಿ ಮಧ್ಯರಾತ್ರಿ ವಾಮಾಚಾರ ಮಾಡಲು ಚಿಕ್ಕಮಕ್ಕಳನ್ನು ಅಪಹರಿಸಿ ಬಲಿ ಕೊಡುವ ಅಮಾನವೀಯ ಘಟನೆಗಳು ನಡೆದಿವೆ. ಗುಲ್ಬರ್ಗ ಜಿಲ್ಲೆಯ ಆ ಗ್ರಾಮಕ್ಕೆ ಕೆಲವು ಚಿಂತಕರೊಂದಿಗೆ ಹೋಗಿ ಜಾಗೃತಿ ಮೂಡಿಸಿ ಬಂದಿದ್ದೇವೆ ಎಂದು ಶರಣರು ವಿವರಿಸಿದರು.

## ಟಿಪ್ಪು ಸುಲ್ತಾನ್ ಕುರಿತ ಅಧ್ಯಾಯ ಕೈ ಬಿಡುವ ನಿರ್ಧಾರಕ್ಕೆ ವಿರೋಧ



ದಾವಣಗೆರೆ, ಆ.1- ರಾಜ್ಯ ಸರ್ಕಾರ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಕುರಿತಂತೆ ಏಳನೆ ತರಗತಿ ಪಠ್ಯ ಪುಸ್ತಕದಲ್ಲಿರುವ ಅಧ್ಯಾಯವನ್ನು ಕೈ ಬಿಡಲು ನಿರ್ಧರಿಸಿರುವುದನ್ನು ಹಜರತ್ ಟಿಪ್ಪು ಸುಲ್ತಾನ್ ಷಹೀದ್ ಟ್ರಸ್ಟ್ ಖಂಡಿಸಿದೆ.

ಈ ನಾಡಿಗೆ ರೇಷ್ಮೆ ಪರಿಚಯಿಸಿರುವ, ಕನ್ನಂಬಾಡಿ ಕಟ್ಟೆಗೆ ಅಡಿಪಾಯ ಹಾಕಿರುವ ಕೀರ್ತಿ ಟಿಪ್ಪುಗೆ ಸಲ್ಲುತ್ತದೆ. ಇಂತಹ ಮಹಾನ್ ನಾಯಕನ ಹೋರಾಟದ ಅಧ್ಯಯನವನ್ನು ಪಠ್ಯಪುಸ್ತಕದಿಂದ ಕೈಬಿಡಲು ನಿರ್ಧರಿಸಿರುವುದು ಸರಿಯಲ್ಲ. ಸರ್ಕಾರ ಕೂಡಲೇ ತಮ್ಮ ನಿರ್ಧಾರವನ್ನು ವಾಪಸ್ ಪಡೆಯಬೇಕು ಎಂದು ಉಪವಿಭಾಗಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ನೀಡಿದ್ದಾರೆ.

ಟ್ರಸ್ಟ್‌ನ ಅಧ್ಯಕ್ಷ ಆದಿಲ್ ಖಾನ್, ಪದಾಧಿಕಾರಿಗಳಾದ ಅಖೀಬ್ ಜಾವಿದ್, ಸೈಯದ್ ಅಹ್ಮದ್, ಮಹಬೂಬ್ ಬಾಷ, ಸಮೀರ್ ಹಸನ್, ಸೈಯದ್ ಮುಬಾರಕ್ ಹಾಗೂ ಇನ್ನಿತರರು ಮನವಿ ಸಲ್ಲಿಸಿದರು.

## ಯಕ್ಷವೇಷ ಫೋಟೋ ಸ್ಪರ್ಧೆ

ದಾವಣಗೆರೆ, ಆ.1- ಕಲಾಕುಂಚ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆ ಆಶ್ರಯದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಯಕ್ಷವೇಷ ಉಚಿತ ಫೋಟೋ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ.ಆಸಕ್ತರು ಯಕ್ಷಗಾನ ವೇಷಧರಿಸಿ ಫೋಟೋ ತೆಗೆದು 9538732777 ನಂಬರ್‌ನ ವಾಟ್ಸ್‌ಪ್‌ಗೆ ಕಳುಹಿಸುವುದು. ಇದೇ ದಿನಾಂಕ 15 ಕೊನೆಯ ದಿನವಾಗಿದೆ.ವಿವರಕ್ಕೆ ನೀಲಾವರ ಭಾಸ್ಕರ್ ನಾಯಕ್ (9483070905), ಹಟ್ಟಿಯಂಗಡಿ ಆನಂದ ಶೆಟ್ಟಿ (9901770315) ಅವರನ್ನು ಸಂಪರ್ಕಿಸಲು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ಓದುಗರ ಪತ್ರ

### ಕೊರೊನಾ ವಾರಿಯರ್ಸ್‌ಗಳ ಕಾಳಜಿಗೆ ಹ್ಯಾಟ್ಸಾಪ್

ಮಾನ್ಯರೇ,

ಎಂಸಿಸಿ ಬಿ ಬ್ಲಾಕ್‌ನಲ್ಲಿ ನಾವು ವಾಸವಾಗಿದ್ದು, ವ್ಯಕ್ತಿಯೊಬ್ಬರಿಗೆ ಕೊರೊನಾ ಪಾಸಿಟಿವ್ ಬಂದ ಹಿನ್ನೆಲೆಯಲ್ಲಿ ಆಸ್ಪತ್ರೆ ಸಿಬ್ಬಂದಿ ವರ್ಗದವರು ಆಗಮಿಸಿ ರಸ್ತೆಯ ಎಲ್ಲರನ್ನೂ ವಿಚಾರಿಸಿ, ಸೋಂಕಿತ ವ್ಯಕ್ತಿಯನ್ನು ಆಂಬ್ಯುಲೆನ್ಸ್‌ನಲ್ಲಿ ಕರೆದುಕೊಂಡು ಹೋದರು.

ಮಾರನೆ ದಿನ ರಸ್ತೆಯಲ್ಲಿ ಕಬ್ಬಿಣದ ಗೇಟ್‌ಗಳನ್ನು ಎರಡೂ ಬದಿ ಹಾಕಿ ಸೀಲ್‌ಡೌನ್ ಮಾಡಿ ಎಲ್ಲರೂ ಎಚ್ಚರಿಕೆಯಿಂದಿರುವಂತೆ ತಿಳಿಸಿದರು. ನರ್ಸ್ ಪ್ರತಿ ದಿನವೂ ಬಂದು ಸೀಲ್‌ಡೌನ್ ಮಾಡಿದ ಮನೆಗಳಲ್ಲಿ ಆರೋಗ್ಯ ವಿಚಾರಿಸುತ್ತಾರೆ. ಇದು ನಮ್ಮ ದಾವಣಗೆರೆಯ ಚಿತ್ರಣ. ನಮ್ಮ ದೇಶದ ಚಿತ್ರಣವೂ ಹೌದು.

ಆದರೆ ಅಮೇರಿಕಾದಲ್ಲಿ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಕ್ಯಾಲಿಫೋರ್ನಿಯಾದಲ್ಲಿ ನನ್ನ ಮಗ ಕೆಲಸ ಮಾಡುತ್ತಿದ್ದು, ಅವರ ಅಕ್ಕಪಕ್ಕದ ಮನೆಯವರಿಗೆ ಕೊರೊನಾ ಸೋಂಕು ತಗುಲಿದ್ದು, ಅವರೇ ಆಸ್ಪತ್ರೆಗೆ ಕರೆದೊಯ್ದರೂ ಕೂಡ ಇಲ್ಲಿ ಜಾಗ ಇಲ್ಲ ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳುತ್ತಿರುವರಂತೆ.

ನೀವೇ ಯೋಚಿಸಿ ಎಲ್ಲಿಯ ಭಾರತ, ಎಲ್ಲಿಯ ಅಮೇರಿಕಾ... ನಾಗರಿಕರ ಪರ ಇಷ್ಟು ಕಾಳಜಿವಹಿಸುತ್ತಿರುವ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಪೌರ ಕಾರ್ಮಿಕರು, ಅಧಿಕಾರಿ ವರ್ಗದವರಿಗೆ ಅನಂತಾನಂತ ಧನ್ಯವಾದಗಳು.

-ಪಾಳೇಗಾರ್ ನಿರ್ಮಲ ಹಂಜಿ
ವಿಶ್ರಾಂತ ಉಪನ್ಯಾಸಕರು, ದಾವಣಗೆರೆ.

### ಹಣ್ಣು ಮಾಗುವಿಕೆಗೆ ರಾಸಾಯನಿಕ ಪೌಡರ್ ಬಳಕೆ

ಮಾನ್ಯರೇ,

ಹಣ್ಣು ಮಾರುವವರು ರಾವಸಾಯನಿಕ ಪೌಡರ್ ಬಳಸಿ ಬಾಳೆಹಣ್ಣು, ಮಾವಿನ ಹಣ್ಣು, ಸಪೋಟಾ ಹಣ್ಣು ಸೇರಿದಂತೆ ಇತರೆ ಹಣ್ಣುಗಳನ್ನು ಕೃತಕವಾಗಿ ಮಾಗಿಸುತ್ತಿದ್ದು, ಜನರು ಈ ವಿಷಮಯ ಹಣ್ಣನ್ನು ಸೇವಿಸುತ್ತಿದ್ದಾರೆ.

ಸಂಬಂಧ ಪಟ್ಟವರು ಈ ಬಗ್ಗೆ ನಿಗಾ ವಹಿಸುವ ಮೂಲಕ ಜನರ ಆರೋಗ್ಯವನ್ನು ಕಾಪಾಡುವಂತೆ ಮನವಿ.

- ಪ್ರೊ॥ ಡಿ.ಸತ್ಯನಾರಾಯಣ, ದಾವಣಗೆರೆ.

## ಪಂಚಮಸಾಲಿ ಪೀಠದಲ್ಲಿ 'ಯಾತ್ರಿ ನಿವಾಸ'ಕ್ಕೆ ಚಾಲನೆ



ಮಲೇಬೆನ್ನೂರು, ಆ.1- ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಶ್ರಾವಣ ಸೋಮವಾರದಂದು ಯಾತ್ರಿ ನಿವಾಸ ಕಟ್ಟಡ ಕಾಮಗಾರಿಗೆ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪೂಜಾ ಕೈಂಕರ್ಯಗಳು ಜರುಗಿದವು.

ಈ ಸಂದರ್ಭದಲ್ಲಿ ಹರಿಹರ ತಾಲ್ಲೂಕು ಸಮಾಜದ ಅಧ್ಯಕ್ಷ ಗುಳದಹಳ್ಳಿ ಶೇಖರಪ್ಪ, ದಾವಣಗೆರೆ ಸಮಾಜದ ಜಿಲ್ಲಾ ಉಪಾಧ್ಯಕ್ಷ ಎಂ. ದೊಡ್ಡಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಶೀನಾಥ್, ಶಿಗ್ಗಾಂವ್ ತಾಲ್ಲೂಕು ಸಮಾಜ ಮುಖಂಡ ಶ್ರೀಕಾಂತ ದುಂಡಿಗೌಡರು, ಯುವ ಘಟಕ ರಾಜ್ಯ ಸಂಘಟನಾ ಕಾರ್ಯದರ್ಶಿ ಕರಿಬಸಪ್ಪ, ಗುತ್ತಿಗೆದಾರ ದೇವರ ಬೆಳಕೆರೆಯ ಸುರೇಶ ಗೌಡರು, ಹರಿಹರ ತಾಲ್ಲೂಕು ನಿರ್ದೇಶಕ ಶಿವಪುತ್ರಪ್ಪ ಕಮಲಾಪುರ, ಶ್ರೀಪೀಠದ ವ್ಯವಸ್ಥಾಪಕ ಶಿವಣ್ಣ ಬಂಕಾಪುರ ಮತ್ತಿತರರು ಉಪಸ್ಥಿತರಿದ್ದರು.

## ರವೀಂದ್ರನಾಥ್ ನಗರ ಹಿತರಕ್ಷಣಾ ಸಮಿತಿ ಉದ್ಘಾಟನೆ



ದಾವಣಗೆರೆ, ಆ.1- ಎಸ್.ಎ. ರವೀಂದ್ರನಾಥ್ ನಗರ ಹಿತರಕ್ಷಣಾ ಸಮಿತಿಯನ್ನು ಶಾಸಕ ಎಸ್.ಎ. ರವೀಂದ್ರನಾಥ್ ಹಾಗೂ 41ನೇ ವಾರ್ಡ್ ಸದಸ್ಯೆ ಗೀತಾ ನಾಗಪ್ಪ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎನ್. ಸಿದ್ದರಾಮಪ್ಪ ವಹಿಸಿದ್ದರು.

## ಬ್ರ್ಯಾಂಡೆಡ್ ಗಾರ್ಮೆಂಟ್ಸ್, ಫ್ಯಾನ್ಸಿ ಸೀರೆಗಳ ಪ್ರದರ್ಶನ



ದಾವಣಗೆರೆ ಆ-1, ನಗರದ ತೊಗಟವೀರ ಕಲ್ಯಾಣ ಮಂಟಪದಲ್ಲಿ ಭಾರತದ ಅತೀ ದೊಡ್ಡ ರಿಯಾಯಿತಿ ಕೊಡುಗೆಯೆಂದು ಪರಿಗಣಿಸಲ್ಪಡುವ ಬ್ರ್ಯಾಂಡೆಡ್ ಗಾರ್ಮೆಂಟ್ಸ್ ಮತ್ತು ಫ್ಯಾನ್ಸಿ ಸೀರೆಗಳು ನೇರವಾಗಿ ಫ್ಯಾಕ್ಟರಿಯ ಮುಖಾಂತರ ರಿಟೇಲ್ ಗ್ರಾಹಕರಿಗೆ ಶೇ.90ರವರೆಗೆ ಭಾರೀ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇದೇ ದಿನಾಂಕ 4ರಂದು ಕೊನೆಗೊಳ್ಳಲಿದೆ.

ಈ ಮಾರಾಟ ಮೇಳದಲ್ಲಿ 20 ಸಾವಿರಕ್ಕಿಂತಲೂ ಅಧಿಕ ನಮೂನೆಯ ಪುರುಷರ ಹಾಗೂ ಮಹಿಳೆಯರ ಸಿದ್ಧ ಉಡುಪುಗಳ ದಾಸ್ತಾನು ಇವೆ. ವಿಶೇಷ ಕೌಂಟರ್‌ಗಳಲ್ಲಿ ಜೆಂಟ್ಸ್ ಬ್ರ್ಯಾಂಡೆಡ್ ಶರ್ಟ್, ಆಫೀಸ್‌ವೇರ್ ಶರ್ಟ್, ಬ್ರ್ಯಾಂಡೆಡ್ ಕಾಟನ್ ಟ್ರೌಸರ್ಸ್, ಟ್ರ್ಯಾಕ್ ಪ್ಯಾಂಟ್, ಬರ್ಮುಡಾ, ಲೇಡಿಸ್ ಜೀನ್ಸ್, ಪ್ರಿಂಟೆಡ್ ಕುರ್ತಿ, ಲೇಡಿಸ್ ಸ್ಕರ್ಟ್ಸ್, ಫ್ಯಾನ್ಸಿ ಲೇಡಿಸ್ ಸ್ಕರ್ಟ್ಸ್, ಪಲಾಜೊ ಇತ್ಯಾದಿಗಳ ಸಂಗ್ರಹವಿದೆ. ಪ್ರತಿಯೊಂದು ಐಟಂನ ಬೆಲೆ ಕೇವಲ ರೂ.200 ದರ ನಿಗದಿಪಡಿಸಲಾಗಿದೆ.

ಮಹಿಳೆಯರಿಗಾಗಿ ಮಲ್ಟಿ ಬ್ರ್ಯಾಂಡೆಡ್ ಡಿಸೈನರ್ ಕುರ್ತೀಸ್ ಬ್ರ್ಯಾಂಡ್‌ಗಳಾದ ಶ್ರೀ, ಎಲಿನಿ, ಗ್ಲೋಬಲ್, ಡೇಸಿ, ಜೈಸಿ ಬ್ರ್ಯಾಂಡ್‌ಗಳು ಇಲ್ಲಿವೆ. ಉನ್ನತ ವರ್ಗದ ಫ್ಯಾಷನ್ ಮಹಿಳೆಯರ ಕುರ್ತೀಸ್ ವರ್ಷಪೂರ್ತಿ ದೊಡ್ಡ ದೊಡ್ಡ ಶೋ ರೂಂ ಔಟ್‌ಲೆಟ್‌ಗಳಲ್ಲಿ 1,000ರೂ. ನಿಂದ 4,500 ರೂ. ವರೆಗೆ ಮಾರಾಟವಾಗುವ ಕುರ್ತೀಸ್‌ಗಳು ಇಲ್ಲಿ ಕೇವಲ ರೂ.450 ರಿಂದ ರೂ.600ವರೆಗಿನ ದರದಲ್ಲಿ ಲಭ್ಯವಿವೆ.

ಅದಲ್ಲದೇ, ಸಾವಿರಾರು ಬಗೆಬಗೆಯ ಸೀರೆಗಳು, ಕಾಟನ್ ಪ್ರಿಂಟೆಡ್ ಸೀರೆಗಳು, ಕಾಟನ್ ಜರಿ ಬಾರ್ಡರ್ ಸೀರೆಗಳು, ಲಿಟ್‌ಪಲ್ ಸೀರೆ, ಬನಾರಸ್ ಇತ್ಯಾದಿ ಕೇವಲ ರೂ.150 ರಿಂದ 300ರೂ. ದರದಲ್ಲಿ ಗ್ರಾಹಕರು ಖರೀದಿಸಬಹುದಾಗಿದೆ.

## ಪ್ಲಾಸ್ಟಿಕ್ ಧ್ವಜ ಉಪಯೋಗಿಸದಂತೆ ಮನವಿ

ದಾವಣಗೆರೆ, ಆ.1- ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಪರಿಸರ ಸ್ನೇಹಿಯಾಗಿ ಆಚರಿಸಲು ಹಾಗೂ ಪರಿಸರ ಸಂರಕ್ಷಣೆಗಾಗಿ ಪ್ಲಾಸ್ಟಿಕ್ ಧ್ವಜಗಳನ್ನು ಉಪಯೋಗಿಸದಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಾವಣಗೆರೆ ಪರಿಸರ ಅಧಿಕಾರಿ ಕೆ.ಬಿ. ಕೊಟ್ರೇಶ್ ಮನವಿ ಮಾಡಿದ್ದಾರೆ.

ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಪರಿಸರ ಸ್ನೇಹಿಯಾಗಿ ಆಚರಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಜಿಲ್ಲೆಯಾದ್ಯಂತ ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡದಂತೆ ಹಾಗೂ ಉಪಯೋಗಿಸದಂತೆ ಕೋರ ಲಾಗಿದೆ. ಮಾರಾಟ ಮಾಡುವವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

## ಜಿಎಂಐಟಿಯಲ್ಲಿ ದಾಖಲೆ ಉದ್ಯೋಗ ನೇಮಕಾತಿ : 300 ಆಯ್ಕೆ

ದಾವಣಗೆರೆ, ಆ.1- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವಿವಿಧ ವಿಭಾಗಗಳಿಂದ ಅಂತಿಮ ವರ್ಷದ 300 ವಿದ್ಯಾರ್ಥಿಗಳು ಉದ್ಯೋಗ ನೇಮಕಾತಿಯಲ್ಲಿ ಆಯ್ಕೆಯಾಗಿದ್ದು, ಹಲವರು ಕೊನೆಯ ಸುತ್ತಿನ ಫಲಿತಾಂಶದ ನಿರೀಕ್ಷೆಯಲ್ಲಿದ್ದಾರೆ.

ಪ್ರಸ್ತುತ ಶೈಕ್ಷಣಿಕ ವರ್ಷದ ದಾಖಲೆಯ ಉದ್ಯೋಗ ನೇಮಕಾತಿಯಾಗಿದ್ದು, ಅತಿ ಹೆಚ್ಚು ಅಂದರೆ 10 ಲಕ್ಷ ವಾರ್ಷಿಕ ಸಂಬಳದ ಪ್ಯಾಕೇಜನ್ನು ಕಂಪನಿ ನೀಡಿದೆ. ಈ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಉದ್ಯೋಗಾವಕಾಶವನ್ನು ಒದಗಿಸಿದ್ದು, ಒಟ್ಟು 53 ಕಂಪನಿಗಳಿಂದ ಉದ್ಯೋಗ ಆನ್‌ಲೈನ್ ಮೂಲಕ ಸಂದರ್ಶನ ನಡೆಸಿ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಂಡಿದ್ದಾರೆ.

ಪ್ರತಿಷ್ಠಿತ ಕಂಪನಿಗಳಾದ ಬಾಷ್, ವಿಪ್ರೋ, ಇನ್‌ಫೋಸಿಸ್, ಟಿಸಿಎಸ್ ಸೇರಿದಂತೆ ಅನೇಕ ಕಂಪನಿಗಳು ಕ್ಯಾಂಪಸ್ ಸಂದರ್ಶನವನ್ನು ನಡೆಸಿದ್ದು, ಇದೇ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಇನ್ನೂ ಹಲವು ಕಂಪನಿಗಳು ಬರಲಿದ್ದು, ವಿದ್ಯಾರ್ಥಿಗಳಿಗೆ ಹೆಚ್ಚೆಚ್ಚು ಅವಕಾಶವನ್ನು ನೀಡಲಿವೆ ಎಂದು ಮಹಾವಿದ್ಯಾಲಯದ ಉದ್ಯೋಗ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ಟಿ.ಆರ್. ತೇಜಸ್ವಿ ಕಟ್ಟಿಮನಿ ತಿಳಿಸಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್, ಆಡಳಿತಾಧಿಕಾರಿ ವೈ.ಯು. ಸುಭಾಷ್‌ಚಂದ್ರ ಹಾಗೂ ವಿಭಾಗದ ಮುಖ್ಯಸ್ಥರುಗಳು ಅಭಿನಂದಿಸಿದ್ದಾರೆ.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್)
Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399



**ಮೆಕ್ಕೆಜೋಳದ ಪೈರು**

ದಾವಣಗೆರೆ ಟಿ.ವಿ ಸ್ಟೇಷನ್ ಕೆರೆ ಹಿಂಭಾಗದಲ್ಲಿ ಎಂಥವರ ಕಣ್ಣು ಮನಸೂರೆಗೊಳ್ಳುವಂತೆ ಹುಲುಸಾಗಿ ಬೆಳೆದ ಮೆಕ್ಕೆಜೋಳದ ಪೈರು.

## ಮಲೇಬೆನ್ನೂರಿನಲ್ಲಿ ಇಬ್ಬರಿಗೆ ಸೋಂಕು

ಮಲೇಬೆನ್ನೂರು, ಆ.1- ಪಟ್ಟಣದಲ್ಲಿ ಶನಿವಾರ ಇಬ್ಬರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಸೋಂಕಿತರ ಸಂಖ್ಯೆ 35ಕ್ಕೆ ಏರಿಕೆಯಾಗಿದೆ. ಇಲ್ಲಿನ ನಂದಿಗುಡಿ ರಸ್ತೆಯ 21ನೇ ವಾರ್ಡ್‌ನ ನಿವಾಸಿ 57 ವರ್ಷದ ಪತ್ರಕರ್ತರೊಬ್ಬರಿಗೆ ಮತ್ತು ಬೀರಲಿಂಗೇಶ್ವರ ಸೊಸೈಟಿ ಸಮೀಪ 22ನೇ ವಾರ್ಡ್‌ನ ನಿವಾಸಿ 38 ವರ್ಷದ ವ್ಯಕ್ತಿಗೆ ಸೋಂಕು ತಗುಲಿದೆ.

ಎರಡೂ ಮನೆಗಳನ್ನು ಸೀಲ್ ಡೌನ್ ಮಾಡಿ, ಕುಟುಂಬದವರನ್ನು ಹೋಂ ಕ್ವಾರಂಟೈನ್ ಮಾಡಲಾಗಿದೆ. ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್, ಉಪತಹಶೀಲ್ದಾರ್ ಆರ್. ರವಿ, ವಾರ್ಡ್ ಸದಸ್ಯ ಯುಸೂಫ್, ಮಾಸಣಗಿ ಶೇಖರಪ್ಪ, ಪುರಸಭೆ ಆರೋಗ್ಯಾಧಿಕಾರಿ ಗುರುಪ್ರಸಾದ್ ಹಾಜರಿದ್ದರು.

# ಜುಲೈ : 87,422 ಕೋ. ರೂ. ಜಿ.ಎಸ್.ಟಿ. ಸಂಗ್ರಹ

ನವದೆಹಲಿ, ಆ. 1 – ಜುಲೈ ತಿಂಗಳಲ್ಲಿ ದೇಶದ ಜಿ.ಎಸ್.ಟಿ. ಸಂಗ್ರಹ 87,422 ಕೋಟಿ ರೂ.ಗಳಿಗೆ ಕುಸಿದಿದೆ. ಜೂನ್ ತಿಂಗಳಿನ ಜಿ.ಎಸ್.ಟಿ. ಸಂಗ್ರಹ 90,917 ಕೋಟಿ ರೂ. ಆಗಿತ್ತು ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಜಿ.ಎಸ್.ಟಿ. ಸಂಗ್ರಹದಲ್ಲಿ ಶೇ.14ರ ಇಳಿಕೆಯಾಗಿದೆ. ಕಳೆದ ವರ್ಷ ಜುಲೈನಲ್ಲಿ 1.02 ಲಕ್ಷ ಕೋಟಿ ರೂ.ಗಳ ಜಿ.ಎಸ್.ಟಿ. ಸಂಗ್ರಹವಾಗಿತ್ತು.

ಜುಲೈನಲ್ಲಿ 16,147 ಕೋಟಿ ರೂ.ಗಳ ಸಿಜಿಎಸ್‌ಟಿ, 21,418 ಕೋಟಿ ರೂ.ಗಳ ಎಸ್‌ಜಿಎಸ್‌ಟಿ, 42,592 ಕೋಟಿ ರೂ.ಗಳ ಐಜಿಎಸ್‌ಟಿ ಹಾಗೂ 7,265 ಕೋಟಿ ರೂ.ಗಳ ಸೆಸ್ ಸಂಗ್ರಹವಾಗಿದೆ.

2019ರ ಜುಲೈಗೆ ಹೋಲಿಸಿದರೆ ಎಲ್ಲ ಪ್ರಮುಖ ರಾಜ್ಯಗಳಲ್ಲಿ ಜಿಎಸ್‌ಟಿ ಸಂಗ್ರಹ ಶೇ.15-20ರಷ್ಟು ಕಡಿಮೆಯಾಗಿದೆ.

ಜೂನ್ ಹಾಗೂ ಜುಲೈ ತಿಂಗಳಲ್ಲಿ ಸಂಗ್ರಹವಾದ ತೆರಿಗೆಯನ್ನು ಪರಿಗಣಿಸಿದಾಗ ಕಳೆದ ವರ್ಷದ ಶೇ.85-90ರಷ್ಟು ತೆರಿಗೆ ಸಂಗ್ರಹವಾಗುತ್ತಿದ್ದು, ತೆರಿಗೆ ಸಂಗ್ರಹ ಸ್ಥಿರವಾಗುತ್ತಿರುವುದು ಕಂಡು ಬರುತ್ತದೆ ಎಂದು ಪಿ. ಡಬ್ಲ್ಯೂ.ಸಿ. ಇಂಡಿಯಾದ ಪ್ರತೀಕ್ ಜೈನ್ ಅಭಿಪ್ರಾಯ ಪಟ್ಟಿದ್ದಾರೆ.

ಪ್ರತಿದಿನ ದಾಖಲಾಗುತ್ತಿರುವ ಇ-ವೇ ಬಿಲ್‌ಗಳ ಸಂಖ್ಯೆ ಪರಿಗಣಿಸಿದಾಗ ಪೂರೈಕೆ ಜಾಲದಲ್ಲಿ ಪ್ರಗತಿಯಾಗುತ್ತಿರುವುದು ಕಂಡು ಬರುತ್ತದೆ. ಆದರೆ, ಆಮದಿನ ಪ್ರಮಾಣ ಇನ್ನೂ ಸಾಮಾನ್ಯವಾಗಿಲ್ಲ.

ಲಾಕ್‌ಡೌನ್ ಪ್ರಕ್ರಿಯೆ ಮತ್ತಷ್ಟು ಸಡಿಲವಾದಂತೆ ತೆರಿಗೆ ಸಂಗ್ರಹ ಮತ್ತಷ್ಟು ಸುಧಾರಣೆಯಾಗಲಿದೆ. ಕೈಗಾರಿಕೆಗಳು ಈ ಹಂತದಲ್ಲಿ ಜಿ.ಎಸ್.ಟಿ.ಯಲ್ಲಿ ಕೆಲ ವಿನಾಯಿತಿ ಕೇಳುವ ಸಾಧ್ಯತೆಯೂ ಇದೆ ಎಂದು ಜೈನ್ ಹೇಳಿದ್ದಾರೆ.

## ನ್ಯಾಯಾಂಗ ನಿಂದನೆ ಕಾಯ್ದೆ ಸಿಂಧುತ್ವ ಪ್ರಶ್ನಿಸಿ ಅರ್ಜಿ

ನವದೆಹಲಿ, ಆ. 1 – ನ್ಯಾಯಾಂಗವನ್ನು ಅವಹೇಳನ ಮಾಡಿದಾಗ ಶಿಕ್ಷೆಗೆ ಕಾರಣವಾಗುವ ಕಾನೂನು ಪ್ರಶ್ನಿಸಿ ಮಾಜಿ ಕೇಂದ್ರ ಸಚಿವ ಅರುಣ್ ಶೌರಿ, ಹಿರಿಯ ಪತ್ರಕರ್ತ ಎನ್. ರಾಮ್ ಹಾಗೂ ಕಾರ್ಯಕರ್ತ ವಕೀಲ ಪ್ರಶಾಂತ್ ಭೂಷಣ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ನ್ಯಾಯಾಂಗ ನಿಂದನೆ ಕಾಯ್ದೆ 1971ರ ಸೆಕ್ಷನ್ 2 (1) (ಸಿ) ಸಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಅರ್ಜಿ ದಾಖಲಿಸಲಾಗಿದೆ. ಅರ್ಜಿಯ ವಿಚಾರಣೆ ಮುಂದಿನ ವಾರ ನಡೆಯಲಿದೆ. ಈ ಕಾಯ್ದೆಯ ಅನ್ವಯ ನ್ಯಾಯಾಂಗದ ಘನತೆಗೆ ಕುಂದು ತಂದರೆ ಹಾಗೂ ಅವಹೇಳನ ಮಾಡಿದರೆ ಶಿಕ್ಷೆ ವಿಧಿಸಬಹುದಾಗಿದೆ. ಈ ಸೆಕ್ಷನ್‌ಗಳು ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## ಹೂಳು ತುಂಬಿದ್ದ ಚರಂಡಿ ಸ್ವಚ್ಛಗೊಳಿಸಿದ ಪೌರ ಕಾರ್ಮಿಕರು

ಮಲೇಬೆನ್ನೂರು, ಆ.1- ಪಟ್ಟಣದ ಮುಖ್ಯರಸ್ತೆ ಪಕ್ಕದ ಚರಂಡಿ ಹೂಳು ತುಂಬಿ ಕೊಂಡು ಮಳೆ ಬಂದ ಸಂದರ್ಭದಲ್ಲಿ ಚರಂಡಿ ನೀರು ಹೆದ್ದಾರಿ ತುಂಬೆಲ್ಲಾ ಹರಿಯುತ್ತಿತ್ತು. ಇದನ್ನು ಮನಗಂಡ ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್ ಅವರು, ಶನಿವಾರ ಬಕ್ರೀದ್ ರಜೆ ಇದ್ದರೂ ಪೌರ ಕಾರ್ಮಿಕರ ಮನವೊಲಿಸಿ, ಚರಂಡಿ ಹೂಳು ಸ್ವಚ್ಛಗೊಳಿಸಿ, ಗಮನ ಸೆಳೆದರು.

ಚರಂಡಿ ನಿರ್ಮಾಣ ಮಾಡಿದಾಗಿನಿಂದ ಒಮ್ಮೆಯೂ ಸ್ವಚ್ಛತೆ ಕಾಣದ ಚರಂಡಿ ಧರಣೇಂದ್ರಕುಮಾರ್ ಅವರ ಅವಧಿಯಲ್ಲಿ ಸ್ವಚ್ಛಗೊಳ್ಳುತ್ತಿವೆ ಎಂದು ಪುರಸಭೆ ಸದಸ್ಯರಾದ ಬಿ.ಸುರೇಶ್, ಎ.ಆರೀಫ್ ಅಲಿ ಮತ್ತು ಭೋವಿಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಪಡಿತರ ಸಂಖ್ಯೆ ನಮೂದಿಸಲು ಮನವಿ

ದಾವಣಗೆರೆ, ಆ.1- ರಾಜ್ಯ ಸರ್ಕಾರ ನಾಗರಿಕ ಸೌಲಭ್ಯಗಳ ನಿರ್ವಹಣೆಯ ವ್ಯವಸ್ಥೆಯನ್ನು ಉತ್ತಮಗೊಳಿಸಲು ಕುಟುಂಬ ಪಡಿತರ ಕಾರ್ಡ್ ಸಂಖ್ಯೆಯನ್ನು ಬೆ.ವಿ.ಕಂ. ನ ಅಂಕಿ ಅಂಶಗಳಲ್ಲಿ ನಮೂದಿಸಲು ನಿರ್ದೇಶನವನ್ನು ನೀಡಿದ್ದು, ಸದರಿ ಮಾಹಿತಿಯನ್ನು ಮಾಪಕ ಓದುಗರ ಮೂಲಕ ಸಂಗ್ರಹಿಸಿ ದಾಖಲಿಸಲು ಸೂಚಿಸಲಾಗಿದೆ. ನಗರ ಉಪವಿಭಾಗ-1, ಬೆ.ವಿ.ಕಂ. ದಾವಣಗೆರೆ ವ್ಯಾಪ್ತಿಯ ಗ್ರಾಹಕರು ತಮ್ಮ ಆವರಣದಲ್ಲಿರುವ ಮಾಪಕಗಳನ್ನು ಓದಲು ಬರುವ ಬೆಸ್ಕಾಂ ಮಾಪಕ ಓದುಗರಿಗೆ ಕುಟುಂಬ ಪಡಿತರ ಕಾರ್ಡ್‌ನ ಸಂಖ್ಯೆಯನ್ನು ಮಾಪಕ ಓದುವ ಯಂತ್ರದಲ್ಲಿ ನಮೂದಿಸಲು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಜಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

### ದೇಶದಲ್ಲಿ ಕೊರೊನಾದಿಂದ ಸಾವು ಸಂಖ್ಯೆ ಇಳಿಮುಖ

# ವೆಂಟಿಲೇಟರ್ ರಫ್ತಿಗೆ ಕೇಂದ್ರದ ಅನುಮತಿ

ನವದೆಹಲಿ, ಆ. 1 - ದೇಶೀಯವಾಗಿ ಉತ್ಪಾದಿಸುವ ವೆಂಟಿಲೇಟರ್‌ಗಳನ್ನು ರಫ್ತು ಮಾಡುವ ಆರೋಗ್ಯ ಸಚಿವಾಲಯದ ಪ್ರಸ್ತಾವನೆಗೆ ಉನ್ನತ ಹಂತದ ಸಚಿವರ ಸಮಿತಿ ಒಪ್ಪಿಗೆ ನೀಡಿದೆ.

ಭಾರತದಲ್ಲಿ ಕೊರೊನಾದಿಂದ ಸಾವನ್ನಪ್ಪುವವರ ಸಂಖ್ಯೆ ನಿರಂತರವಾಗಿ ಇಳಿಮುಖವಾಗಿ ಈಗ ಶೇ.2.15ಕ್ಕೆ ತಲುಪಿದೆ. ಸಕ್ರಿಯ ಸೋಂಕಿತರಲ್ಲಿ ವೆಂಟಿಲೇಟರ್ ಅಗತ್ಯವಿರುವವರ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಜುಲೈ 31ರಂದು ಸಕ್ರಿಯ ಸೋಂಕು ಪ್ರಕರಣಗಳಲ್ಲಿ ಶೇ.0.22ರಷ್ಟು ಜನ ಮಾತ್ರ ವೆಂಟಿಲೇಟರ್‌ನಲ್ಲಿದ್ದರು. ಸಚಿವರ ಸಮಿತಿಯ ನಿರ್ಧಾರವನ್ನು ವಿದೇಶಿ ವ್ಯಾಪಾರ ಪ್ರಧಾನ ನಿರ್ದೇಶನಾಲಯಕ್ಕೆ ಕಳಿಸಲಾಗಿದೆ. ದೇಶಿಯವಾಗಿ ಉತ್ಪಾದಿಸಲಾದ ವೆಂಟಿಲೇಟರ್ ರಫ್ತಿಗೆ ನಿರ್ದೇಶನಾಲಯ ನಂತರ ಕ್ರಮ ತೆಗೆದುಕೊಳ್ಳಲಿದೆ.

ರಫ್ತಿಗೆ ಅನುಮತಿ ನೀಡಿರುವ ಕಾರಣ ದೇಶೀಯ ವೆಂಟಿಲೇಟರ್‌ಗಳು ವಿದೇಶಗಳಲ್ಲಿ ಹೊಸ ಮಾರುಕಟ್ಟೆ ಪಡೆಯಲಿವೆ. ದೇಶೀಯ ವೆಂಟಿಲೇಟರ್ ಉತ್ಪಾದನಾ ಸಾಮರ್ಥ್ಯ ಗಣನೀಯವಾಗಿ ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೊರೊನಾ ವಿರುದ್ಧ ಹೋರಾಟ ನಡೆಸಬೇಕಿದ್ದ ಹಿನ್ನೆಲೆಯಲ್ಲಿ ಮಾರ್ಚ್ ತಿಂಗಳಲ್ಲಿ ವೆಂಟಿಲೇಟರ್ ರಫ್ತಿನ ಮೇಲೆ ನಿಷೇಧ ಹೇರಲಾಗಿತ್ತು. ಮಾರ್ಚ್ 24ರ ಆದೇಶದ ಮೂಲಕ ಎಲ್ಲಾ ರೀತಿಯ ವೆಂಟಿಲೇಟರ್‌ಗಳ ರಫ್ತಿನ ಮೇಲೆ ನಿರ್ಬಂಧ ಹೇರಲಾಗಿತ್ತು.

## ಚಿತ್ರದುರ್ಗ : ಕೊರೊನಾದಿಂದ ಚೇತರಿಸಿಕೊಂಡ 110 ವರ್ಷದ ಅಜ್ಜಿ

ಬೆಂಗಳೂರು, ಆ. 1 – ಚಿತ್ರದುರ್ಗದ 110 ವರ್ಷದ ಶತಾಯುಷಿ ಮಹಿಳೆಯೊಬ್ಬರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ.

ಪೊಲೀಸ್ ಕ್ವಾರ್ಟರ್ಸ್‌ನಲ್ಲಿರುವ ಸಿದ್ದಮ್ಮ ಅವರಿಗೆ ಕೊರೊನಾ ಇರುವುದು ಜುಲೈ 27ರಂದು ಪತ್ತೆಯಾಗಿತ್ತು. ಐದು ಮಕ್ಕಳು, 17 ಮೊಮ್ಮಕ್ಕಳು ಹಾಗೂ 22 ಮರಿ ಮೊಮ್ಮಕ್ಕಳನ್ನು ಹೊಂದಿರುವ ಸಿದ್ದಮ್ಮ ಕುಟುಂಬದ ಹಲವರಲ್ಲೂ ಸೋಂಕು ಕಾಣಿಸಿಕೊಂಡಿತ್ತು. ನಂತರ ಅವರನ್ನು ಚಿತ್ರದುರ್ಗದ ಕೋವಿಡ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಕೊರೊನಾದಿಂದ ಸಂಪೂರ್ಣ ಚೇತರಿಸಿಕೊಂಡಿದ್ದಾರೆ.

ದುರ್ಬಲರಾಗಿದ್ದ ಸಿದ್ದಮ್ಮ, ನಾಲ್ವರ ಸಹಾಯದೊಂದಿಗೆ ಆಸ್ಪತ್ರೆಯಿಂದ ಹೊರ ಬಂದಾಗ ವೈದ್ಯಕೀಯ ಸಿಬ್ಬಂದಿ ಹಾಗೂ ಆರೋಗ್ಯ ಕಾರ್ಯಕರ್ತರು ಅವರನ್ನು ಅಭಿನಂದಿಸಿದ್ದಾರೆ.

ಕೊರೊನಾ ಸೋಂಕು ಬಂದ ಕಾರಣಕ್ಕಾಗಿ ಹೆದರಿಕೆಯಾಗಿತ್ತೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಸಿದ್ದಮ್ಮ, ನಾನು ಯಾರಿಗೂ ಹೆದರುವುದಿಲ್ಲ ಎಂದಿದ್ದಾರೆ. ಆಸ್ಪತ್ರೆಯಲ್ಲಿ ನೀಡಲಾದ ಚಿಕಿತ್ಸೆ ಹಾಗೂ ಆಹಾರದ ಬಗ್ಗೆ ಖುಷಿಯಾಗಿದೆ ಎಂದೂ ಅವರು ಹೇಳಿದ್ದಾರೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಜಿಲ್ಲಾ ಸರ್ಜನ್ ಬಸವರಾಜು, ಹಿರಿಯ ಮಹಿಳೆ ಕೊರೊನಾದಿಂದ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆಯಾಗಿರುವುದು ನಮಗೆ ಹೆಮ್ಮೆ ಎಂದಿದ್ದಾರೆ.

ನನಗೆ ತಿಳಿದಿರುವ ಹಾಗೆ 110 ವರ್ಷದ ಮಹಿಳೆ ಕೊರೊನಾದಿಂದ ಚೇತರಿಸಿಕೊಂಡಿರುವುದು ದಾಖಲೆಯೇ ಆಗಿದೆ. ಅವರು ಪೊಲೀಸ್ ತಾಯಿಯಾದ ಕಾರಣ ಪೊಲೀಸ್ ಕ್ವಾರ್ಟರ್ಸ್‌ನಲ್ಲಿದ್ದರು ಎಂದಿದ್ದಾರೆ.

ಈ ಹಿಂದೆ ಇದೇ ಆಸ್ಪತ್ರೆಯಲ್ಲಿ 96 ವರ್ಷದ ಮಹಿಳೆ ಕೊರೊನಾದಿಂದ ಚೇತರಿಸಿಕೊಂಡಿದ್ದರು.

## ಸಚಿವ ಬಿ.ಸಿ. ಪಾಟೀಲ್, ಪತ್ನಿಗೆ ಕೊರೊನಾ



ಬೆಂಗಳೂರು, ಅ. 1 – ಕೃಷಿ ಸಚಿವ ಬಿ.ಸಿ. ಪಾಟೀಲ್ ಹಾಗೂ ಅವರ ಪತ್ನಿಗೆ ಕೊರೊನಾ ಸೋಂಕು ತಗುಲಿದ್ದು, ಅವರು ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ.

ಸಾಮಾಜಿಕ ಜಾಲತಾಣದ ಮೂಲಕ ಈ ಬಗ್ಗೆ ಹೇಳಿಕೆ ನೀಡಿರುವ ಪಾಟೀಲ್, ತಾವು ಹಾಗೂ ಪತ್ನಿ ವನಜಾ ಲಕ್ಷಣ ರಹಿತ ಸೋಂಕಿಗೆ ಗುರಿಯಾಗಿದ್ದಾರೆ. ಈ ಬಗ್ಗೆ ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ ಎಂದಿದ್ದಾರೆ.

ಉಭಯರು ಚೇತರಿಸಿಕೊಂಡು ಆದಷ್ಟು ಶೀಘ್ರದಲ್ಲೇ ಕೆಲಸಕ್ಕೆ ಮರಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ತಮ್ಮ ಅಳಿಯನಿಗೆ ವೈರಸ್ ಸೋಂಕು ಬಂದಿರುವ ಬಗ್ಗೆ ಸಚಿವ ಪಾಟೀಲ್ ಶುಕ್ರವಾರ ರಾತ್ರಿ ಟ್ವೀಟ್ ಮಾಡಿದ್ದರು.

ಇದಕ್ಕೂ ಮುಂಚೆ ಸಚಿವರಾದ ಆನಂದ್ ಸಿಂಗ್ ಹಾಗೂ ಸಿ.ಟಿ. ರವಿ ಅವರಲ್ಲೂ ಸೋಂಕು ಕಾಣಿಸಿಕೊಂಡಿತ್ತು.

## ದೇವಾಂಗ ಸಮಾಜದಿಂದ ನಾಳೆ ಹುಣ್ಣಿಮೆ

ದಾವಣಗೆರೆ, ಆ.1- ನಗರದ ಶ್ರೀ ಬನಶಂಕರಿ ದೇವಾಂಗ ಸಮಾಜ ಸಂಘದಿಂದ ನಾಡಿದ್ದು ದಿನಾಂಕ 3ರ ಸೋಮವಾರ ನೂಲುಹುಣ್ಣಿಮೆ ಅಂಗವಾಗಿ ಬೆಳಿಗ್ಗೆ 5.30 ಕ್ಕೆ ಶ್ರೀ ಬನಶಂಕರಿ ದೇವಿಗೆ ಅಭಿಷೇಕ, ಅಲಂಕಾರ ನಂತರ ಮಹಾಮಂಗಳಾರತಿ ನಡೆಯಲಿದೆ ಎಂದು ಸಮಾಜದ ಕಾರ್ಯದರ್ಶಿ ಪ್ರಕಾಶ್ ಎಂ. ಕಮಲಾಪುರ ತಿಳಿಸಿದ್ದಾರೆ.


### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥ ॥ ಶ್ರೀ ದಂಡಗುಂಡ ಬಸವೇಶ್ವರ ಪ್ರಸನ್ನ ॥
ದಾವಣಗೆರೆ ಸಿಟಿ ಜಾಲಿನಗರ, (ಸುರೇಶ್ ನಗರ) ವಾಸಿ, ಶ್ರೀ ದಿ॥ ಈರಪ್ಪ ತುಂಬಿಗಿ ಇವರ ಮಕ್ಕಳಾದ ದಿ॥ ಮಲ್ಲೇಶಪ್ಪ, ಶ್ರೀ ಟಿ.ವಿ ಲಕ್ಷ್ಮಪತಿ ತುಂಬಿಗಿ, ಶ್ರೀ ಇ. ಬಸವರಾಜಪ್ಪ ತುಂಬಿಗಿ (ಸೊಸೈಟಿ) ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 29-07-2020ನೇ ಬುಧವಾರ ಬೆಳಿಗ್ಗೆ 9-15ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಸಂಗಮ್ಮ ತುಂಬಿಗಿ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 02.08.2020ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಜಾಲಿನಗರ (ಸುರೇಶ್ ನಗರ) 1ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೊರಬೇಕಾಗಿ ವಿನಂತಿ.
ವಿಶೇಷ ಸೂಚನೆ : ದಿನಾಂಕ 6.8.2020ರಂದು ಹಮ್ಮಿಕೊಳ್ಳಲಾಗಿದ್ದ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 2.8.2020ರಂದು ಮಧ್ಯಾಹ್ನ 12 ಕ್ಕೆ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು : ಬಂಧು-ಮಿತ್ರರು.
ಮೊ. 9844969721 9448366027





ಮತ್ತೆ ಹೋಗೋಣ 'ಪ್ರಕೃತಿಯ ಕಡೆಗೆ'
ಆರೋಗ್ಯವೇ ಭಾಗ್ಯ, ಆರೋಗ್ಯದ ಮುಂದೆ ಯಾವುದೂ ದೊಡ್ಡದಲ್ಲ.
ನಮ್ಮಲ್ಲಿ ಕೋಲ್ಡ್ ಆಯಿಲ್ ಪ್ರೆಸ್ ಯಂತ್ರ (Domestic Oil Extract Machine), ಸ್ವದೇಶಿ ಗೃಹ ಬಳಕೆ ವಸ್ತುಗಳು, ಗೌ ಜನನಿ, ಸದ್ಗುರು, ಹಿಮಾಲಯ, ಆರ್ಗೋ ಶಕ್ತಿ, ಹಿಮಾಲಯನ್ ಪಿಂಕ್ ಸಾಲ್ಟ್, ಪತಂಜಲಿ ಉತ್ಪನ್ನಗಳು, ಆರ್ಗ್ಯಾನಿಕ್ ಉತ್ಪನ್ನಗಳು ಹಾಗೂ ಸಿರಿಧಾನ್ಯಗಳು ಸಿಗುತ್ತವೆ.
ಸಾವಯವ ಏಕೆ ದುಬಾರಿಯಾಗಿದೆ ಎಂದು ಕೇಳಬೇಡಿ... ಆದರೆ ಜಂಕ್ ಫುಡ್ ಏಕೆ ಅಗ್ಗವಾಗಿದೆ ಎಂದು ಕೇಳಿ !
ವೋಕಲ್ ಫಾರ್ ಲೋಕಲ್...ಸ್ಥಳೀಯರಿಗೆ ಮನ್ನಣೆ...
ದಾವಣಗೆರೆಯಲ್ಲಿ ಮೊದಲನೆಯ ಬಾರಿಗೆ ಒಂದೇ ಸೂರಿನಡಿ ಭಾರತೀಯ ಗೃಹಬಳಕೆ ಉತ್ಪನ್ನಗಳನ್ನು ಕೊಂಡುಕೊಳ್ಳುವ ಸುವರ್ಣ ಅವಕಾಶ. ನೀವು ಪ್ಲೇ ಸ್ಟೋರಿನಲ್ಲಿ ಇರುವ VYAPYA ಅನ್ನುವ ಆ್ಯಪ್ ಮುಖಾಂತರ ಕೂಡಾ ಆರ್ಡರ್ ಮಾಡಬಹುದು.
VYAPYA
ಡೋರ್ ಡೆಲಿವರಿ ಸೌಲಭ್ಯವಿದೆ:
Lat-long- 14.461445,75.925911
Customer care : 96200 68555
swadeshiandorganics@gmail.com
ವಿಳಾಸ: ಸ್ವದೇಶಿ ಮತ್ತು ಆರ್ಗ್ಯಾನಿಕ್ಸ್ ಸೂಪರ್ ಮಾರ್ಕೆಟ್
ಕಾವೇರಮ್ಮ ಸ್ಕೂಲ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.


## ಉತ್ತರ ಅಮೆರಿಕದ ದೇವಾಲಯಗಳಲ್ಲಿ ಪೂಜೆ

ವಾಷಿಂಗ್ಟನ್, ಆ. 1 – ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರುವ ಸಂದರ್ಭದಲ್ಲಿ ಉತ್ತರ ಅಮೆರಿಕದ ಹಿಂದೂ ದೇವಾಲಯಗಳು ಆನ್‌ಲೈನ್ ಮೂಲಕ ರಾಷ್ಟ್ರೀಯ ಪ್ರಾರ್ಥನೆ ಸಲ್ಲಿಸಲು ನಿರ್ಧರಿಸಿವೆ. ಈ ಬಗ್ಗೆ ಹಿಂದೂ ಮಂದಿರ ಎಕ್ಸಿಕ್ಯೂಟಿವ್ ಕಾನ್ಫರೆನ್ಸ್ ಹಾಗೂ ಹಿಂದೂ ಮಂದಿರ ಪ್ರೀಸ್ಟ್ಸ್ ಕಾನ್ಫರೆನ್ಸ್‌ಗಳು ಹೇಳಿಕೆ ನೀಡಿದ್ದು, ಅಯೋಧ್ಯೆ ರಾಮ ಮಂದಿರಕ್ಕಾಗಿ ಅಮೆರಿಕದಾದ್ಯಂತ ಸಂಭ್ರಮ ಉಂಟಾಗಿದೆ ಎಂದು ತಿಳಿಸಿವೆ. ಈ ಸುಸಂದರ್ಭದಲ್ಲಿ ಅಮೆರಿಕ, ಕೆನಡಾ ಹಾಗೂ ಕೆರೆಬಿಯನ್ ದ್ವೀಪಗಳಲ್ಲಿರುವ ದೇವಾಲಯಗಳು ಶ್ರೀ ರಾಮ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಿವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

## 6ರಂದು ನಗರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ದಾವಣಗೆರೆ, ಆ.1 - ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಭೈರತಿ ಬಸವರಾಜ್ ಅವರು ಇದೇ ದಿನಾಂಕ 6 ಮತ್ತು 7 ರಂದು ದಾವಣಗೆರೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.ಆಗಸ್ಟ್ 6 ರ ಮಧ್ಯಾಹ್ನ 2.30 ಕ್ಕೆ ಬೆಂಗಳೂರಿನಿಂದ ಹೊರಟು ಸಂಜೆ 5.30 ಕ್ಕೆ ದಾವಣಗೆರೆಗೆ ಆಗಮಿಸಿ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ಆಗಸ್ಟ್ 7 ರ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಲಾಗಿರುವ ಕೆ.ಡಿ.ಪಿ ಸಭೆಯಲ್ಲಿ ಪಾಲ್ಗೊಳ್ಳುವರು. ಸಂಜೆ 4 ಗಂಟೆಗೆ ದಾವಣಗೆರೆಯಿಂದ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.




• Tulsian Plaza, #85, P B Road Near Aruna Theatre, Davangere. Tel: 08192-237364
• 1663/3, Ground Floor, Near Bapuji Samudaya Bhavan, Shamanur Road, Davangere. Tel: 9448619522
T&C Apply: • There is no purchase limit • Fabric must be purchased from the same store • This offer cannot be clubbed with any other offer • Offer valid till 15th August'2020





ಈ ಕೆಳಗಿನ ಹಾಗು ಪ್ರಖ್ಯಾತ ಔಷಧಿ ಅಂಗಡಿಗಳಲ್ಲಿ ದೊರೆಯುತ್ತವೆ

| | | |
|---|---|---|
| ಆರೋಗ್ಯ ಚಿಕಿತ್ಸಾಲಯ<br>ವಿಶ್ವೇಶ್ವರಯ್ಯ ಪಾರ್ಕ್ ನ ಹಿಂದೆ<br>ದಾವಣಗೆರೆ<br>ಫೋನ್: 94813 09077 | ಮಂಜುಳ ಮೆಡಿಕಲ್ಸ್<br>2 ನೇ ಮೇನ್, ಮುನ್ಸಿಪಲ್ ಸ್ಟೇಡಿಯಂ<br>ದಾವಣಗೆರೆ<br>ಫೋನ್: 251786, 99003 39530 | ಮೆಡಿಕಲ್ ಎಂಪೋರಿಯಂ<br>ಮಂಡಿಪೇಟೆ<br>ದಾವಣಗೆರೆ<br>ಫೋನ್: 272627, 99167 71043 |

neo PRAKRUTI PHARMACEUTICALS PVT LTD
Living healthy
Sagar Complex, Maruti Temple Road, Karwar - 581301
Tel: 08382 22500 | info@neoprakruti.com
www.neoprakruti.com



### ಕಾಂ. ರಿತ್ತಿ ಮಹಬೂಬ್ ಸಾಬ್ ನಿಧನ



ದಾವಣಗೆರೆ ಸಿಟಿ ಕೆ.ಟಿ.ಜೆ. ನಗರ, 3ನೇ ಮೇನ್, 8ನೇ ಕ್ರಾಸ್ ವಾಸಿ, ಪಿಂಜಾರ್ ಸಂಘದ ರಾಜ್ಯ ಸಮಿತಿ ಸದಸ್ಯರಾಗಿದ್ದ
**ಕಾಂ. ರಿತ್ತಿ ಮಹಬೂಬ್ ಸಾಬ್**
(72 ವರ್ಷ) ಅವರು ದಿನಾಂಕ 01.08.2020ರ ಶನಿವಾರ ಬೆಳಗಿನ ಜಾವ ನಿಧನರಾದರು. ಇಬ್ಬರು ಪತ್ನಿಯರು, ನಾಲ್ವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.08.2020ರ ಶನಿವಾರ ಸಂಜೆ 5.45 ಕ್ಕೆ ನಗರದ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಯಿತು.
ಇಂತಿ ದುಃಖತಪ್ತರು,
ಮೊ. : 96636 53895


JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte